ಪ್ರಬುದ್ಧ ಕರ್ಣಾಟಕ

ಸಂಪುಟ ೩೪—ಸಂಚಿಕೆ ೧

೧೩೧

ನಂದನ ಸಂವತ್ಸರ

ಚೈತ್ರ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೨

ವಿಷಯ	ಪುಟ

ಪ್ರಬುದ್ಧ ಕರ್ಣಾಟಕ

ನಂದನ ಸಂವತ್ಸರ	೧೩೧	ಚೈತ್ರ ಸಂಚಿಕೆ

ಚಿರಂತನ ದಾಹ

೧

ದಿನ ದಿನವು ಮೂಡಣದ ಬಾನಕರೆಯಂಚಿನಲಿ
ಚೆಂಬೆಳಕು ಉಬ್ಬರಂಬರಿಯುತಿಹುದು,
ನೂರು ಕಾರಂಜಿಗಳು ತೆಕ್ಕನೆಯೆ ಪುಟಿದಂತೆ
ಲೋಕ ಲೋಕಂಗಳನು ತೊಳೆಯುತಿಹುದು.

೨

ಬೊಗಸೆಗಂಗಳ ತೆರೆದು ಮೊಗೆ ಮೊಗೆದು ಕುಡಿದರೂ
ಈ ಪುರಾತನ ದಾಹ ತೀರದಲ್ಲ!
ಏನೊ ಅಸಮಾಧಾನ ಹೃದಯಾಂತರಾಳದಲಿ
ಬಾಯ್ದೆರೆದು ಹೀರುತಿರೆ ತೃಪ್ತಿಯಿಲ್ಲ!

೩

ಬಣ್ಣ ಬಣ್ಣದ ಬೆಳಕ ಕಡಲಿನೊಡಲೊಳಗಲ್ಲಿ
ಕಲ್ಲುಸಕ್ಕರೆಯಂತೆ ಕರಗಿಬಿಡಲೆ?
ಇಲ್ಲದಿರೆ ಎಲ್ಲವನು ಒಂದೆ ಬೊಗಸೆಯೊಳಾಂತು
ಆ ಅಗಸ್ತ್ಯನ ತೆರದಿ ಕುಡಿದುಬಿಡಲೆ?

೪

ಹೊಗೆನಟ್ಟು ಹೋಗಿರುವ ಮನದ ಮನೆಗೋಡೆಗಳು
ಸುಣ್ಣ ಬಣ್ಣವನೆಂದು ಕಾಣಬಹುದು?
ಇಲ್ಲಣವು ಜೋತಿರುವ ಜೇಡಬಲೆ ನೂತಿರುವ
ಬೆಳಕಿಂಡಿಯಲಿ ಬೆಳಕದೆಂತು ಬಹುದು?

೫

ಕಿಟಕಿಗಳನರೆತೆರೆದು ಕಟಕಿಯಾಡುವ ಗಾಳಿ
ಮಾಡು ನಿನ್ನಯ ದಾಳಿ ಇಂದು ಇಂದೇ!
ಜಗದೆಲ್ಲ ಪುಷ್ಪಗಳ ಪೈರುಗಳ ಪರಿಮಳದ
ಪನ್ನೀರುಗಳನೆರೆದು ಮೀಯಿಸಿಂದೇ!

೬

ಪಂಚಭೂತಗಳೆಲ್ಲ ಮಾನವನ ದೇಹದಲಿ
ಹೊಂಚು ಹಾಕುತ ದಾರಿ ಕಾಯುತಿಹವು,
ಕಿಂಚಿತಾದರು ಕರುಣೆ ಕೊನರೊಡೆದು ಬಾರದಿರೆ
ಈ ಪ್ರಪಂಚವೆ ಚಿತೆಯನೇರಲಿಹುದು!

೭

ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ!
ಬಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ!

ಚೆನ್ನವೀರ ಕಣವಿ.

ಕವಿಕೃತಿಯ ಅನನ್ಯಪರತಂತ್ರತೆ

"ನಿಯತಿಕೃತನಿಯಮರಹಿತಾಂ ಹ್ಲಾದೈಕಮಯೀಮನನ್ಯಪರತಂತ್ರಾಂ
ನವರಸರುಚಿರಾಂ ನಿರ್ಮಿತಿಮಾದಧತೀ ಭಾರತೀ ಕವೇರ್ಜಯತಿ"

—ಕಾವ್ಯಪ್ರಕಾಶ

ಆಂಗ್ಲೇಯ ಸಾಹಿತ್ಯ ವಿಮರ್ಶಕರಲ್ಲಿ ಹಿರಿಯ ಹೆಸರಾದ ಎ. ಸಿ. ಬ್ರಾಡ್ಲೆಯವರು ಕವಿಕೃತಿಯ ಸ್ವರೂಪವನ್ನು ಕುರಿತು ಚರ್ಚಿಸುತ್ತಾ ಹೀಗೆ ಹೇಳುತ್ತಾರೆ: 'Its nature is to be not a part, nor yet a copy of the real world (as we commonly understand that phrase) but to be a real world by itself independent, complete, autonomous.'[1] ಎಂದರೆ ಅವರ ಅಭಿಪ್ರಾಯದಂತೆ ಕವಿಕೃತಿ ವಾಸ್ತವವೆಂದು ನಮ್ಮಿಂದ ಪರಿಗಣಿತವಾಗಿ ಸತ್ಯವೆಂಬ ವಿಶೇಷಣದಿಂದ ಕರೆಯಿಸಿಕೊಳ್ಳುವ ಬಾಹ್ಯಜಗತ್ತಿನ ಒಂದು ಭಾಗವೂ ಅಲ್ಲ, ಅದರ ಒಂದು ಪ್ರತಿ ಅಥವಾ ನಕಲೂ ಅಲ್ಲ; ಏಕೆಂದರೆ ಅದು ತನಗೆ ತಾನೆ ಒಂದು ಲೋಕ; ಅನ್ಯಾಶ್ರಯ ನಿರಪೇಕ್ಷವಾದದ್ದು ; ಸ್ವಸಂಪೂರ್ಣವಾದದ್ದು ; ಸ್ವತಂತ್ರವಾದದ್ದು.

ಸೌಂದರ್ಯತತ್ತ್ವಸಮಾಲೋಚಕರಾದ ಇನ್ನೊಬ್ಬ ಆಂಗ್ಲೇಯ ವಿದ್ವಾಂಸರು ಎಸ್. ಅಲೆಗ್ಸಾಂಡರ್ ಎಂಬುವರು ಕಲಾಪ್ರಪಂಚದ ಸ್ವರೂಪವನ್ನು ಕುರಿತು ಹೀಗೆ ಬರೆಯುತ್ತಾರೆ: "We create an autonomous world, a blending of the physical with ourselves, and therefore a new reality within the so-called real world."[2] ಎಂದರೆ ಇವರ ಅಭಿಪ್ರಾಯದಂತೆ ಕಲಾಜಗತ್ತು, ಕಲಾಸೃಷ್ಟಿ, ಸಂಪೂರ್ಣವಾಗಿ 'independent' ಅಥವಾ ಅನ್ಯಾಧಾರದೂರವಾದದ್ದಲ್ಲ. ನಾವು (Ourselves) ಮತ್ತು ಲೋಕ (Physical) ಎರಡರ ಸಂಯೋಗದಿಂದ ಅದು ಹುಟ್ಟುತ್ತದೆ. ಸತ್ಯವೆಂದು ನಾವು ವಿಶೇಷಿಸುವ ಬಾಹ್ಯಜಗತ್ತಿನೊಳಗೆ ಅದೊಂದು ಹೊಸ ಸತ್ಯವಾಗುತ್ತದೆ; ಅಥವಾ ಹೊಸ ಸತ್ಯದ ಒಂದು ಲೋಕವಾಗುತ್ತದೆ.

ಸಾಹಿತ್ಯವಿಮರ್ಶೆಯ ಮೂಲತತ್ತ್ವಗಳನ್ನು ನವೀನ ವೈಜ್ಞಾನಿಕ ವಿಧಾನದಿಂದ ಪರೀಕ್ಷಿಸುವ ಮತ್ತು ಪ್ರಾಯೋಗಿಕವಾಗಿ ಸಮೀಕ್ಷಿಸುವ ಪ್ರಯತ್ನ ನಡಸಿರುವ

---

[1] "Oxford Lectures on Poetry" ಎಂಬ ಗ್ರಂಥದ "Poetry for Poetry's Sake" ಎಂಬ ಪ್ರಬಂಧದಲ್ಲಿ. [2] "Beauty and Other Forms of Value" ಎಂಬ ಗ್ರಂಥದಲ್ಲಿ.

ಮತ್ತೊಬ್ಬ ವಿಮರ್ಶಕರು[3] ಬ್ರಾಡ್ಲೆಯವರ ಮತವನ್ನು ಚಿಕಿತ್ಸೆಗೆ ಗುರಿಮಾಡಿ ಅದನ್ನು ಖಂಡಿಸಿದ್ದಾರೆ: "This doctrine insists upon a severance between poetry and what, in opposition, may be called life; a complete severance, allowing however, as Dr. Bradley goes on to insist—an 'underground' connection. But this 'underground' connection is all-important. Whatever there is in the poetic experience has come through it. The world of poetry has in no sense any different reality from the rest of the world and it has no special laws and no other-worldly peculiarities. It is made up of experiences of exactly the same kinds as those that come to us in other ways.' ಕಾವ್ಯಕ್ಕೂ ಜೀವನಕ್ಕೂ ಭಿನ್ನತೆಯನ್ನು ಕಲ್ಪಿಸುವುದಾಗಲಿ, ಒಂದಕ್ಕೊಂದನ್ನು ಎದುರು ಮಾಡುವುದಾಗಲಿ ಬಹುಮಟ್ಟಿಗೆ ಲೋಕಾಯತ್ತವಾಗಿರುವ ಈ ದೃಷ್ಟಿಗೆ ಸಕಾರಣವಾಗಿ ತೋರುವುದಿಲ್ಲ. ಲೋಕಾನುಭವಕ್ಕೂ ಕಾವ್ಯಾನುಭವಕ್ಕೂ ಅಂತಹ ಸ್ವರೂಪವ್ಯತ್ಯಾಸವೇನೂ ಇಲ್ಲ. ಕಾವ್ಯಾನುಭವದಲ್ಲಿ ಏನಿದ್ದರೂ ಅದೆಲ್ಲ ಲೋಕಾನುಭವದಿಂದಲೇ ಬಂದದ್ದು. ಕಾವ್ಯಪ್ರಪಂಚದ ಸತ್ಯತೆ ವಾಸ್ತವಜಗತ್ತಿನ ಸತ್ಯದಿಂದ ಯಾವ ಅರ್ಥದಲ್ಲಿಯೂ ಪ್ರಭಿನ್ನವಾದುದಲ್ಲ. ಕಾವ್ಯಜಗತ್ತಿಗೇ ವಿಶೇಷವಾದ ಯಾವ ನಿಯಮಗಳೂ ಇಲ್ಲ. ನಿಯತಿಕೃತವಾದ ನಿಯಮಗಳಲ್ಲದೆ ಅನ್ಯ ಪ್ರಕಾರದ ನಿಯಮಗಳಾವುವೂ ಅಲ್ಲಿಲ್ಲ. ಎಲ್ಲ ಕಾವ್ಯಾನುಭವಗಳೂ ಲೋಕಾನುಭವಗಳ ಜಾತಿಗೇ ಸೇರುತ್ತವೆ; ಸಮಲಕ್ಷಣವಾಗಿರುತ್ತವೆ. ಆ ಅನುಭವಕ್ಕೆ ರಸಾನುಭವ ಎಂದು ಹೆಸರಿಟ್ಟಮಾತ್ರಕ್ಕೆ ಅದರ ಸ್ವರೂಪ ಬದಲಾಯಿಸುವುದಿಲ್ಲ. ಆದ್ದರಿಂದ ರಸಾನುಭವಕ್ಕೆ ಅಲೌಕಿಕತೆಯನ್ನು ಆರೋಪಿಸುವುದರಲ್ಲಿ ಸ್ವಲ್ಪವೂ ಅರ್ಥವಿಲ್ಲ.

ಒಂದು ದೃಷ್ಟಿಗೆ ಕಾವ್ಯಲೋಕ ತನಗೆ ತಾನೆ ಸ್ವತಂತ್ರವಾದದ್ದು; ಸಂಪೂರ್ಣವಾಗಿ ಲೋಕಭಿನ್ನವಾದದ್ದು. ಮತ್ತೊಂದು ದೃಷ್ಟಿ ಅದಕ್ಕೆ ವಿರುದ್ಧವಾಗಿ ನಿಂತು ಕಾವ್ಯಲೋಕಕ್ಕೂ ಲೋಕಕ್ಕೂ ಯಾವ ಪ್ರಭಿನ್ನತೆಯೂ ಇಲ್ಲ ಎಂದು ವಾದಿಸುತ್ತದೆ. ಒಂದು ದೃಷ್ಟಿ ಕಲೆಯ ಅನುಭವವನ್ನು ಲೋಕದ ಅನುಭವಕ್ಕೆ ಭಿನ್ನವಾದ ಸ್ವರೂಪವುಳ್ಳ ಅನುಭವವೆಂದು ಸಾರಿ, ಅದಕ್ಕೆ 'ರಸಾನುಭವ' ಎಂದು ಹೆಸರಿಡುತ್ತದೆ.[4]

---

[3] I. A. Richards—'Principles of Literary Criticism.'

[4] To appreciate a work of art we need bring with us nothing from life, no knowledge of its ideas and affairs, no familiarity with its emotions." ಕ್ಲೈವ್ ಬೆಲ್ (Clive Bell) ಎಂಬ ವಿಮರ್ಶಕರ ಈ ವಾದದಲ್ಲಿರುವ ಅತಿರೇಕ ಆ ದೃಷ್ಟಿಯ ಒಂದು ತುತ್ತತುದಿ ಎಂದು ಹೇಳಬಹುದು.

ವಿರುದ್ಧ ದೃಷ್ಟಿ ಆ ಎರಡು ಅನುಭವಗಳಿಗೂ ಯಾವ ಪ್ರಭೇದವೂ ಇಲ್ಲ ಎಂದು ವಾದಿಸಿ, ಕಾವ್ಯಾನುಭವವೂ ಸಂಪೂರ್ಣವಾಗಿ ಲೌಕಿಕವೇ ಎಂಬ ಸಿದ್ಧಾಂತಕ್ಕೆ ಬರುತ್ತದೆ. ಇವೆರಡಕ್ಕೂ ನಡುವಣ ದೃಷ್ಟಿ ಕಾವ್ಯಲೋಕವೂ ಈ ಲೋಕಸತ್ಯದಿಂದಲೆ ಹೊಮ್ಮಿ ಈ ಲೋಕಸತ್ಯದ ಅಂತರದಲ್ಲಿಯೆ ಇರುವ ಒಂದು ಅಂಶಸತ್ಯ ಎನ್ನುತ್ತದೆ.

ಈ ವಿಚಾರವಾಗಿ ಭಾರತೀಯ ಕಾವ್ಯಮೀಮಾಂಸೆಯೂ ಅನೇಕ ಶತಮಾನಗಳ ಹಿಂದೆಯೆ ತನ್ನ ಮತವನ್ನು ಸೂಚಿಸಿದೆ. ಅದರ ಸೂತ್ರಪ್ರಾಯವಾದ ರೀತಿ, ಮೀಮಾಂಸೆಯನ್ನೂ ಛಂದೋಬದ್ಧವಾಗಿ ಕಾವ್ಯಪ್ರಾಯವಾಗಿ ಮಂಡಿಸುವ ಪದ್ಧತಿ, ಭಿನ್ನ ಭಿನ್ನ ವ್ಯಾಖ್ಯಾನಗಳಿಗೆ ಅವಕಾಶಕೊಡುವಂತೆ ಫಲವತ್ತಾಗಿದೆ. ಕಾವ್ಯ ಮತ್ತು ರಸಾನುಭವ ಇವುಗಳ ಲಕ್ಷಣ ಮತ್ತು ಸ್ವರೂಪಗಳ ವಿಚಾರವಾದ ಬರವಣಿಗೆಗಳನ್ನು ಓದುವಾಗ ನಾವು ಸಂಧಿಸುವ ಈ ಪದ ಪದಗುಂಫನಗಳನ್ನು ಗಮನಿಸಬಹುದು: 'ನಿಯತಿಕೃತನಿಯಮರಹಿತ', 'ಅನನ್ಯಪರತಂತ್ರ', 'ಅಲೌಕಿಕ', 'ಲೋಕಾತಿಶಯ', 'ಲೋಕೋತ್ತರ', 'ಲೋಕಾತಿಕ್ರಾಂತ' ಇತ್ಯಾದಿ.

ಕಾವ್ಯಕ್ಕೂ ಲೋಕಕ್ಕೂ, ಕಾವ್ಯಾನುಭವ ಅಥವಾ ರಸಾನುಭವಕ್ಕೂ ಲೋಕಾನುಭವಕ್ಕೂ ಇರುವ ಸಂಬಂಧದ ಲಕ್ಷಣಗಳನ್ನು ಮತ್ತು ಸ್ವರೂಪವನ್ನು ಅರಿಯಲು ಈ ಮೇಲಣ ಪದಗಳು ಸೂಚಿಸುವ ತತ್ತ್ವದಿಂದ ನಮಗೇನಾದರೂ ಸಹಾಯ ಒದಗುತ್ತದೆಯೆ? ಅದರಲ್ಲಿಯೂ 'ಅನನ್ಯಪರತಂತ್ರ' ಎಂಬ ಪದಗುಂಫನದ ತತ್ತ್ವದೀಪ್ತಿಯಿಂದ ಈ ಸಮಸ್ಯೆ ಹೇಗೆ ಪರಿಹಾರವಾಗುತ್ತದೆ ಎಂಬುದನ್ನು ಸಮಾಲೋಚಿಸುವುದೆ ಈ ಲೇಖನದ ಮುಖ್ಯ ಲಕ್ಷ್ಯ.

'ಅನನ್ಯಪರತಂತ್ರ' ಎಂದರೇನು? ಕವಿಕೃತಿ ಹೇಗೆ 'ಅನನ್ಯಪರತಂತ್ರ' ವಾಗುತ್ತದೆ?

'ಸ್ವತಂತ್ರ', 'ಪರತಂತ್ರ', 'ಅನ್ಯಪರತಂತ್ರ', 'ಅನನ್ಯಪರತಂತ್ರ'—ಈ ಪದಗಳ ಅರ್ಥವೇನೆಂಬುದನ್ನು ಪರಿಶೀಲಿಸಿ, ಅದರಲ್ಲಿ ಯಾವುದು ಕವಿಕೃತಿಯ ಸ್ವರೂಪ ಲಕ್ಷಣಗಳನ್ನು ತಿಳಿಸುವುದರಲ್ಲಿ ಕೃತಕೃತ್ಯವಾಗುತ್ತದೆ, ನೋಡೋಣ.

ಸ್ವತಂತ್ರ ಎಂದರೆ ತನಗೆ ತಾನೆ ತಂತ್ರ[5]ವಾದದ್ದು. ತಂತ್ರ ಎಂದರೆ ಯಾವ ವಿಧಾನವನ್ನು ಅನುಸರಿಸಿದರೆ ಇಚ್ಛೆ ಕ್ರಿಯೆಯಾಗುತ್ತದೆಯೋ ಆ ವಿಧಾನ ಅಥವಾ ಆ ವಿಧಾನದ ಜ್ಞಾನ ಅಥವಾ ಆ ವಿಧಾನದ ಶಕ್ತಿಜ್ಞಾನ. ಸಾಧನೆಯ ಒಂದು ಕ್ರಮ ಅಥವಾ ಉಪಾಯ ಎಂದೂ ಅರ್ಥವಾಗುತ್ತದೆ. ಸ್ವತಂತ್ರ ಎಂದರೆ ಇಚ್ಛಾ

[5] 'ವಿಭೂತಿ ಪೂಜೆ' ಎಂಬ ಗ್ರಂಥದಲ್ಲಿ 'ನವಭಾರತಕ್ಕೆ ಸ್ವಾಮಿ ವಿವೇಕಾನಂದರ ಸಂದೇಶ' ಎಂಬ ಪ್ರಬಂಧವನ್ನು ನೋಡಿ.

ಸಾಧನೆಯ ಆ ಕ್ರಮ ಅಥವಾ ಉಪಾಯ ಅಥವಾ ವಿಧಾನ ಅಸ್ವೇಚ್ಛೆಯದಾಗಿ, ಆಜ್ಞಾಸ್ವರೂಪದ್ದಾಗಿ, ಅನ್ಯಾಶ್ರಯ ಸಾಪೇಕ್ಷಣೀಯವಾಗಿ, ಬಲಾತ್ಕಾರರೂಪದ್ದಾಗಿ, ಅವಶವಾಗಿ ತಾನು ಮಾಡತಕ್ಕದ್ದಲ್ಲ; ಸ್ವವಶವಾಗಿ, ಸ್ವೇಚ್ಛವಾಗಿ, ಸ್ವಸಂತೋಷಕಾರಣೋದ್ದೇಶ ಪ್ರಯೋಜನದ್ದಾಗಿ, ಅನ್ಯಾಶ್ರಯ ನಿರಪೇಕ್ಷಣೀಯವಾಗಿ ತನಗೆ ತಾನೆ ಕೈಕೊಳ್ಳುವ ತಂತ್ರವುಳ್ಳದ್ದು. ಈ ಅರ್ಥದಲ್ಲಿ ಕವಿಕೃತಿಯನ್ನು ಸ್ವತಂತ್ರ ಎಂದು ವರ್ಣಿಸುವಹಾಗಿಲ್ಲ. ಏಕೆಂದರೆ ಈ ಅರ್ಥದಲ್ಲಿ ಕವಿಯೇ 'ಸ್ವತಂತ್ರ'ನಲ್ಲ. ಇನ್ನು ಅವನ ಕೃತಿಗೆಲ್ಲಿಂದ ಬಂದೀತು ಈ ಸ್ವಾತಂತ್ರ್ಯ? ಅಲ್ಲದೆ ಕಲಾಕೃತಿ ಲೋಕವಸ್ತು ಲೋಕಾನುಭವ ಲೋಕಭಾವ ಇತ್ಯಾದಿಗಳನ್ನೆಲ್ಲ ತನಗೆ ಬಂಡವಾಳವಾಗಿ ಮೂಲಾಧಾರವಾಗಿ ಇಟ್ಟುಕೊಳ್ಳದೆ ಗತಿಯಿಲ್ಲ. ಅನೇಕ ಕವಿಕೃತಿಗಳು ನೂರಕ್ಕೆ ನೂರು ಪಾಲೂ ಲೋಕಕ್ಕೆ ಋಣಿಗಳಾಗಿರುತ್ತವೆ. ಎಲ್ಲಿಯೋ ಅತ್ಯತ್ಯಪೂರ್ವವಾಗಿ ಯಾವನಾದರೊಬ್ಬ ಕವಿ ಯೋಗಿಯೂ ಆಗಿ ಅನ್ಯಲೋಕಾನುಭವಗಳನ್ನು ಪಡೆದಿದ್ದರೂ ಅವನ ಮಾನುಷವಾದ ಕಲ್ಪನೆ ಅವುಗಳನ್ನು ಗ್ರಹಿಸುವಾಗಲೆ ಅವುಗಳಿಗೆ ಅನಿವಾರ್ಯವಾಗಿ ಲೋಕತ್ವವನ್ನು ಆರೋಪಿಸಿ, ಲೋಕಧರ್ಮಿಯಾಗಿ, ಪ್ರತಿಮಾವಿಧಾನದಿಂದ ಅವುಗಳಿಗೆ ರೂಪಧಾರಣೆ ಮಾಡಿಸುವುದರಿಂದ 'ಕೃತಿ'ಯಾಗುವಾಗಲೆ ತನ್ನ 'ಸ್ವತಂತ್ರತೆ'ಯನ್ನೂ ಬಿಟ್ಟುಕೊಡಲೇ ಬೇಕಾಗುತ್ತದೆ. ಆದ್ದರಿಂದ ಯಾವ ದೃಷ್ಟಿಯಿಂದ ಪರಿಶೀಲಿಸಿದರೂ ಕವಿಕೃತಿ ಈ ಅರ್ಥದಲ್ಲಿ 'ಸ್ವತಂತ್ರ' ಎಂಬ ವಿಶೇಷಣಕ್ಕೆ ಅರ್ಹವಾಗಲಾರದು. ಬಹುಶಃ ಈ ಅರ್ಥದಲ್ಲಿ ಸರ್ವೇಶ್ವರನೊಬ್ಬನಿಗೆ ಹೊರತು ಇನ್ನಾರಿಗೂ 'ಸ್ವತಂತ್ರ' ಎಂಬ ಬಿರುದು ಸಲ್ಲುವದಿಲ್ಲ.

ಹಾಗಾದರೆ 'ಕವಿಕೃತಿ'ಯನ್ನು 'ಪರತಂತ್ರ' ಎಂಬ ವಿಶೇಷಣದಿಂದ ಕರೆಯಬಹುದೆ? ಕೆಲವು ಕಾರಣಗಳಿಗಾಗಿ ಹಾಗೆ ಕರೆಯಬಹುದಾಗಿ ತೋರಿದರೂ ಅದು ಸಂಪೂರ್ಣವಾಗಿ 'ಪರತಂತ್ರ'ವಲ್ಲ. ಲೋಕಕ್ಕೂ ಲೋಕಾನುಭವಕ್ಕೂ ಲೋಕವಸ್ತುವಿಗೂ ಅದು ಋಣಿ ಎನ್ನುವುದರಿಂದ ಹಾಗೆ ಕರೆಯಬಹುದಾದರೂ ಹೆಸರಿಗಾಗಿಯೋ ಹಣಕ್ಕಾಗಿಯೋ ರಾಜದಾಕ್ಷಿಣ್ಯಕ್ಕಾಗಿಯೋ ಶ್ರೀಮಂತದಕ್ಷಿಣೆಗಾಗಿಯೋ ಕವಿ ತನ್ನ ಕೃತಿಯನ್ನು ರಚಿಸುತ್ತಾನೆ ಎನ್ನುವ 'ಪರತಂತ್ರ'ತೆ ನಮಗಿಲ್ಲಿ ಪ್ರಕೃತವಲ್ಲ. ಆದರೆ ನಿಜವಾದ ಕವಿಯ ಉತ್ತಮಕೃತಿ ಯಾರ ಬಲಾತ್ಕಾರದಿಂದಲೂ ಹೊಮ್ಮುವುದಿಲ್ಲ. ಯಾರ ಆಜ್ಞೆಯಿಂದಲೂ ಅದು ಸಿದ್ಧವಾಗುವದಿಲ್ಲ. ಹಿಂದೆ ಹೇಳಿದ ಕೇವಲವಾದ ಸ್ವಾತಂತ್ರ್ಯವಿಲ್ಲದಿದ್ದರೂ ಸ್ವಾತಂತ್ರ್ಯದ ಒಂದು ಛಾಯೆ ಇರುವಂತೆ ತೋರುತ್ತದೆ. ಅಷ್ಟೇ ಅಲ್ಲ, ಕವಿಕೃತಿ ಲೋಕಾನುಕೃತಿಯಾದರೂ ಲೋಕದ ಪ್ರತಿಕೃತಿ ಆಗಿರುವುದಿಲ್ಲ. ಚರಿತ್ರೆ ಒಂದು ಘಟನೆಯನ್ನು

ವರ್ಣಿಸುವುದಕ್ಕೂ ಅದೇ ಘಟನೆಯನ್ನು ಒಂದು ಕಾವ್ಯ ಚಿತ್ರಿಸುವುದಕ್ಕೂ ಎಷ್ಟು ತಾರತಮ್ಯ ! ಚರಿತ್ರೆ ಎಷ್ಟು ಪ್ರತಿಕೃತಿ ಆಗಿದ್ದರೆ ಅಷ್ಟೂ ಶ್ರೇಷ್ಠ, ಅಷ್ಟೂ ವೈಜ್ಞಾನಿಕ. ಆದರೆ ಕಾವ್ಯಕಾರ ಇತಿಹಾಸಕಾರನನ್ನು ಅನುಕರಿಸುವುದಿಲ್ಲ. ಸ್ವಕಲ್ಪಿತವಾದ ಘಟನೆಗಳನ್ನೂ ಸನ್ನಿವೇಶಗಳನ್ನೂ ವ್ಯಕ್ತಿಗಳನ್ನೂ ಕಡೆಗೆ ಸ್ಥಳ ವಿಶೇಷಗಳನ್ನೂ ಚಿತ್ರಿಸಿ ಕಥೆ ಕಟ್ಟುತ್ತಾನೆ. ಈ ದೃಷ್ಟಿಯಿಂದ ಕವಿ ಇತಿಹಾಸಕಾರನಷ್ಟು 'ಪರತಂತ್ರ'ನಲ್ಲ, ಅಷ್ಟೇ ಅಲ್ಲ, ರಾಮಾಯಣ ಮಹಾಭಾರತದಂತಹ ಪ್ರಸಿದ್ಧ ಕಾವ್ಯ ವಿಷಯಗಳನ್ನು ತೆಗೆದುಕೊಂಡು ಕವಿ ತನ್ನ ಕಾವ್ಯಗಳನ್ನು ಸೃಷ್ಟಿಸುವಾಗಲೂ ಅವನು ತನ್ನದೆ ಆದ ವ್ಯತ್ಯಾಸಗಳನ್ನು ಮಾಡಿಕೊಂಡು ಮೂಲಕ್ಕಿಂತಲೂ ಉತ್ತಮತರ ಕೃತಿಗಳನ್ನು ನಿರ್ಮಿಸಿದ ನಿದರ್ಶನಗಳು ಬೇಕಾದಷ್ಟಿವೆ. ಆದ್ದರಿಂದ ಕವಿಕೃತಿ ಸಂಪೂರ್ಣವಾಗಿ 'ಪರತಂತ್ರ'ವೂ ಅಲ್ಲ; ಸಂಪೂರ್ಣವಾಗಿ 'ಸ್ವತಂತ್ರ'ವೂ ಅಲ್ಲ.

ಹಾಗಾದರೆ ಅದನ್ನು 'ಅನ್ಯಪರ-ತಂತ್ರ' ಎಂದು ಕರೆಯಬಹುದೆ? 'ಅನ್ಯಪರ-ತಂತ್ರ' ಎಂದರೆ ಯಾವ ಕಾರ್ಯದ ತಂತ್ರವು ಇನ್ನೊಬ್ಬರ ಪರವಾಗಿ ಮಾತ್ರ—ಎಂದರೆ ಇನ್ನೊಬ್ಬರು ಇಟ್ಟ ಹಜ್ಜೆಯಲ್ಲಿ, ಹಾಕಿಕೊಟ್ಟ ಹಾದಿಯಲ್ಲಿ, ಗುರುತು ಮಾಡಿದ ಗೆರೆಯಲ್ಲಿ ಒಂದಿನಿತೂ ಅತ್ತ ಇತ್ತ ಅಲುಗದೆ ಚಲಿಸುವುದು ಎಂದರ್ಥ. ಇಲ್ಲಿ ನಿರ್ಬಂಧವನ್ನು ಒಪ್ಪಿಕೊಳ್ಳುವ ಮುನ್ನ ಯಾವ ಬಲಾತ್ಕಾರವೂ ಇರುವುದಿಲ್ಲ. ಅಂತಹ ಒಪ್ಪಿಗೆ ಕೊಡುವುದಕ್ಕೂ ಬಿಡುವುದಕ್ಕೂ ವ್ಯಕ್ತಿ ಸ್ವತಂತ್ರನೆ. ಆದರೆ ಒಪ್ಪಿಗೆ ಕೊಟ್ಟಮೇಲೆ ಆ ನಿರ್ಬಂಧದಂತೆ ನಡೆಯುವುದು ಅವಶ್ಯಕರ್ತವ್ಯವಾಗುತ್ತದೆ, ಸೇನೆಗೆ ಸೇರಿದ ಸೈನಿಕನ ಕವಾತಿನಂತೆ. ಕಾವ್ಯಗಳಲ್ಲಿ ಬಹುಭಾಗಕ್ಕೆ ಈ 'ಅನ್ಯಪರ-ತಂತ್ರ' ಲಕ್ಷಣ ಅನ್ವಯಿಸುತ್ತದೆ, ನಿಜ. ಆದರೂ ನಾವು ಉತ್ತಮ ಕೃತಿಯ ಉತ್ತಮತೆಯನ್ನು ಗುರುತಿಸುವುದು 'ಕಾವ್ಯದ ಅನ್ಯಪರ-ತಂತ್ರ'ವಾದ ಭಾಗದಿಂದಲ್ಲ. ಪ್ರತಿಕೃತಿಯ ಕಾವ್ಯಗಳು ಬಹುಮಟ್ಟಿಗೆ 'ಅನ್ಯಪರ-ತಂತ್ರ'ವಾಗಿದ್ದರೂ ಪ್ರತಿಭಾಶಾಲಿಯಾದ ಯಾವ ಕವಿಯ ಸ್ವತಂತ್ರ ಕೃತಿಗಳನ್ನಾಗಲಿ ಪ್ರತಿಮಾವಿಧಾನದ ಮಹಾಕಾವ್ಯಗಳನ್ನಾಗಲಿ ಹಾಗೆ ಕರೆಯಲಾಗುವುದಿಲ್ಲ. ಒಂದು ಕಾವ್ಯದ ಭಾಷಾಂತರವನ್ನಾಗಲಿ ಅಥವಾ ಅದರ ಸಂಪೂರ್ಣವಾದ ಅನುಕರಣೆಯನ್ನಾಗಲಿ 'ಅನ್ಯಪರ-ತಂತ್ರ' ಎಂದು ಕರೆಯಬಹುದು. ಭಾಷಾಂತರವಾಗದೆ ಅನುವಾದವಾದರೂ ಅಥವಾ ಒಂದು ಕಾವ್ಯವನ್ನು ಆಧಾರವಾಗಿಟ್ಟುಕೊಂಡು ರಚಿತವಾಗಿದ್ದರೂ 'ಅನ್ಯಪರ-ತಂತ್ರ'ಕ್ಕೆ ಮೀರಬಹುದು. ಆದಕಾರಣ ಕವಿಕೃತಿಯನ್ನು 'ಅನ್ಯಪರ-ತಂತ್ರ'ವಲ್ಲದುದು ಎಂದು ಕರೆದಿದ್ದಾರೆ. ಅದು ಕೇವಲ 'ಸ್ವತಂತ್ರ'ವೂ ಅಲ್ಲ, ಕೇವಲ 'ಪರತಂತ್ರ'ವೂ ಅಲ್ಲ; ಸಂಪೂರ್ಣವಾಗಿ 'ಅನ್ಯಪರ-ತಂತ್ರ'ವೂ ಅಲ್ಲ. ಅದು 'ಅನನ್ಯಪರತಂತ್ರ.'

'ಅನನ್ಯಪರ-ತಂತ್ರ' ಎಂದರೆ 'ತನ್ನತನ'ದ ತಂತ್ರವುಳ್ಳದ್ದು ಅಥವಾ ಆತ್ಮ ತಂತ್ರವಾದದ್ದು. ಆ 'ತನ್ನತನ'ದಲ್ಲಿ ಅಸ್ವತಂತ್ರತೆ ಇರಬಹುದು; ಅಂದರೆ, ಅನ್ಯ ಮೂಲಗಳಿಂದ ಆಹಾರ ಪಡೆದು, ಅನ್ಯಾಧಾರಗಳಿಂದ ಪುಷ್ಟಿಹೊಂದಿ, ನರರೂಪದ ಲೋಕರೂಪದ ಕೃತಿರೂಪದ ಅನೇಕ ಗುರುಗಳಿಂದ ದೀಕ್ಷೆವೆತ್ತು ಎನಿತೆನಿತೊ ಕೃಪೆಗೆ ಋಣಿಯಾಗಿ ಆ 'ತನ್ನತನ' ಸಿದ್ಧವಾಗಿರಬಹುದು. ಆದರೆ ಕೃತಿಯ ತಂತ್ರ ಕವಿಯ ಆ 'ತನ್ನತನ'ಕ್ಕೆ ಮಾತ್ರ ಒಳಪಟ್ಟುದು; 'ಸ್ವಪರ-ತಂತ್ರ'ವಾದದ್ದು. ವಿಷಯ, ಕಥೆ, ವಸ್ತು, ಭಾವ ಇವು ಪ್ರಕೃತಿ ಲೋಕದಿಂದಲೋ ಇತರ ಕೃತಿ ಲೋಕಗಳಿಂದಲೊ ಬಂದಿರಬಹುದು. ಆದರೆ ಅವೆಲ್ಲವೂ ಕವಿಯ 'ತನ್ನತನ'ದ ಶಕ್ತಿರಸಗಳಲ್ಲಿ ಜೀರ್ಣವಾಗಿ, ಅವನ ಹೃದಯ ಸಂವೇದನದಿಂದ ಆರ್ದ್ರವಾಗಿ, ಅವನ ರಸಾನುಭವದಿಂದ ಪರಿವರ್ತಿತವಾಗಿ, ನವೋನವವಾಗಿ, ಆ ಹೊಸತನಕ್ಕೆ ತಕ್ಕಂತೆ, ಅದರ ಶಕ್ತಿ ಸೌಂದರ್ಯ ರಸ ಸತ್ಯ ಇವುಗಳ ಅಭಿವ್ಯಕ್ತಿಗೆ ಸಮರ್ಥವೂ ಸಮರ್ಪಕವೂ ಆದ ಮುಖಪಾತ್ರಗಳಾಗಿ, ನೂತನವೂ ವಿವಿಧವೂ ಆಗಿರುವ ಅಂಗ ಉಪಾಂಗ ಅವಯವಗಳನ್ನು ಮೊಳೆಯಿಸಿ, ಬಳೆಯಿಸಿ, ಅರಳಿಸಿ, ಹೊಸ ರೂಪಧಾರಣೆ ಮಾಡಿ ಹೊಸ ಜನ್ಮವೆತ್ತಬೇಕಾಗುತ್ತದೆ.[6] ಕವಿಯ ನವೀನ'ದರ್ಶನ'ಪ್ರಕಾಶನಕ್ಕಾಗಿಯೆ ಹೊಮ್ಮುವ ನವೋನವಪ್ರತಿಮೆಯಾಗಬೇಕಾಗುತ್ತದೆ. ಉತ್ತಮ ಕವಿಯ ಯಾವ ಕೃತಿಯನ್ನು ತೆಗೆದುಕೊಂಡರೂ ಅದು 'ಅನನ್ಯಪರ-ತಂತ್ರತೆ'ಗೆ ನಿದರ್ಶನವಾಗುತ್ತದೆ.[7]

---

[6] "The poet who borrows his 'idea,' borrows only a subject, the whole work of expressing the impressions it has stirred in him remains to be done. A bad poet may confine himself to a description of the material detail of a picture, a good one may do what Keats did with the Greecian Urn."—A. E. Powell.

[7] ಈ 'ಅನನ್ಯಪರತಂತ್ರತೆಗೂ ಒಂದು ಮಿತಿ ಇದೆ ಎಂಬುದನ್ನು ಉತ್ತಮಕವಿ ನಿರ್ಲಕ್ಷಿಸುವುದಿಲ್ಲ. ಅನನ್ಯಪರತಂತ್ರತೆ ಔಚಿತ್ಯಕ್ಕೆ ಒಳಗಾಗದಿದ್ದರೆ 'ವಿಕಲ್ಪನೆ'ಯಾಗುತ್ತದೆ. 'ಕಲ್ಪನೆ'ಗೆ ಇರುವ ಸ್ವಾತಂತ್ರ್ಯ 'ಉಚಿತ'ವನ್ನು ಮೀರಿದರೆ ರಸಭಂಗಕ್ಕೆ ಕಾರಣವಾಗುತ್ತದೆ; 'ಅನುಚಿತ'ಕ್ಕೆ ಕಾಲಿಟ್ಟರೆ ವಿಕಲ್ಪನಾಸೃಷ್ಟಿಗೂ ರಸಾಭಾಸಕ್ಕೂ ಎಡೆಗೊಡುತ್ತದೆ. ಉದಾಹರಣೆಗಾಗಿ ಕನ್ನಡದ ಒಬ್ಬ ಕಾದಂಬರಿಕಾರನ ಕಲ್ಪನೆ ತನ್ನ ಕಥಾನಾಯಕನನ್ನು ಚಾಮುಂಡಿಬೆಟ್ಟದ ಬುಡದಲ್ಲಿ ಹರಿಯುವಂತೆ ವರ್ಣಿತವಾದ ಗಂಗಾನದಿಯಲ್ಲಿ ಮೀಯಿಸಿ, ಅದರ ನೆತ್ತಿಯ ಮೇಲಿರುವಂತೆ ವರ್ಣಿತವಾದ ಮಂಜುಗಡ್ಡೆಯಿಂದ ಉತ್ಪನ್ನವಾದ ಶೀತಲ ಜಲಪಾನದಿಂದ ಅವನ ಬಾಯಾರಿಕೆಯನ್ನು ತಣಿಸಿತೆಂದು ಇಟ್ಟುಕೊಂಡರೆ ಎಂತಹ 'ವಿಕಲ್ಪನೆ'ಗೂ 'ಆಭಾಸ'ಕ್ಕೂ ಕಾರಣವಾದೀತು! ಆದ್ದರಿಂದಲೆ 'ಪ್ರತಿಕೃತಿ'ಯ ಸಾಹಿತ್ಯ ಬಾಹ್ಯಲೋಕ ಸತ್ಯಕ್ಕೆ ಕಟ್ಟುಬೀಳುವ ಪಾರತಂತ್ರ್ಯವನ್ನು ತನ್ನ ಕ್ಷೇಮಕ್ಕಾಗಿಯೆ ಒಪ್ಪಿಕೊಳ್ಳುತ್ತದೆ.

ಕವಿಕೃತಿ ಸಂಪೂರ್ಣವಾಗಿ ಲೋಕಭಿನ್ನವಾದುದೂ ಅಲ್ಲ; ಸಂಪೂರ್ಣವಾಗಿ ಲೋಕಾಶ್ರಯವಾದುದೂ ಅಲ್ಲ. ಸಂಪೂರ್ಣವಾಗಿ ಲೋಕಾನುಕೃತಿಯೂ ಅಲ್ಲ. ಅದೊಂದು ಅನನ್ಯಪರತಂತ್ರವಾದ ಪ್ರತಿಮಾ.[8]

ಹೀಗೆ ಪ್ರತ್ಯಕ್ಷಸಿದ್ಧವಾದ ಭೌಗೋಲಿಕದಂತಹ ಸತ್ಯಕ್ಕೆ ಭಂಗತರುವುದು ಎಷ್ಟು ಅನುಚಿತವೋ ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಅನುಚಿತವಾಗುತ್ತದೆ ಒಂದು ದೇಶ ಅಥವಾ ಜನಕೂಟದ ಸಮಷ್ಟಿಮನೋಭೂಮಿಕೆಯಲ್ಲಿ ಬಾಹ್ಯಜಗತ್ತಿನ ಭೌಗೋಲಿಕ ಸತ್ಯಕ್ಕಿಂತಲೂ ಸುಸ್ಥಿರವಾಗಿ ಸುಪ್ರತಿಷ್ಠಿತವಾಗಿ ಶಾಶ್ವತರೂಪವಾಗಿ, ಐತಿಹಾಸಿಕಘಟನೆ ವ್ಯಕ್ತಿ ಚಾರಿತ್ರಗಳಿಗಿಂತಲೂ ಸುವ್ಯಕ್ತವೂ ಸುಸ್ಪಷ್ಟವೂ ಸುಪರಿಚಿತವೂ ಅನುಲ್ಲಂಘನೀಯವೂ ಆಗಿ ಸಂಸ್ಥಾಪಿತವಾಗಿರುವ ಪ್ರತಿಮಾರೂಪದ ಸತ್ಯಗಳಿಗೆ ಭಂಗವೊದಗಿದಾಗ, ವಿಕಾರವುಂಟಾದಾಗ ಅಥವಾ ಕಾವ್ಯಸತ್ತೆಯಲ್ಲಿ ಘಟಪಲ್ಲಟ ಸಂಭವಿಸಿದಾಗ.

'ಅಶ್ವತಾಮನ್' ನಾಟಕ ಹೊರಬಿದ್ದಾಗ ಜನಮನಸ್ಸು ಕನಲಿ ಆಲೋಡಿತವಾದದ್ದು ನಿಜವಾಗಿಯೂ ಈ ಘಟಪಲ್ಲಟದ ಕಾರಣಕ್ಕಾಗಿಯೆ ಹೊರತು ಚಿರಂಜೀವಿ ಸತ್ತನೆಂಬಷ್ಟಕ್ಕೇ ಅಲ್ಲ. ನಮ್ಮ ಪೌರಾಣಿಕ ಮಹಾವ್ಯಕ್ತಿಗಳಾರೂ 'ಆತ್ಮಹತ್ಯೆ' ಮಾಡಿಕೊಂಡಿಲ್ಲ. ಮಹಾನಾಯಕರ ಮಾತಿರಲಿ, ದುಷ್ಟರಾದ ಪ್ರತಿನಾಯಕರನ್ನು ತೆಗೆದುಕೊಂಡರೂ ಯಾರೂ 'ಆತ್ಮಹತ್ಯೆ'ಯ ಅಗೌರವಕ್ಕೆ ಕೈಯಿಟ್ಟವರಲ್ಲ. ಇಂತಹ ಒಂದು ಸಂಸ್ಕೃತಿಯ ಮನೋಧರ್ಮಕ್ಕೇ ಅಸಂಭವನೀಯವಾದ, ಅಸಾಧ್ಯವಾದ, ಅಸ್ವಾಭಾವಿಕವಾದ, ವಿಕೃತವಾದ ಕಾರ್ಯವು ದ್ರೋಣಾಚಾರ್ಯರ ಪುತ್ರನೂ ರುದ್ರಾವತಾರಿಯೂ ಜ್ಞಾನಿಯೂ, ಸಾಲದ್ದಕ್ಕೆ ಬೇರೆ ಚಿರಂಜೀವಿಯೂ ಆಗಿರುವ ಅಶ್ವತ್ಥಾಮನಿಂದ ನಡೆಯಿತೆಂದು ಚಿತ್ರಿಸುವುದು ಚಾಮುಂಡಿ ಬೆಟ್ಟದ ಬುಡದಲ್ಲಿ ಗಂಗೆಯನ್ನು ಹರಿಸುವುದಕ್ಕಿಂತಲೂ ವಿಕೃತವಾದದ್ದು. ಏಕೆಂದರೆ ಅದು ಸಮಷ್ಟಿಮನೋಧರ್ಮದ ಒಂದು ಶಾಶ್ವತ ನಿಯತಿನ್ಯಾಯಕ್ಕೇ ವಿರುದ್ಧವಾಗುತ್ತದೆ. ಈ ವಿರೋಧವು ಅತಿ 'ಊರ್ಧ್ವಗಾಮಿ'ಯಾಗುವ ಅನನ್ವಯದಿಂದ ಒದಗುವುದಕ್ಕಿಂತಲೂ ಹೆಚ್ಚಾಗಿ ಅತಿ 'ಅಧೋಗಾಮಿ'ಯಾಗುವ ಅನನ್ವಯದಿಂದ ಉಲ್ಬಣಿಸುತ್ತದೆ.

ಈ ಅನನ್ವಯ ದೋಷದಿಂದ ಉಂಟಾಗುವ ರಸಾಭಾಸದ ವಿಚಾರವಾಗಿ ಬ್ರಾಡ್ಲೆ ಹೀಗೆ ಬರೆದಿದ್ದಾರೆ: "If an artist alters a reality (*e.g.* a well-known scene or historical character) *so much* that his product clashes violently with our familiar ideas, he may be making a mistake: not because his product is untrue to the reality (this by itself is perfectly irrelevant), but because the 'untruth' may make it difficult or impossible for others to appropriate his product, or because this product may by æsthetically inferior to the reality even as it exists in the general imagintion." ವಾಲ್ಮೀಕಿ ರಾಮಾಯಣದ ಕಥೆಯಲ್ಲಿಯೆ ಬೆಳೆದ ಮನೋಧರ್ಮಕ್ಕೆ ಪಂಪರಾಮಾಯಣದ ಜೈನಕಥೆಯನ್ನೋದಿದಾಗ ಆಗುವ ಆಘಾತದ ಪರಿಣಾಮವನ್ನು ಇಲ್ಲಿ ಗಮನಿಸಬಹುದು.

8 'ತಪೋನಂದನ' ಗ್ರಂಥದ 'ಪ್ರತಿಮಾ ಮತ್ತು ಪ್ರತಿಕೃತಿ' ಎಂಬ ಪ್ರಬಂಧವನ್ನು ನೋಡಿ.

ಈ ಅರ್ಥದಲ್ಲಿ ಮಾತ್ರ ಕವಿಕೃತಿಯನ್ನೂ ಅದರಿಂದೊದಗುವ ರಸಾನುಭವವನ್ನೂ 'ಅಲೌಕಿಕ' ಎಂಬ ವಿಶಾಲಾರ್ಥದ ವಿಶೇಷಣದಿಂದ ವರ್ಣಿಸಬಹುದು ; ಲೋಕಕ್ಕೆ ಸಂಪೂರ್ಣವಾಗಿ ಭಿನ್ನವಾದುದು ಎಂಬ ಅರ್ಥದಲ್ಲಿ ಅಲ್ಲ. ಬಹುಶಃ 'ಲೋಕಾತಿಶಯ,' 'ಲೋಕೋತ್ತರ,' 'ಲೋಕಾತಿಕ್ರಾಂತ' ಎಂಬ ಪದಗಳಿಂದ ಈ ವಿಷಯದಲ್ಲಿ ನಮಗೆ ಹೆಚ್ಚು ಬೆಳಕು ದೊರೆಯಬಹುದೆಂದು ತೋರುತ್ತದೆ.[9]

ಕುವೆಂಪು.

---

[9] ಮುಂದೆ ಬರುವ 'ಕವಿನಿರ್ಮಿತಿಯಲ್ಲಿ ನಿಯತಿಕೃತನಿಯಮರಾಹಿತ್ಯ' ಮತ್ತು 'ರಸಾನುಭವದ ಅಲೌಕಿಕತೆ' ಎಂಬ ಪ್ರಬಂಧಗಳಲ್ಲಿ.

ಭಾವನಾನಿರೂಪಣ—ಸಾಹಿತ್ಯ*

ವಾಸ್ತವ ಪ್ರಪಂಚದಿಂದ ನೇರವಾಗಿ ಕಲೆ ಹುಟ್ಟುವುದಿಲ್ಲ, ಅನುಭೂತವಾದುದರ ಪುನರ್ ನಿರ್ಮಾಣದಿಂದ ಕಲೆ ಹುಟ್ಟುತ್ತದೆ. ಆದುದರಿಂದ ಕಲೆಯ ದ್ರವ್ಯ ಪ್ರತ್ಯಕ್ಷ ಪ್ರಪಂಚವಲ್ಲ; ಆ ಪ್ರಪಂಚದ ಅನುಭೂತಿಗಳು. ಕುಂಬಾರನ ಮಡಕೆ ಕುಡಿಕೆಗಳಿಗೆ ಒದಗಿಬರುವ ಜೇಡಿಮಣ್ಣಿನಂತೆ ಈ ಪ್ರಾಪಂಚಿಕಾನುಭವಗಳು ಕಲೆಗಾರನಿಗೆ ಒದಗಬೇಕಾಗುತ್ತವೆ. ಕಲೆಯ ಮೂಲದ್ರವ್ಯ ಆಧ್ಯಾತ್ಮಿಕವಾಗಿರುವ ಈ ಅನುಭವಸಾಮಗ್ರಿ. ವಾಸ್ತವಗಂಧಿಯಾದ ಈ ಅನುಭವದ್ರವ್ಯದಿಂದ ಭಾವಪ್ರಚೋದನೆಯ ಫಲವಾಗಿ ನಿರ್ಮಿತವಾದ ವಸ್ತು ಕಲಾವಸ್ತು. ತನ್ನ ಅನುಭವಸಾಮಗ್ರಿಯನ್ನು ತನ್ನ ಭಾವನಾಸ್ಫುರಣೆಗೆ ತಕ್ಕಂತೆ ತಕ್ಕ ತಕ್ಕ ಸಹಾಯ ಸಲಕರಣೆಗಳಿಂದ ತಿರುಗಿ ಬಹಿರಂಗಪಡಿಸುವ ಸೃಷ್ಟಿಕರ್ಮವೇ ಕಲೆ. ಇದು ಪ್ರತ್ಯಕ್ಷವನ್ನು ಅನುಕರಿಸಬಹುದು, ಅನುಕರಿಸದಿರಬಹುದು. ಇದರ ಸಮೀಕ್ಷಣದಿಂದ ನಮ್ಮ ಪ್ರಾಪಂಚಿಕ ಜ್ಞಾನ ವಿಸ್ತರಿಸಬಹುದು, ವಿಸ್ತರಿಸದಿರಬಹುದು. ಜ್ಞಾನ, ನೀತಿ, ಬೋಧೆ ಮತ್ತು ಉಪಯೋಗಿತೆ ಇವುಗಳು ನಮಗೆ ಕಲಾವಸ್ತುಗಳಿಂದ ದೊರೆಯುವ ಮುಖ್ಯಫಲಗಳಲ್ಲ; ಗೌಣಫಲಗಳು, ಕಲಾವಸ್ತುಗಳು ಸುಂದರ ಅಸುಂದರವೆಂಬ ವಿಮರ್ಶಾಮಾನದಂಡಕ್ಕೆ ಮಾತ್ರ ಅಳವಡುತ್ತವೆ. ಇಂಥ ವಸ್ತುಗಳ ಪರಾಮರ್ಶದಿಂದ ನಾವು ಪಡೆಯುವ ಅನುಭವ ಪ್ರತ್ಯಕ್ಷಾನುಭೂತಿಗಿಂತಲೂ ವಿಲಕ್ಷಣವಾಗಿ ಕಲಾನಂದ ಅಥವಾ ರಸಾನುಭೂತಿ ಎನ್ನಿಸಿಕೊಳ್ಳುತ್ತದೆ. ತಾನು ಪಡೆಯುವ ಪ್ರಾಪಂಚಿಕಾನುಭವಗಳನ್ನು ಆತ್ಮಾನಂದಾನುರೂಪವಾಗಿ ತಾನು ವ್ಯಂಜಿಸಬೇಕೆಂದಿರುವ ಭಾವನೆಗಳಿಗೆ ತಕ್ಕಂತೆ ಅರ್ಥಸಹಿತವಾದ ಶಬ್ದಗಳಿಂದ ಪುನಃ ಬಹಿರಂಗಪಡಿಸುವ ಕಲೆಯ ಸೃಷ್ಟಿಯನ್ನು ನಾವು ಸಾಹಿತ್ಯವೆಂದು ಕರೆಯಬಹುದು.

ಎಲ್ಲ ಕಲೆಗಳಂತೆ ಸಾಹಿತ್ಯವೂ ಭಾವನಾನಿರೂಪಣೆಯಲ್ಲಿ ಪ್ರವೃತ್ತವಾದದ್ದು. ಅರ್ಥಸಹಿತವಾದ ಶಬ್ದಗಳನ್ನು ಈ ಕಲೆ ಕೊಡಬೇಕಾಗಿರುವುದರಿಂದ ಕಣ್ಣು ಸಂಗ್ರಹಿಸುವ ವಾಸ್ತವಾನುಭೂತಿಗಳ ನೆರವನ್ನು ಇದು ಹೆಚ್ಚಾಗಿ ಬೇಡುತ್ತದೆ. ಸಂಗೀತಕ್ಕೆ ಈ ಸಂಕೋಲೆಯಿಲ್ಲ. ಆದುದರಿಂದಲೇ ಅದಕ್ಕೆ ಲೋಕದ ಕನ್ನಡಿ ಎಂಬ ಪ್ರಶಂಸೆ ತಪ್ಪಿದೆ. ಸಾಹಿತ್ಯಕ್ಕೆ ಈ ಪ್ರವಾದ ಅಂಟಿಕೊಂಡಿದೆ. ಆದರೆ ಅದೊಂದು

---

* ಆಲ್ ಇಂಡಿಯಾ ರೇಡಿಯೋ, ಮೈಸೂರು ಕೇಂದ್ರ—ಇವರ ಕೃಪೆಯಿಂದ.

ಭ್ರಮೆ. ಏಕೆಂದರೆ ಸಾಹಿತ್ಯ ಈ ಪ್ರತಿಫಲನ ಕರ್ಮದಲ್ಲಿ ಅನಿವಾರ್ಯವಾಗಿ ತೊಡಗಿದರೂ ಅಲ್ಲಿಯೇ ಮುಗಿಯುವುದಿಲ್ಲ. ಅದರ ವಿಹರಣ ಭಾವನಾಪ್ರಪಂಚದಲ್ಲಿ—ಈ ಲೋಕಾನುಭೂತಿಗಳ ಮೇಲೆ ಈ ಉಡ್ಡೀನ ಲೀಲೆಯಲ್ಲಿ ಅದು ಪ್ರತ್ಯಕ್ಷವನ್ನು ಮುಟ್ಟಿ ಮುಟ್ಟಿ ಮೇಲಕ್ಕೆ ನೆಗೆದು ನೆಗೆದು ಹಾರುತ್ತದೆ. ಸ್ವಪ್ನದಲ್ಲಿ ವಾಸ್ತವಾಂಶವೆಷ್ಟೊ ಸಾಹಿತ್ಯದ ಶಬ್ದಸೃಷ್ಟಿಯಲ್ಲೂ ಹೆಚ್ಚು ಕಡಮೆ ಅಷ್ಟೇ. ಈ ಶಬ್ದಸೃಷ್ಟ ಲೋಕಕ್ಕೆ ಅದು ನಿರ್ದಿಷ್ಟಭಾವಗಳನ್ನು ವ್ಯಂಜಿಸಬೇಕೆಂಬ ಇಚ್ಛೆಯ ನಿರ್ಬಂಧವಿದೆ. ವಸ್ತುಧರ್ಮಕ್ಕೆ ಸಾಹಿತ್ಯ ಒಳಗಾಗದಿದ್ದರೂ ರಸಧರ್ಮಕ್ಕೆ ಅದು ಒಳಗಾಗತಕ್ಕದ್ದು. ವಸ್ತುಗಳ ಸತ್ಯಾಸತ್ಯತೆಗಳನ್ನು ನಾವು ವಾಸ್ತವ ಪ್ರಪಂಚದಲ್ಲಿ ಪ್ರತ್ಯಕ್ಷಾನುಮಿತಿಗಳಿಂದ ನಿರ್ಧರಿಸುವಂತೆ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಲೋಕದ ಸತ್ಯಾಸತ್ಯತೆಗಳನ್ನು ಆಯಾ ವಸ್ತುಗಳು ನಮ್ಮ ಹೃದಯದಲ್ಲಿ ಮೂಡಿಸುವ ಭಾವಗಳ ಮೌಲ್ಯದಿಂದ ನಾವು ನಿರ್ಧರಿಸುತ್ತೇವೆ. ಅಲ್ಲಿ ಪ್ರಮೆಯಾದದ್ದು ಇಲ್ಲಿ ಭ್ರಮೆ. ಇಲ್ಲಿನ ಪ್ರಮೆ ಅಲ್ಲಿನ ಭ್ರಮೆ. ಶಾಸ್ತ್ರಕ್ಕೂ ಸಾಹಿತ್ಯಕ್ಕೂ ಇರುವ ವ್ಯತ್ಯಾಸವೂ ಇದೇ. ಒಂದರಲ್ಲಿ ನಿಯೋಜಿತವಾದ ಶಬ್ದಗಳು ಅರ್ಥನಿಷ್ಠ. ಮತ್ತೊಂದರಲ್ಲೋ ಅವು ಭಾವದ್ಯೋತಕ. ಆದುದರಿಂದಲೇ ನಮ್ಮ ಹಿಂದಿನ ಪೂಜ್ಯ ವಿಮರ್ಶಕರು ನಿಯತಿಕೃತ ನಿಯಮರಹಿತಾಂ ಎಂದು ಸಾಹಿತ್ಯಲೋಕಕ್ಕೆ ವಾಸ್ತವಜಗತ್ತಿನ ಋತದ ವ್ಯಾಪ್ತಿಯನ್ನು ನಿರಾಕರಿಸಿ ಹ್ಲಾದೈಕಮಯೀಂ ಎಂದು ಅದರ ಸ್ವರೂಪವನ್ನೂ ಅದರೊಂದಿಗೇ ಅದು ರಸ ಧರ್ಮಬದ್ಧವೆಂಬ ಸೂತ್ರವನ್ನೂ ನಿರೂಪಿಸಿದರು.

ಈಗ ಉದಾಹರಣೆಗಾಗಿ ಕುಮಾರವ್ಯಾಸನ ಈ ಆನೆಯ ವರ್ಣನೆಯನ್ನು ಸಮೀಕ್ಷಿಸಿ:—

ಬಲವೊರಜೆ ಎಡವೊರಜೆ ಬೆನ್ನಿನ
ವಿಳಿಯ ಜಾಳಿಗೆವೊರಜೆ ತಳಸಂ
ಕಲೆಯ ತೊಡರಂಕಣಿಯ ಕೊಂಡೆಯ ಪಕ್ಕಗಂಟೆಗಳ
ತಳುಕಿನಗ್ಗಳಿಕೆಗಳ ಹಿಣಿಲಿನ
ಬಲುವೊರಜೆಗಳ ಬಾರ ಸಂಕಲೆ
ಗಳನು ಬಿಗಿದರು ಜೋಡಿಸಿದರುಬ್ಬರದ ಮದಗಜವ.

ಇದನ್ನು ಓದಿದ ತರುವಾಯ ಕವಿ ಒಳ್ಳೆ ಸಮೀಕ್ಷಣ ಚತುರ ಎನ್ನುತ್ತೇವೆ. ಇಲ್ಲಿನ ಶಬ್ದಗಳಲ್ಲಿ ಭಾವನಿಷ್ಠೆಗಿಂತಲೂ ವಸ್ತುನಿಷ್ಠೆ ಹೆಚ್ಚು. ಇದು ಆನೆಯ ನೆನಕೆಯ ವರ್ಣನೆ ಮಾತ್ರ. ಪದ್ಯ ಇಷ್ಟರಲ್ಲೇ ಮುಗಿದಿದ್ದರೆ ಉತ್ತಮವೆಂಬ ಪರಿಗಣನೆಗೆ ಸಲ್ಲದು. ಈಗ ಈ ಪದ್ಯವನ್ನು ನೋಡಿ.

ಜಗದ ನಿಡುನಿದ್ರೆಯಲಿ ಮೋಹರ
ದೆಗೆದ ಮುಗಿಲೋ ಮೇಣಖಿಲ ಕುಲ
ದಿಗಿಭವೆಂಟೊಂದಾಯ್ತೋ ಕೈಕಾಲ್‌ಮೂಡಿಕೋ ನಭಕೆ
ಅಗಿದು ಮೆಟ್ಟಿದೊಡವನಿ ಪಡುವಲು
ನೆಗೆದುದಡರಿದು ಮುಂದೆ ಮೆಟ್ಟಲು
ಚಿಗಿದುದಿಳೆ ಮೂಡಲು ಮಹಾಗಜವೈದಿತಾಹವವ.

ಇದು ವರ್ಣನೆ: ಇದು ಪ್ರತಿಭೆಯ ಮಾಟ; ಇದು ಆ ಸ್ಥೂಲಗಜವನ್ನು ಭಾವ ಪ್ರಪಂಚದಲ್ಲಿ ಹಾರಿಸುವ ಕುಶಲ ಕವಿಕರ್ಮ. ಅದು ಗಜವಾದರೆ ಇದು ಮಹಾಗಜ. ಈ ಮಹಾಗಜಕ್ಕೆ ಆ ಗಜ ತಡಿಕೆ ಅಷ್ಟೆ. ಇದರಿಂದ ಅದು ಬದುಕತಕ್ಕದ್ದು. ವಾಸ್ತವ ಜಗತ್ತಿನಲ್ಲಿ ಎಲ್ಲೆಂದರೆ ಅಲ್ಲಿ ನಾವು ಆ ಬಲವೊರಜೆ ಎಡವೊರಜೆ ಬಿಗಿದು ಕೊರಲಗಂಟೆ ಗಳನ್ನೂ ಮಿರುಗುವ ಕಿಂಕಾಪಿನ ಗೌಸನ್ನೂ ಮೆರೆಸುವ ಆನೆಯನ್ನು ಕಾಣಬಹುದು. ಆದರೆ ಹೆಜ್ಜೆ ಹೆಜ್ಜೆಗೂ ಭೂಮಿಯನ್ನು ಮೂಡಲಿಗೂ ಪಡುವಲಿಗೂ ಜಗಿದಾಡುವಂತೆ ಜಗ್ಗುಹಾಕುತ್ತಾ ನಡೆಯುವ ಮಹಾ ಮದಗಜವನ್ನು ಕುಮಾರವ್ಯಾಸನು ತನ್ನ ಸೂಕ್ತಿಗಳಲ್ಲಿ ನಿರ್ಮಿಸಿದ ಭಾವನಾಪ್ರಪಂಚದಲ್ಲಿ ಮಾತ್ರ ಅನುಭವಿಸಬಹುದು. ನಮ್ಮ ಮನಸ್ಸಿನಲ್ಲಿ ಚಿರಕಾಲಿ ನಿಲ್ಲತಕ್ಕ ಆನೆಯೂ ಇದೇ. ಆದುದರಿಂದ ಈ ಭಾವಪ್ರತೀಕವೇ ಸತ್ಯ. ಇದರಿಂದ ಆ ವಾಸ್ತವಪ್ರತೀಕ ಮರೆಸಿಹೋಗುವುದರಿಂದ ಅದು ಭ್ರಮೆ. ಸಾಹಿತ್ಯಕರ್ಮದಲ್ಲಿ ಮೊದಮೊದಲು ಕಂಡುಬರುವ ವಾಸ್ತವಜಗತ್ತಿನ ಪ್ರತಿಬಿಂಬಕ್ಕೆ ಸತ್ಯದ ನಿಚ್ಚಣಿಗೆಯಲ್ಲಿ ಭ್ರಮೆಯ ಮೆಟ್ಟಲು ಮಾತ್ರ ಸಲ್ಲತಕ್ಕದ್ದು. ಸತ್ಯಸ್ಯ ಸತ್ಯ ವಾದುದು ಕವಿಯ ಪ್ರತಿಭೆಯಿಂದ ಅದರ ಮೇಲೆ ಆರೋಪಿತವಾದ ಭಾವಪ್ರತೀಕ. ಕವಿಯ ಕಲೆ ಪ್ರತ್ಯಕ್ಷಾನುಭೂತಿಯ ಮೇಲೆ ಊರಿನಿಂತು ಹೀಗೆ ಭಾವನಾ ಪ್ರಪಂಚಕ್ಕೆ ಹಾರುತ್ತದೆ. ಮುಂದೆ ನಡೆಯುವ ಯುದ್ಧದಲ್ಲಿ ಈ ಆನೆಯ ಪಾತ್ರ ಅತ್ಯದ್ಭುತವಾದುದೆಂದು ಹೇಳುವುದಕ್ಕೆ ಬದಲು ಕವಿ ಈ ಭಾವಪ್ರತೀಕವನ್ನು ಅನೇಕ ಉತ್‌ಪ್ರೇಕ್ಷೆಗಳಿಂದ ನಿರ್ಮಿಸಿ ಆ ಸಮರ ಕೋಲಾಹಲವನ್ನು ಧ್ವನಿಸುತ್ತಾನೆ. ಆ ಕಾಳಗಕ್ಕೆ ಈ ಆನೆ ತಕ್ಕ ವಸ್ತು. ಹೀಗೆ ಪ್ರತ್ಯಕ್ಷವಾದ ಪ್ರತೀಕವೊಂದನ್ನು ಭಾವ ಪ್ರತೀಕವಾಗಿ ಮಾರ್ಪಡಿಸುವ ಮೋಹಕವಾದ ಶಕ್ತಿ ಪ್ರತಿಭೆ. ಜಡಲೋಕದಲ್ಲಿ ಜೀವ ಹೇಗೊ ಹಾಗೆಯೇ ಕಲಾಪ್ರಪಂಚದಲ್ಲಿ ಭಾವ ಹಾಗೆ. ಇಲ್ಲಿ ಭಾವಾಕರವಾದುದೇ ಜೀವಂತವಾದದ್ದು.

ಸಾಹಿತ್ಯಲೋಕದಲ್ಲಿ ಇದುವರೆಗೆ ಜೀವಂತವಾಗಿರುವ ಸಕಲ ವಸ್ತುಗಳೂ ಕವಿ ಪ್ರತಿಭೆಯಿಂದ ಈ ರೀತಿಯಾಗಿ ಮಾರ್ಪಟ್ಟ ಭಾವಪ್ರಾಣಿತವಾದ ವಾಸ್ತವಾಂಶಗಳೇ.

ಮೂಲದಲ್ಲಿ ಈ ವಾಸ್ತವಾಂಶವಿಲ್ಲದೆ ಕೊನೆಗೆ ಭಾವಭೂತವಾದ ಈ ಸಾಹಿತ್ಯವಸ್ತು ಸಿದ್ಧಿಸದು. ಶಾಲಿವಾಹನನ ವಿಚಾರದಲ್ಲಿ ಈ ರೀತಿ ಒಂದು ಕತೆ ಇದೆ. ಆತ ಮೊದಲು ಮಣ್ಣಿನಿಂದ ತನ್ನ ಸೈನಿಕರನ್ನು ನಿರ್ಮಿಸುತ್ತಿದ್ದನಂತೆ. ಆ ಮೇಲೆ ತನಗೆ ದೈವದತ್ತವಾದ ಮಂತ್ರಶಕ್ತಿಯಿಂದ ಆ ಗೊಂಬೆಗಳನ್ನು ಜೀವಂತವನ್ನಾಗಿ ಕಾಳಗಕ್ಕೆ ಕಳುಹಿಸುತ್ತಿದ್ದನಂತೆ. ಆ ಮೃಣ್ಮಯ ಯೋಧ ಪ್ರತೀಕಗಳ ಸ್ಥಾನದಲ್ಲಿ ಕವಿಯ ಲೌಕಿಕಾನುಭೂತಿಗಳು. ಇವು ಆತನ ಪ್ರತಿಭಾ ವಿಶೇಷದಿಂದ ಪರಿವರ್ತನಗೊಂಡು ಭಾವವ್ಯಂಜನ ಸಾಮರ್ಥ್ಯವನ್ನು ಪಡೆದಾಗ ರಸಲೋಕದಲ್ಲಿ ವಿರಾಜಿಸಲು ಅರ್ಹವಾದಾವು. ಇಲ್ಲದಿದ್ದರೆ ಇಲ್ಲ. ಮೃಣ್ಮಯವನ್ನು ಚಿನ್ಮಯವನ್ನಾಗಿ ಮಾಡುವುದೇ ಕವಿಯ ಕರ್ಮ. ಹೀಗೆ ಪ್ರತ್ಯಕ್ಷಜಗತ್ತಿನಿಂದ ಭಾವನಾ ಪ್ರಪಂಚಕ್ಕೇರಿದ ವಾಸ್ತವಾನುಭೂತಿಗಳ ಭಾವವ್ಯಂಜನ ಗುಣದ ತುಲನೆಯಿಂದ ಅವುಗಳ ಬಣ್ಣ ಮತ್ತು ಬೆಲೆ ಇವು ನಿರ್ಣೀತವಾಗುತ್ತವೆ; ವಾಸ್ತವತೆಯಿಂದಲ್ಲ. ಅಗ್ನಿಪರೀಕ್ಷೆಗೆ ಒಳಗಾದ ಸೀತೆಗೆ ಬೆಂಕಿ ಶೀತಲವಾಗಬೇಕೆಂಬುದು ರಸಲೋಕದ ಋತ. ಈ ಋತಕ್ಕೆ ಅಳವಡದೆ ಅದರ ಭೌತ ಪ್ರಕೃತಿಯ ಗುಣವಾದ ಔಷ್ಣ್ಯವನ್ನು ಪ್ರದರ್ಶಿಸಿದರೆ ಅದಕ್ಕೆ ಆ ಕಲಾಪ್ರಪಂಚದಲ್ಲಿ ಸ್ಥಾನವೇ ಇಲ್ಲ.

ಆದುದರಿಂದ ವಾಸ್ತವಜಗತ್ತನ್ನು ಪ್ರತಿಬಿಂಬಿಸುವ ಕೆಲಸ ಸಾಹಿತ್ಯದ ಮುಖ್ಯ ಕರ್ಮವೆಂದರೆ ಈ ನಿರೂಪಣೆಗೆ ಅವ್ಯಾಪ್ತಿ ದೋಷ ತಪ್ಪಿದ್ದಲ್ಲ. ಈ ಪ್ರತಿಫಲನ ಕ್ರಿಯೆ ಅದರ ಕರ್ಮದ ಗುಣವಾದ ಭಾಗ. ಸಾಹಿತ್ಯದ ಸಲಕರಣೆ ಅರ್ಥಸಹಿತವಾದ ಶಬ್ದಪುಂಜವಾದುದರಿಂದ ಅನಿವಾರ್ಯವಾಗಿ ಅದು ಲೋಕದ ಕಡೆ ಬೆರಳು ತೋರುತ್ತದೆ. ಅಲ್ಲಿ ನಾವು ಬಯಸತಕ್ಕದ್ದು ಈ ಬಿಂಬದರ್ಶನವನ್ನಲ್ಲ. ಅಲ್ಲಿ ನಾವು ನಿರೀಕ್ಷಿಸಬೇಕಾದದ್ದು ಈ ಔಪಾಧಿಕವಾದ ವಾಸ್ತವಾಂಶ ಭಾವಾಂಶವಾಗಿ ಕವಿಪ್ರತಿಭೆಯಿಂದ ಪರಿವರ್ತಿತವಾಗುವ ಅದ್ಭುತ ಚಮತ್ಕಾರವನ್ನು ಸಾಹಿತ್ಯ ಸಮೀಕ್ಷಣೆಯಿಂದ ನಮಗೆ ದೊರೆಯಬೇಕಾದದ್ದು ಲೋಕಪ್ರತ್ಯಯವಲ್ಲ; ರಸಪ್ರತೀತಿ. ಅಲ್ಲಿ ನಾವು ಕಾಣಲು ಬಯಸುವುದು ಹುಲ್ಲು ಬ್ರಹ್ಮಾಸ್ತ್ರವಾಗುವ ಬಗೆ. ಮೊದಲು ಸಾಮಾನ್ಯನಂತೆ ತೋರುವ ಆಂಜನೇಯ ಕೊನೆಗೆ ಮಹಾಮನುಷ್ಯನಾಗುವ ಚಮತ್ಕಾರ. ರಾಮ ದೇವನಾಗುವ ಪವಾಡ, ಸಾವಿತ್ರಿ ಮೃತ್ಯುವನ್ನು ಜಯಿಸಲು ಸಮರ್ಥಳಾಗುವ ಸೋಜಿಗ. ವಾಸ್ತವಲೋಕದ ಸತ್ಯಕ್ಕೆ ಸಾಹಿತ್ಯದಲ್ಲಿ ಭ್ರಮೆಯ ಸ್ಥಾನ. ಸಾಹಿತ್ಯದ ಭಾವನಾಲೋಕದಲ್ಲಿ ಲೌಕಿಕಸತ್ಯಕ್ಕೆ ಭ್ರಮೆಯ ಸ್ಥಾನ. ಸಾಹಿತ್ಯಲೋಕದಲ್ಲಿ ನಡೆಯುವ ಮೆರವಣಿಗೆ ರಸರಾಜನದು. ಅಲ್ಲಿ ಕಾಣುವ ರಥಗಜಾಶ್ವಪದಾತಿ ಮುಂತಾದ ಸಕಲರಿಗೂ ಆ ರಾಜನ ಪ್ರಭಾವವನ್ನು ಪೋಷಣ ಮಾಡುವುದಕ್ಕಾಗಿ

ಅವರವರ ಭಾವಕ್ಕೆ ಪ್ರದರ್ಶನ ಸಾಮರ್ಥ್ಯಕ್ಕೆ ತಕ್ಕಂತೆ ಆ ಮೆರವಣಿಗೆಯಲ್ಲಿ ಸ್ಥಾನಮಾನಗಳು. ಪ್ರದರ್ಶಿತವಾಗಬೇಕಾದುದು ರಾಜನ ವೈಭವ. ಆ ಪ್ರಕಾಶನಕ್ಕೊದಗದ ಯಾವ ವ್ಯಕ್ತಿಗೂ, ವಸ್ತುವಿಗೂ ಅವು ಅವುಗಳ ವೈಯಕ್ತಿಕ ಗುಣೋತ್ಕರ್ಷಕ್ಕೂ ಆ ಮೆರವಣಿಗೆಯಲ್ಲಿ ಸ್ಥಾನವಿಲ್ಲ.

ಹೀಗೆ ಸಾಹಿತ್ಯದ ಮೂಲವಸ್ತು ಅನುಭೂತವಾಗಿ ಅಪರೋಕ್ಷವಾಗಿರುವ ಪ್ರತ್ಯಕ್ಷಾನುಭೂತಿಗಳು. ಇವುಗಳನ್ನು ಕವಿಪ್ರತಿಭೆ ಭಾವನಾಪ್ರತೀಕಗಳನ್ನಾಗಿ ಪರಿವರ್ತನಗೊಳಿಸುತ್ತದೆ. ಕವಿಯ ಕಲೆ ಪ್ರತ್ಯಕ್ಷಾನುಭೂತಿಯ ಮೇಲೆ ಊರಿ ನಿಂತು ಭಾವನಾಪ್ರಪಂಚಕ್ಕೆ ಹಾರಿದ ಹೊರತು ಅದಕ್ಕೆ ಸಿದ್ಧಿಯಿಲ್ಲ. ಬರಿಯ ಊಹೆಯಿಂದ ಸೃಷ್ಟವಾದ ಪ್ರತೀಕಗಳಿಂದ ರಸಪ್ರತೀತಿಯಾಗದು. ಉದಾಹರಣೆಗಾಗಿ ರಾಘವಾಂಕನ ಈ ಪದ್ಯವನ್ನು ನೋಡಿ. ಇದು ವಿಶ್ವಾಮಿತ್ರನ ಕೋಪವನ್ನು ವರ್ಣಿಸುವ ಬಗೆ.

ವಡಬಾಗ್ನಿ ಜಡೆವೆತ್ತುದೋ ಸಿಡಿಲು ಹೊಸ ಭಸಿತ
ವಿಡಕಲಿತುದೋ ಕಾಡಕಿಚ್ಚು ಕೃಷ್ಣಾಜಿನವ
ನುಡಕಲಿತುದೋ ಪ್ರಳಯವಹ್ನಿ ತಪವಿರ್ದುದೋ ಭಾಳಲೋಚನನ ಕೋಪ
ಕಡುಗಿ ಮುನಿಯಾಯ್ತೊ ಹೇಳೆನೆ ಕಣ್ಣಕಡೆ ತೋರ
ಗಿಡಿಗೆದರೆ ಮೀಸೆಗೂದಲು ಹೊತ್ತಿ ಹೊಗೆಯೆ ಬಿರು
ನುಡಿಗಳುರಿಯುಗುಳೆ ವಿಶ್ವಾಮಿತ್ರನುರವಣಿಸಿ ಬಂದನವನೀಶನೆಡೆಗೆ.

ಈ ಪದ್ಯದ ಮೊದಲ ಮೂರೂ ಮುಕ್ಕಾಲು ಪಾದಗಳಲ್ಲಿ ಬರಿಯ ಊಹೆಯ ಕುಣಿತವನ್ನು ಕಾಣುತ್ತೇವೆ. ಬುದ್ಧಿ ಎದ್ದಿದೆ, ಪ್ರತಿಭೆ ತೂಕಡಿಸುತ್ತಿದೆ. ಈ ಬೌದ್ಧಿಕ ಉತ್‌ಪ್ರೇಕ್ಷೆಗಳಿಗೆ ವಿಶ್ವಾಮಿತ್ರನ ಕೋಪವನ್ನು ಹೊರುವ ತ್ರಾಣವಿಲ್ಲ. ಭಾವ ಸಂವಾಹನಕ್ಕೆ ಅಸಮರ್ಥವಾಗಿವೆ ಇವು. ಏಕೆಂದರೆ ಇವುಗಳ ಮೇಲೆ ಪ್ರತಿಭೆ ತನ್ನ ಕೈಯಾಡಿಸಿಲ್ಲ. ಏಕೆ? ಪ್ರತಿಭೆಯ ಸಂಸ್ಕರಣಕ್ಕೆ ಒದಗತಕ್ಕ ಲೌಕಿಕಾನುಭೂತಿ ಕವಿಗೆ ಅಲ್ಲಿ ಒದಗಿಲ್ಲ—ಅದರಿಂದ. ಬಡಬಾಗ್ನಿ ಜಡೆವೊತ್ತುದೋ—ಇತ್ಯಾದಿಗಳಲ್ಲಿ ಜಡೆಗೂ ಬಡಬಾಗ್ನಿಗೂ ಇರುವ ಸಂಬಂಧ ಊಹೆಯ ಭೌತಸಂಬಂಧ—ಭಾವನೆಯ ರಾಸಾಯನಿಕ ಸಂಬಂಧವಲ್ಲ. ಆದರೆ ಕಣ್ಣಕಡೆ ತೋರಗಿಡಿಗೆದರೆ, ಮೀಸೆಗೂದಲು ಹೊತ್ತಿಹೊಗೆಯೆ, ಬಿರುನುಡಿಗಳುರಿಯುಗುಳೆ—ಮುಖ್ಯವಾಗಿ ಮೀಸೆಗೂದಲು ಹೊತ್ತಿ ಹೊಗೆಯೆ, ಅದುರುತ್ತಿರುವ ಚೆಂದುಟಿಗಳ ಮೇಲೆ ಗಡ್ಡ ಮತ್ತು ಜಡೆಯೊಡನೆ ಬೆರೆತು ಹೋಗಿ ಬಿರುನುಡಿಗಳ ಸಿಡಿತಕ್ಕೆ ಸರಿಯಾಗಿ ತಾಂಡವವಾಡುತ್ತಿರುವ ಕಪ್ಪು ಮೀಸೆ—ಆ ಮುನಿಯ ಕೋಪಾಗ್ನಿಗೆ ತಕ್ಕ ಹೊಗೆಯಿದು. ಕೆಂಡವನ್ನು ಕಾರುವ ಈ ಮುಖ

ದಿಂದ, ಹೊಗೆಯನ್ನು ಗುಳುವ ಈ ಮೀಸೆಯಿಂದ ಆತನ ಕೋಪದ ಭಾವ ನಮಗೆ ತಟ್ಟುತ್ತದೆಯೇ ಹೊರತು ಮಿಕ್ಕ ವರ್ಣನೆಗಳ ಬೌದ್ಧಿಕಶೈತ್ಯದಲ್ಲಿ ಎಂತು? ಆದುದರಿಂದ ಕವಿ ಮಣ್ಣನ್ನು ಹೊನ್ನಾಗಿಸಬಲ್ಲನೇ ಹೊರತು ಬರಿ ಬಯಲನ್ನಲ್ಲ. ಇದು ಇದು ಇದು ಎಂದು ಆಯಾ ಲೌಕಿಕಾನುಭವದ ಮೂಲದ್ರವ್ಯಗಳನ್ನು ತೋರುತ್ತಾ, ಇದಲ್ಲ ಇದಲ್ಲ ನನ್ನ ಗಮ್ಯವೆಂದು ಸದಾ ವಿಹರಣಶೀಲವಾಗಿ ಕವಿಯ ಭಾವನೆ ರಸಲೋಕದಲ್ಲಿ ಸಂಚರಿಸುತ್ತದೆ—ಬ್ರಹ್ಮಭೂತನಾಗಬೇಕೆಂದು ಬಯಸುವ ಯೋಗಿ ಲೋಕದಲ್ಲಿ ಆಸಕ್ತನಾಗುವಂತೆ.

ಮೇಲೆ ಹೇಳಿದ ಪ್ರಕಾರವಾಗಿ—ಸಾಹಿತ್ಯದ ಮುಖ್ಯಕರ್ಮ ಭಾವನಾನಿರೂಪಣದಿಂದ ರಸಪ್ರತೀತಿಯನ್ನು ನಮಗೆ ಉಂಟುಮಾಡುವುದು. ಇದಕ್ಕೆ ಉಪಷ್ಟಂಭಕವಾಗಿ ಅದರ ಲೋಕಪ್ರತಿಫಲನವೆಂಬ ಗೌಣಕ್ರಿಯೆ ಜರುಗುತ್ತದೆ ಅಷ್ಟೇ. ವಾಸ್ತವಜಗತ್ತಿನ ವರ್ಣನೆಗಿಂತಲೂ ವಾಸ್ತವಜಗತ್ತೇ ಸರಸವಾದದ್ದಲ್ಲವೇ. ಈ ವಾಸ್ತವಜಗತ್ತಿಗಿಂತಲೂ ಅದರಿಂದ ಉದ್ಧೃತವಾದ ಭಾವಪ್ರಪಂಚವೋ ಸರಸತರ, ರಮ್ಯತರ, ಸತ್ಯಸ್ಯಸತ್ಯ. ಆದುದರಿಂದ ಸುಸಂಸ್ಕೃತನೂ ಪ್ರೌಢನೂ ಆದ ಮನುಷ್ಯನಿಗೆ ಅದ್ಯತನ ಜಗತ್ತಿಗಿಂತಲೂ ಈ ಕಾವ್ಯಪ್ರಪಂಚದಲ್ಲೇ ಹೆಚ್ಚು ಆಸಕ್ತಿ. ರಾಮ ರಾವಣ, ಜನಕ ದಶರಥ, ನಳ ಹರಿಶ್ಚಂದ್ರ, ಸೀತೆ ಸಾವಿತ್ರಿ, ದಮಯಂತಿ ದ್ರೌಪದಿ, ಇತ್ಯಾದಿ ಅಲ್ಪಸ್ವಲ್ಪ ವಾಸ್ತವಾಂಶರಾಗಿ ಕವಿಪ್ರತಿಭೆಯಿಂದ ಭಾವಪುಷ್ಟರಾಗಿ ಸೃಷ್ಟರಾದ ಮಹಾವ್ಯಕ್ತಿಗಳೂ ಪಂಪಾದಿ ಸರಸ್ಸುಗಳೂ ಗಂಗಾದಿ ನದಿಗಳೂ ಚಿತ್ರಕೂಟಾದಿ ಪರ್ವತಗಳೂ ಋಷ್ಯಾಶ್ರಮಗಳೂ ತಮ್ಮ ರುಚಿಯನ್ನು ಕಳೆದುಕೊಳ್ಳದೆ ಚಿರಂತನಾನಂದವನ್ನು ನಮಗೆ ಕೊಡುತ್ತಿವೆ. ತಮ್ಮ ಭಾವಸಂವಾಹನ ಸಾಮರ್ಥ್ಯದಿಂದ ವಾಸ್ತವ ಪ್ರತಿಫಲನದಲ್ಲೇ ಮುಗಿದ ಸಾಹಿತ್ಯಸೃಷ್ಟಿಗಳೆಷ್ಟೋ ಮೂಡಿ ಮೂಡಿ ಮುಳುಮುಳುಗಿ ಹೋಗುತ್ತಿವೆ ನಮ್ಮ ಕಣ್ಣೆದುರಿಗೇ.

ಆದುದರಿಂದ ಭಾವನಾಪ್ರಸರಣವೇ ಸಾಹಿತ್ಯದ ಮುಖ್ಯ ಕೆಲಸ. ಅಲ್ಲಿ ನಿಯುಕ್ತವಾದ ಶಬ್ದಗಳಿಗೆ ಅರ್ಥದ ಉಪಾಧಿಯಿರುವುದರಿಂದ ಪ್ರತಿಫಲನಕ್ರಿಯೆ ಅದಕ್ಕೆ ಅನಿವಾರ್ಯ. ಇದು ಪ್ರತಿಭೆಯಿಂದ ಮಾರ್ಪಟ್ಟು ಭಾವಸಂವಾಹನಸಮರ್ಥವಾದ ಹೊರತು ಸಾಹಿತ್ಯ ತನ್ನ ಸಿದ್ಧಿಯನ್ನು ಪಡೆಯದು. ಮಿಕ್ಕ ಎಲ್ಲ ಕಲೆಗಳಂತೆ ಆನಂದದಲ್ಲೇ ಸಾಹಿತ್ಯದ ಉಪರತಿ.

ತು. ತಿ. ನ.

ಸಂಸ್ಕೃತಿಯ ಸಾಕಾರ

"ಮನೆಮನೆಯಲಿ ನೀನಾಗಿಹೆ ಗೃಹಶ್ರೀ
ಹೆಸರಿಲ್ಲದ ಹೆಸರು ನಿನಗೆ 'ಗೃಹಸ್ತ್ರೀ'

. . . .

ಹೊಸಲಾಚೆಗೆ ನೀನೋತರೆ
ಹೊಸಲೀಚೆಗೆ ಬೆಳಕಿಲ್ಲ :
ಹೆಸರಾಸೆಗೆ ನೀ ಸೋತರೆ
ಉಸಿರಾಸೆಯೆ ನಮಗಿಲ್ಲ ;
ನಿನ್ನಿಂದಲೆ ಹಿಮ್ಮೆಟ್ಟದೆ
ಜನಜನದಾ ಕುಸಂಸ್ಕೃತಿ ;
ನಿನ್ನಿಂದಲೆ ಸೆಡೆತಡಗಿದೆ
ಮನಮನದಾ ಅಸಂಸ್ಕೃತಿ."

—ಕುವೆಂಪು

ಸಂಸ್ಕೃತಿ ಎಂದ ಕೂಡಲೇ ನಮ್ಮ ಮನಸ್ಸಿನಲ್ಲಿ ಮೊದಲು ಹಿನ್ನಲೆಯಾಗಿ ನಿಲ್ಲುವುದು ಹೆಣ್ಣಿನ ಚಿತ್ರ. ನಮ್ಮ ತಾಯಿಯ ನೆನಪಾಗುವುದು. ಸಂಸ್ಕೃತಿ ಎಂಬ ಪದ ಮತ್ತು ಅದರ ಮೊದಲ ಪಾಠಗಳನ್ನು ನಾವು ಕಲಿಯುವುದೂ ತಾಯ ಅಕ್ಕರೆಯ ಪಾಲನೆಯಲ್ಲಿ. ಸಂಸ್ಕೃತಿಯ ಮೊದಲ ಗುರು ತಾಯಿ. ತಾಯ ಮಮತೆಯ ಎದೆಗೊರಗಿ ಒಲವಿನ ಹಾಲನ್ನು ಹೀರುತ್ತ ಶಿಶು ತಾಯ ಸಂಸ್ಕಾರ ಸಂಸ್ಕೃತಿಗಳನ್ನು ಪರೋಕ್ಷವಾಗಿ ರಕ್ತಗತಮಾಡಿಕೊಳ್ಳುತ್ತದೆ. ಸಂಸ್ಕೃತಿಯ ಉತ್ತಮಗುಣಗಳೆನಿಸಿಕೊಂಡಿರುವ ಪ್ರೀತಿ, ನಿಸ್ಪೃಹತೆ, ಕರ್ತವ್ಯಶೀಲತೆ, ಕರುಣೆ, ಕ್ಷಮೆ, ಸಹನೆ, ವಿಶಾಲಮನೋಭಾವನೆ, ನಯ, ವಿನಯ ಇವೆಲ್ಲವೂ ಹೆಣ್ಣುಗುಣಗಳೆಂದೆನಿಸಿಕೊಂಡಿರುವುದು ಸಂಸ್ಕೃತಿ-ಸ್ತ್ರೀ ಇವುಗಳ ಅಭಿನ್ನ ಬಾಂಧವ್ಯವನ್ನು ಸೂಚಿಸುತ್ತದೆ. ಸಾಹಿತ್ಯ, ಕಲೆ, ಜೀವನಗಳಲ್ಲಿ ಬರುವ ಸೌಂದರ್ಯಪ್ರೀತಿ, ಅಲಂಕಾರದ ಪ್ರಾಮುಖ್ಯತೆ, ಇಂಗಿತಜ್ಞತೆ, ಲಾಲಿತ್ಯ, ಶಾಂತವಾತಾವರಣ, ಅಪಾರ ಕರುಣೆ, ಅತೀವ ಕಲ್ಪನೆ, ನಾದಮಾಧುರ್ಯ, ನಯ, ಕೋಮಲತೆ ಮುಂತಾದ ಶ್ರೇಷ್ಠಾಂಶಗಳೂ ಹೆಣ್ಣಿನಲ್ಲಿ ಸ್ವಾಭಾವಿಕವಾಗಿ ನಿರೀಕ್ಷಿಸುವ, ಆರೋಪಿಸುವ ಗುಣಗಳೇ. ಎಲ್ಲ ಸಾಹಿತ್ಯ, ಕಲೆ, ಜೀವನಗಳಿಗೂ ಜೀವಸ್ವರೂಪವಾದ (ಆಧಾರ ಮತ್ತು ವಸ್ತು) ಪ್ರಕೃತಿ, ನವಕಲೆಗಳ ಅಧಿದೇವತೆಗಳೂ (ಗ್ರೀಕರ ಪುರಾಣದಂತೆ) ನಮ್ಮ ಸಕಲ ವಿದ್ಯಾಧಿದೇವತೆ,

ಸಂಪದದ ದೇವತೆ, ವಿಶ್ವವನ್ನೇ ಸೃಷ್ಟಿಸಿರುವ ಆದಿಶಕ್ತಿ, ಇವು ಮನುಷ್ಯಕಲ್ಪನೆಗೆ ಅನಾದಿ ಕಾಲದಿಂದಲೂ ಸ್ತ್ರೀ ಸ್ವರೂಪದಲ್ಲೇ ಬಂದಿರುವುದರ ಗೂಢವೂ ಈ ಸ್ತ್ರೀ ಶಕ್ತಿಯ ಬೃಹತ್ ಸ್ವರೂಪದಲ್ಲಿ ಅಡಗಿದೆ.

ಉತ್ತಮ ಸಂಸ್ಕೃತಿ ಎಂದರೇನು ಎಂಬುದಕ್ಕೆ 'ಆಸ್ಕರ್ ವೈಲ್ಡ್' ಎಂಬ ಆಂಗ್ಲ ಸಾಹಿತಿಯೊಬ್ಬ "ಸೌಂದರ್ಯ ಪ್ರೀತಿ" ಎಂದು ಉತ್ತರಿಸಿದನಂತೆ. 'ಸೌಂದರ್ಯ' ಎಂಬುದಕ್ಕೆ ತುಂಬ ವಿಶಾಲವಾದ ಉನ್ನತವಾದ ಅರ್ಥವ್ಯಾಪ್ತಿ ಇದೆ. ಅದನ್ನೇ ಸತ್ಯ, ಶಿವ ಎಂದು ಬೇರೆ ಬೇರೆ ಮುಖಗಳಲ್ಲಿ ಕರೆಯುತ್ತಾರೆ. ತೀರ ಸಣ್ಣ ಅರ್ಥದಲ್ಲೂ ಸಂಸ್ಕೃತಿಗೆ ಕುರುಹು ಸೌಂದರ್ಯಪ್ರೀತಿ. ಸೌಂದರ್ಯವನ್ನು ಕಾಣುವುದಕ್ಕೂ ಪ್ರೀತಿಸುವುದಕ್ಕೂ ತುಂಬಾ ಸಂಸ್ಕಾರ ಪಡೆದಿರಬೇಕು. ಸಂಸ್ಕೃತಿಯ ಮಟ್ಟವೂ ಪ್ರೀತಿಸುವ ಸೌಂದರ್ಯದ ಮಟ್ಟದ ಮೇಲೆ ನಿರ್ಧರವಾಗುತ್ತದೆ. ಅತ್ಯುತ್ತಮ ಸ್ಥಿತಿಯಲ್ಲಿ ಶೀಲ ಅಥವಾ ಆತ್ಮ ಸೌಂದರ್ಯ ಅಥವಾ ಅಂತರಂಗದ ಚೆಲುವು ಮೆಚ್ಚುಗೆಗೆ, ಪೂಜ್ಯತೆಗೆ ಪಾತ್ರವಾಗುತ್ತದೆ. ಅದು ಸಂಸ್ಕೃತಿಯ ಆದರ್ಶ ಸ್ಥಿತಿ. ನಮ್ಮ ರಾಮಾಯಣ ಮಹಾ ಕಾವ್ಯದಲ್ಲಿ ಈ ಸಂಸ್ಕೃತಿಯ ಚಿತ್ರವನ್ನು ಸಮಾಜ ಪದ್ಧತಿಯಲ್ಲಿ, ವ್ಯಕ್ತಿವ್ಯಕ್ತಿಗಳ ಹಿಮಾಚಲ ಸದೃಶಬಾಳಿನ ನಿತ್ಯ ನಡೆನುಡಿಗಳಲ್ಲಿ ಕಾಣುತ್ತೇವೆ. ಸೀತೆ, ಅಹಲ್ಯೆ, ಮಂಡೋದರಿ, ಶಬರಿ, ಅನಸೂಯೆ, ಊರ್ಮಿಳಾ . . . ಎಂತಹ ಆದರ್ಶಮಹಿಳೆಯರು! ಆ ಸಮಾಜದ (ಜನಾಂಗದ) ಅತ್ಯುನ್ನತ ಶ್ರೇಷ್ಠ ಸಾಂಸ್ಕೃತಿಕ ಜೀವನದಾಗಸದಲ್ಲಿ ನಿರಂತರಾದರ್ಶ ಜ್ಯೋತಿಗಳಾಗಿ ನಿಂತ ನಕ್ಷತ್ರಗಳು! ಮಹಾಕವಿ ರಸಋಷಿ ವಾಲ್ಮೀಕಿಯ ಕಲ್ಪನೆಯಲ್ಲಿ ಮೂಡಿದ ಆದರ್ಶದ ಅತ್ಯುನ್ನತ ಮಟ್ಟದಲ್ಲಿ ಅಮರ ವ್ಯಕ್ತಿಗಳಾಗಿ ನಿಲ್ಲುತ್ತಾರೆ ಈ ಪತಿವ್ರತಾ ಮಹಿಳೆಯರು. ಅಂತಹ ಒಬ್ಬ ಮಹಿಳೆಯ ಹುಟ್ಟಿನಿಂದ ಬಾಳಿನಿಂದ ಯಾವ ಜನಾಂಗದ ಸಾಂಸ್ಕೃತಿಕ ಜೀವನವಾದರೂ ಸಾರ್ಥಕವಾದೀತು.

ಸಂಸ್ಕೃತಿಯ ಹುಟ್ಟಿಗೆ ಕಾರಣಳಾದಂತೆ ಹೆಣ್ಣು ಸಂಸ್ಕೃತಿಯ ರಕ್ಷಕಳೂ ಆಗಿರುವುದು ಇತಿಹಾಸಸಾಮಾನ್ಯವಾದ ವಿಷಯ. ವಿನಾಶಕಾರಕ ಮಹಾ ಸಮರವಾದನಂತರ ಆದ ಅಪಾರ ಜನಸಂಪತ್ತಿನ ನಷ್ಟವನ್ನು ನೀಗಿ ಪುನರ್ ನಿರ್ಮಾಣಮಾಡುವ ಕಾರ್ಯ ಯುದ್ಧಕಾಲಕ್ಕಿಂತ ಸಂಕಟಕರ, ಕಷ್ಟಕರ. ಯುದ್ಧವೆಂದರೆ ಬರೀ ಲಕ್ಷಾಂತರ ಜನರ ಮರಣ, ಇಲ್ಲವೆ ರಾಷ್ಟ್ರಶಕ್ತಿಗೆ ಮೀರಿ ಆದ ಸಂಪತ್ತಿನ ನಷ್ಟ ಗಮನಕ್ಕೆ ಬರುವುದು ಸಾಮಾನ್ಯ. ಅದರೊಂದಿಗೆ ಸಂಸ್ಕೃತಿಗೆ, ಜನಾಂಗದ ಜೀವಾಳಕ್ಕೇ, ಹೃದಯಕ್ಕೇ, ಆತ್ಮಕ್ಕೇ ಆಗುವ ಆಘಾತವನ್ನು ನೆನೆದರೆ ನೈರಾಶ್ಯದ ಶೂನ್ಯಪಾತಾಳಕ್ಕೇ ಕುಸಿದುಬೀಳುತ್ತೇವೆ. ಬಿದ್ದ ಕಟ್ಟಡವನ್ನು

ಮೊದಲಿಗಿಮ್ಮಡಿಯಾಗಿ ಭವ್ಯವಾಗಿ ಕಟ್ಟಲು ಸಮರ್ಥರಾಗಬಹುದು; ಆದರೆ ಬಲವಾದ ಆಘಾತದಿಂದ ಘಾಸಿಗೊಂಡ ಸಂಸ್ಕೃತಿಯನ್ನು ಮೊದಲ ಸ್ಥಿತಿಗೆ ತರುವುದು ಅನೇಕ ದಶಕಗಳನ್ನು ತೆಗೆದುಕೊಳ್ಳುತ್ತದೆ. ಜನಾಂಗದ ಜೀವನದಲ್ಲಾದ ಈ ಅಪಶ್ರುತಿಯನ್ನು ಸರಿಪಡಿಸಲು, ಹೃದಯಕ್ಕಾದ ಅತೀವ ವೇದನಾಕಾರಕ ಗಾಯವನ್ನು ಮಾಯಿಸಲು ಯಾವುದಾದರೂ ಅತಿಮಾನುಷ ಶಕ್ತಿಯೊಂದು ಬಂದೀತೆ ಎಂದು ಕರುಣಾರ್ದ್ರ ದೃಷ್ಟಿಯಿಂದ ಪ್ರಾರ್ಥಿಸಿ ಹಾರೈಸುತ್ತೇವೆ. ಈ ಎಲ್ಲಾ ನೋವುಗಳನ್ನೂ ಆಧ್ಯಾತ್ಮಿಕ ಅಮೃತಸಂಜೀವನದ ಕೋಮಲಸ್ಪರ್ಶದಿಂದ ಹೋಗಲಾಡಿಸಿ ನೂತನ ಚೇತನೋತ್ಸಾಹಗಳನ್ನು ನೀಡುವ ಅಭಯಹಸ್ತ ನಮ್ಮನ್ನು ನೈರಾಶ್ಯದ ಪಾತಾಳದಾಳದಿಂದ ಮೇಲೆತ್ತಲು ಬರುತ್ತದೆ. ನಮ್ಮ ಹೃದಯದಾಳದಿಂದ ಹೊಮ್ಮಿದ ಪ್ರಾರ್ಥನೆಗೆ ಓಗೊಟ್ಟು ಈ ಅಂತಃಕರಣದ ಅಭಯವಾಣಿ ಕೇಳಿಬರುತ್ತದೆ. ಬಿದ್ದು ನಿರಾಶೆಗೊಂಡ ಜನಾಂಗ ತನ್ನ ಸಂಸ್ಕೃತಿಯ ಜೀವನವನ್ನು ಚೇತರಿಸಿಕೊಳ್ಳುತ್ತದೆ. ಚೇತನಗೊಂಡು ಮೇಲೆದ್ದು ಮತ್ತೆ ಹೊಸಕಳೆಯಿಂದ ಮುಂದುವರಿಯುತ್ತದೆ. ಕೃತಜ್ಞತೆಯಿಂದ ರಕ್ಷಿಸಿದ, ಚೇತನವಿತ್ತ ಆ ಸಂಜಿವನಶಕ್ತಿಗೆ ನಮಿಸುತ್ತದೆ. ಆ ಶಕ್ತಿಯನ್ನು ಜಗನ್ಮಾತೆ, ಮಹಾತಾಯಿ ಎಂದು ಪೂಜಿಸಿ ನಲಿಯುತ್ತದೆ. ಆ ಪ್ರಕೃತಿಶಕ್ತಿಯ ಅಧ್ಯಕ್ಷತೆಯಲ್ಲಿ ಮತ್ತೆ ಮನೋಹರವಾದ ಮನುಷ್ಯಜೀವನಲೀಲೆ ಆರಂಭವಾಗುತ್ತದೆ. ಮನೆಯಲ್ಲಿ ತೊಡಕುಂಟಾದಾಗ, ಸಣ್ಣಪುಟ್ಟ ಜಗಳಗಳಿಂದ ಮನಸ್ತಾಪವಾಗಿ ಅಸುಖ, ಅಶಾಂತಿ ತಲೆದೋರಿದಾಗ ಎಲ್ಲರೂ ತಾಯ ಕಡೆ, ಮನೆಯ ಯಜಮಾನಿಯ ಕಡೆ ನೋಡುತ್ತಾರೆ. ಹಾಗೆಯೇ ರಾಷ್ಟ್ರದಲ್ಲೂ. ಬುದ್ಧಿಶಕ್ತಿ ಪ್ರಬಲವಾಗಿ ವಿನಾಶಕ್ಕಿಳಿದು ಲೋಕ ಕಲ್ಯಾಣಕಾರ್ಯದಲ್ಲಿ ಕೈಸಾಗದೆ ಸೋತಾಗ, ಹೃದಯಶಕ್ತಿಯ ನೆರವಿನ ಅತ್ಯಾವಶ್ಯಕತೆ ತೋರಿಬರುತ್ತದೆ. ಪಾಶವೀ ಅಥವ ದಾನವೀ ಗುಣಗಳ ಕೈಮೇಲಾದಾಗ, ಮಾನವ-ದೈವೀ ಗುಣಗಳನ್ನು ನೆನಪಿಗೆ ತರುವುದರ ಆವಶ್ಯಕತೆ ಬಹಳವಿರುತ್ತದೆ. ಹೆಣ್ಣು ಜನಾಂಗದ ಸಂಸ್ಕೃತಿಯ ಪ್ರತೀಕ. ಸಂಸ್ಕೃತಿಯ—ಶೀಲ ಸೌಂದರ್ಯಗಳ—ಜೀವನಮಟ್ಟವನ್ನು ನಿರ್ಧರಿಸುವವಳೂ ಆಕೆಯೇ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" (Where women are respected, there Gods are pleased). ಯಾವ ಜನಾಂಗ ಹೆಣ್ಣಿಗೆ ಉತ್ತಮ ಗೌರವಸ್ಥಾನವನ್ನು ಕೊಟ್ಟಿರುವುದಿಲ್ಲವೋ ಆ ಜನಾಂಗ ಎಂದೂ ಸುಸಂಸ್ಕೃತ ಎನಿಸಿಕೊಳ್ಳುವುದಿಲ್ಲ, ಮತ್ತು ಅದರ ಅಭ್ಯುದಯ ಉದ್ಧಾರಗಳೂ ಆಗುವುದಿಲ್ಲ.

ಪ್ರಾಚೀನ ಹಿಂದೂಸಮಾಜದ ಸಂಸ್ಕೃತಿ ಆದರ್ಶರೀತಿಯಲ್ಲಿತ್ತು ಎಂದು

ಇತಿಹಾಸ ಪ್ರಸಿದ್ಧವಾಗಿರುವುದಷ್ಟೆ? ಆಗ ನಮ್ಮ ಮಹಿಳೆಯರಿಗೆ ಪ್ರಾಚೀನರು ಕೊಟ್ಟಿದ್ದ ಸ್ಥಾನವನ್ನು ಕೊಂಚ ಲಕ್ಷ್ಯಕ್ಕೆ ತಂದುಕೊಳ್ಳಿ. ಮಹಿಳೆಯರನ್ನು ಪ್ರೀತಿ ಗೌರವಗಳಿಂದ ಕಂಡುದೂ, ಅವರನ್ನೇ ಸಮಾಜದ ಶೀಲರಕ್ಷಣೆಯ ಭಾರವನ್ನು ಹೊರುವಂತೆ ಮಾಡಿ ಹಿರಿಯಸ್ಥಾನವನ್ನು ಕೊಟ್ಟುದೂ ಸಂಸಾರಗಳ ಆಧಾರ ಸ್ತಂಭಗಳನ್ನಾಗಿ ಮಾಡಿದುದೂ ಆ ಶ್ರೇಷ್ಠ ವ್ಯವಸ್ಥೆಯ ಸಾಂಸ್ಕೃತಿಕ ಪ್ರಗತಿಗೆ ಕಾರಣಗಳು.

ನಮ್ಮ ಸಮಾಜದ ವ್ಯವಸ್ಥೆಗೆ ಹಾಕಿದ ಈ ಬಲವಾದ ಅಸ್ತಿಭಾರದಿಂದಲೇ ಇಷ್ಟುಕಾಲ ನಮ್ಮ ಸಂಸ್ಕೃತಿ ಪ್ರಪಂಚದ ಇತರ ರಾಷ್ಟ್ರಗಳ ಸಂಸ್ಕೃತಿಯಂತೆ ಪರಾಕ್ರಮಣಕ್ಕೆ ಸಿಲುಕಿ ಹಾಳಾಗದೆ ಇಂದಿನವರೆಗೂ ಜೀವಂತವಾಗಿ ಉಳಿದು ಬಂದಿರುವುದು. ನಡುನಡುವೆ ಉಂಟಾದ ಪರದೇಶೀಯ ಆಕ್ರಮಣ, ಪರಸಂಸ್ಕೃತಿ ಗಳ ಘರ್ಷಣೆಗಳಿಂದ ಅನೇಕ ಸ್ಥಿತ್ಯಂತರಗಳಾಗಿವೆ. ನಮ್ಮ ಬಾಳಿನಲ್ಲಿ ಮೂಲ ವ್ಯವಸ್ಥೆ ಅಚ್ಚಳಿಯದೆ ನಿಲ್ಲಲಾಗಿಲ್ಲ. ಅನೇಕ ಲೋಪದೋಷಗಳೂ ಕಸ ಕೊಳಚೆಗಳೂ ತಿರುಳು ಕಳೆದು ಉಳಿದ ಬರೀ ಕರಟ ಸ್ವರೂಪಗಳೂ ಅಲ್ಲಲ್ಲಿ ತುಂಬಿಕೊಂಡಿವೆ. ಹಿಂದೆ ಶೀಲರಕ್ಷಣೆಯ ಜವಾಬ್ದಾರಿಯ ರೂಪವಾಗಿದ್ದ ಸ್ತ್ರೀಯ ಸ್ವಾತಂತ್ರ್ಯಪರಿಮಿತಿ ಇಂದು ಕೇವಲ, ಮನೆಯ ತೊತ್ತು ಎಂಬ ಅಧೋಗತಿಗಿಳಿದಿದೆ. ಸ್ವಾತಂತ್ರ್ಯ ಎಂಬ ಪದದ ಅರ್ಥ ವ್ಯತ್ಯಾಸವಾಯಿತು. ಸ್ತ್ರೀಯ ಅಶಿಕ್ಷಣ, ಅಂಧಜ್ಞಾನ, ಮೂಢತನ, ಇವು ಈ ಸಮಾಜ ಪದ್ಧತಿ ಖಿಲವಾಗಿ ಅಂಧ ಸಂಪ್ರದಾಯಗಳ ಕೊಳೆ ಬೆಳೆದಾಗ ಉಂಟಾದ ದುಷ್ಪರಿಣಾಮಗಳಲ್ಲಿ ಮುಖ್ಯವಾದುವು. ಇದರಿಂದಲೇ ಸಾಮಾನ್ಯ ಸಂಸ್ಕೃತಿಯೂ ಹೀನದೆಸೆಗೆ ಬಂದಂತಿರುವುದು. ಪಾಶ್ಚಾತ್ಯ ಸಂಸ್ಕೃತಿಯ ಸಂಸರ್ಗವಾದ ಮೇಲೆ ಅನೇಕ ವಿಚಾರ, ಭಾವನೆಗಳ ಮಾರ್ಪಾಟಾಗಿದೆ. ಈಗಿರುವ ನಮ್ಮ ಸಮಾಜದ ಪದ್ಧತಿ, ಸಂಪ್ರದಾಯಗಳು ವಿಚಾರದ ಒರೆಗಲ್ಲಿಗೆ ಬಿದ್ದಿವೆ. ಅನೇಕ ಸಾಮಾಜಿಕ ಸಮಸ್ಯೆಗಳು ಹುಟ್ಟಿವೆ. ಸ್ತ್ರೀಯ ಸ್ಥಾನಮಾನ, ಗೌರವ, ಸ್ವಾತಂತ್ರ್ಯ ಮುಂತಾದ ವಿಚಾರಗಳು ಬಿಸಿಯಾಗಿ ಚರ್ಚಿತವಾಗುತ್ತಿವೆ. ಚಳುವಳಿ ಗಳೂ ಆಗುತ್ತಿವೆ. ಬಹು ವರ್ಷಗಳು ಒಂದೇ ರೀತಿಯ ಸಂಪ್ರದಾಯ ನಡೆದುಬಂದು ಹೊಸಗಾಳಿ ಬೆಳಕುಗಳನ್ನು ಆದರಿಸದಷ್ಟು ಅಂಧಪದ್ಧತಿಯಾಗಿ ಜಿಡ್ಡುಕಟ್ಟಿದೆ ಅಷ್ಟೆ. ಈ ಬಾಹ್ಯ ಲೋಪದೋಷಗಳನ್ನು ತಿದ್ದಿ ಹೊಸ ಯುಗದ ವಾತಾವರಣಕ್ಕೆ ಹೊಂದಿಸಬೇಕು. ಆದರೆ ಅಂತಃ ಸತ್ವ ಮಾತ್ರ ನಮ್ಮ ಹಿಂದಿನ ಶ್ರೇಷ್ಠಯುಗದ ಉತ್ತಮ ಸಂಸ್ಕೃತಿಯ ಅಂಗೀಕೃತವಾದ ರೀತಿಯೇ ಇರುವಂತೆ ಕಾಪಾಡಿಕೊಂಡು ಬರಬೇಕು. ಅಸಕ್ಷರಸ್ಥರೂ ಅಸಂಸ್ಕೃತರೂ (ಪಾಶ್ಚಾತ್ಯ ನಾಗರಿಕ ಜೀವನದ

ದೃಷ್ಟಿಯಿಂದ) ಎನಿಸಿಕೊಂಡಿರುವ ಹಳ್ಳಿಯ ಹೆಣ್ಣುಮಕ್ಕಳು ಮೇಲೆ ಎಷ್ಟೇ ಅಶಿಕ್ಷಿತರೆನಿಸಿಕೊಂಡಿದ್ದರೂ ಅವರ ಜೀವನಾಂತರಂಗದಲ್ಲಿ ನಮ್ಮ ಪ್ರಾಚೀನ ಪತಿವ್ರತಾ ಸತಿಯರ, ಆದರ್ಶ ಮಹಿಳೆಯರ ತಪಃಪ್ರಭಾವದ ಕುರುಹಾದ ನಯ, ವಿನಯ, ಸೌಜನ್ಯ, ಹೃದಯ ಸರಳತೆ ಮುಂತಾದ ಗುಣಗಳು ನಂದಾದೀಪದಂತೆ ಬೆಳಗುತ್ತಿರುವುದು ಅನುಭವಗೋಚರವಾಗುತ್ತದೆ. ವಿದ್ಯಾವತಿ ಎಂದರೆ—ಓದು ಬರೆಹ ಬಲ್ಲವಳು ಮಾತ್ರ ಎಂದು ಅರ್ಥಮಾಡುವವರು ಈ ಹಳ್ಳಿಯ ಹೆಣ್ಣು ಮಕ್ಕಳನ್ನು ಕೀಳಾಗಿ ಕಾಣಬಹುದು. ನಮ್ಮ ಉಚ್ಚ ಸಂಸ್ಕೃತಿಯ ಜ್ಯೋತಿ ಇನ್ನೂ ಪ್ರಕಾಶ ಪೂರ್ಣವಾಗಿರುವುದು ಅಂತಹ, ನಾಗರಿಕತೆಯ ಅಪವಿತ್ರ ಸ್ಪರ್ಶಕ್ಕೆ ಸಿಲುಕದ ಮಹಿಳೆಯರಲ್ಲಿಯೇ ಎಂಬುದನ್ನು ಕಾಣಬಹುದು.

ಹಾಗೆಂದು ನೂತನ ವಿದ್ಯಾಶಿಕ್ಷಣ ಪಡೆದವರೆಲ್ಲ ಕೆಟ್ಟುಹೋದವರು, ತಪ್ಪು ದಾರಿ ಹಿಡಿದವರು ಎಂದು ಅಭಿಪ್ರಾಯವಲ್ಲ. ನಮ್ಮ ಒಳ್ಳೆಯತನಕ್ಕಾಗಲಿ, ಕೆಟ್ಟತನಕ್ಕಾಗಲಿ ಬರೀ ಯಾವೊಂದು ವಿದ್ಯೆಯೇ ಕಾರಣವಲ್ಲ. ಅವಿಚಾರಿಗಳಾಗಿ 'ಧರ್ಮ'ವನ್ನು ಬಿಟ್ಟಿರುವವರು ಎಲ್ಲಿಯೂ ಕೆಲಕೆಲವರು ಇರಬಹುದು. ಇದು ವಿದ್ಯಾಭ್ಯಾಸದ ತಪ್ಪಲ್ಲ; ಹಾಗೆಯೇ ಓದುಬಾರದವರ ತಪ್ಪೂ ಅಲ್ಲ. ಓದುಬರಹ ಬಾರದ ನಮ್ಮ ಕೆಲವು ಸಂಸಾರಗಳ ಯಜಮಾನಿಯರು ಇದಕ್ಕೆ ನಿದರ್ಶನ. ಮನೆಗೂ ಸುಖ ಸಂತೋಷ ದಾಯಕವಾಗಿ, ನೆರೆಹೊರೆ ನೋಡುವ ನಾಲ್ಕು ಜನಕ್ಕೂ ಮೆಚ್ಚಿಗೆಯಾಗಿ ಅವರು ಎಷ್ಟು ಒಪ್ಪವಾಗಿ ಮನೆಯನ್ನು ನಡೆಸಿಕೊಂಡು ಹೋಗುತ್ತಾರೆ! ಮನೆಕೆಲಸವನ್ನು ಸರಿಯಾಗಿ ನೋಡಿಕೊಳ್ಳುವುದೂ ಮನೆಯಲ್ಲಿರುವ ಎಲ್ಲರ ಸುಖಕ್ಕೂ ಮುಖ್ಯಕಾರಣರಾಗಿರುವುದೂ ಮನೆಗೆ ಬಂದ ಅತಿಥಿಗಳು ನಂಟರಿಷ್ಟರು ಬಂಧುಮಿತ್ರರುಗಳನ್ನೆಲ್ಲ ಸರಿಯಾಗಿ ಆದರಿಸಿ ಉಪಚರಿಸುವುದೂ, ನೆರೆಹೊರೆಯವರ ಕಷ್ಟಸುಖಗಳಲ್ಲಿ ಸ್ತ್ರೀ ಸಹಜವಾದ ಲಾಲಿತ್ಯ ಅನುಕಂಪ ಮನೋಭಾವಗಳಿಂದ ನೆರವಾಗುವುದೂ ಇವೆಲ್ಲ ಅವರಿಗೆ ಓದು ವಿದ್ಯೆಗಳಿಂದ ಬಂದುವೇ? ಇದು ನಿಜವಾದ ಸಂಸ್ಕೃತಿ. ವಿದ್ಯೆ ಕಲಿತ ಮಾತ್ರದಿಂದ ಈ ಸಂಸ್ಕೃತಿ ಅಳಿಯುವುದೆಂದಲ್ಲ. ಈ ಸಂಸ್ಕಾರ ವಿದ್ಯೆ ಕಲಿತ ಮೇಲೂ ಉಳಿದುಕೊಂಡು ಬರಬೇಕು. ವಿದ್ಯೆಯಿಂದ ಹೃದಯ ವಿಕಾಸಕಾರಕ ಬೆಳಕೂ ಈ ಗೃಹಣೀ ಸಂಸ್ಕಾರವೂ ಕೂಡಿ ಸಮರಸವಾದರೆ ಅದು ದಿವ್ಯಜೀವನ; ಆ ಮನೆ ಸ್ವರ್ಗದಂತೆ ತೊಳಗಿ ಬೆಳಗುತ್ತಿದೆ. ಅಂತಹ ಮನೆಗಳಿಂದ ಕೂಡಿದ ಸಮಾಜ ರಾಷ್ಟ್ರದ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸುವುದರಲ್ಲಿ ನೆರವಾಗುತ್ತದೆ.

ಪಾಶ್ಚಾತ್ಯ ನಾಗರೀಕತೆಯಲ್ಲಿ ದೋಷವಾಗಿ ಬಂದಿರುವ ಸ್ತ್ರೀಯ ಸ್ವೇಚ್ಛಾಚಾರವನ್ನು ಉತ್ತಮ ಸ್ವಾತಂತ್ರ್ಯವೆಂದು ಪಾಶ್ಚಾತ್ಯ ಶಿಕ್ಷಣಪಡೆದಿರುವ ಅತ್ಯಲ್ಪ

ಸಂಖ್ಯಾತ ಭಾರತ ಮಹಿಳೆಯರಲ್ಲಿ ಕೆಲವರು ಭಾವಿಸಿ, ಸ್ತ್ರೀ ಸ್ವಾತಂತ್ರ್ಯದ ಚಳುವಳಿ ಹೂಡಿರಬೇಕು. ಉತ್ತಮ ಸ್ವಾತಂತ್ರ್ಯ ಸ್ವೇಚ್ಛಾಚಾರವಲ್ಲ ಎಂಬುದು ಅನುಭವ ಸಿದ್ಧವಾದ ವಿಷಯು. ಸಂಸಾರದಲ್ಲಿ, ಸಮಾಜದಲ್ಲಿ, ರಾಷ್ಟ್ರದಲ್ಲಿ ಪ್ರತಿಯೊಬ್ಬರೂ ಮತ್ತೊಬ್ಬರ ಸ್ವಾತಂತ್ರ್ಯಕ್ಕೆ ಮನ್ನಣೆಯೀಯಬೇಕಾಗುತ್ತದೆ. ಪರಸ್ಪರಾವಲಂಬನದ ಈ ಸ್ವಾತಂತ್ರ್ಯ ಸರ್ವಜನಹಿತದ ಪರಿಮಿತಿಯಲ್ಲಿ ಬಂಧಿತವಾಗಿದೆ. ಮನೆಯೊಳಗಣ ಪೂರ್ಣ ಅಧಿಕಾರ ಯಜಮಾನಿಯದೂ, ಹೊರಗಣ ಜವಾಬ್ದಾರಿ ಯಜಮಾನನದೂ, ಹೀಗೆ ಪರಸ್ಪರ ಹೊಂದಿಕೊಂಡು, ಅರ್ಥಮಾಡಿಕೊಂಡು, ಸಹಾನುಭೂತಿ ಸ್ನೇಹ ಗಳಿಂದ ನಡೆಯಬೇಕು. ಇದು ಒಲುಮೆಯ, ಪರಸ್ಪರಹಿತದ ಬಂಧುರವಾದ ಬಂಧನ. ಇದನ್ನು ಸಂಕಲೆಯೆಂದು ಕಡಿದೊಗೆಯಲೆತ್ನಿಸಿದರೆ ಸಮಾಜಪದ್ಧತಿಯು ನೆಲೆಗಟ್ಟಿಗೇ ಏಟು ಕೊಟ್ಟಂತಾಗುತ್ತದೆ. ಪಶ್ಚ ಸಂಸ್ಕೃತಿಯನ್ನೇ ಮತ್ತೆ ಆಶ್ರಯಿಸಬೇಕಾಗುತ್ತದೆ.

ಹೀಗೆ ವಿಚಾರಮಾಡಿ ನೋಡಿದಲ್ಲಿ ಗಂಡಸಿಗಿರುವ ಸ್ವಾತಂತ್ರ್ಯವಾದರೂ ಏನು? ಗಂಡಸಿನ ಪಾಲಿಗೆ ಬಂದಿರುವ ಕರ್ತವ್ಯಭಾರವನ್ನು ತಾವೂ ವಹಿಸಿಕೊಳ್ಳಲು ಸ್ವಾತಂತ್ರ್ಯ ಬೇಕೆನ್ನುವುದಾದರೆ ತುಂಬ ಸಂತೋಷ, ವಹಿಸಿಕೊಳ್ಳಲಿ; ಚೆನ್ನಾಗಿ ನಿರ್ವಹಿಸಲಿ. ಅಲ್ಲಿಗೂ ಅದೇ ಸ್ವಾತಂತ್ರ್ಯವಲ್ಲ. ಒಂದು ರೀತಿಯ ಕೆಲಸಬಿಟ್ಟು ಇನ್ನೊಂದು ರೀತಿಯ ಕೆಲಸಕ್ಕೊಪ್ಪಿದಂತಾಯಿತು, ಅಷ್ಟೆ. ಮನೆಯಲ್ಲೇ ಇರುವುದೂ ಮನೆಯ ಕೆಲಸಮಾಡುವುದೂ ಅಡುಗೆಮಾಡುವುದೂ ಕೀಳಲ್ಲ. ಮನೆ ಸಂಸ್ಕೃತಿಯ ತೊಟ್ಟಿಲು. ಗಂಡಸು ಬರಿ ಹೊರಗೆ ತಿರುಗುವ ಜೀವನದಲ್ಲಿ ನಿಜವಾದ ಬದುಕನ್ನು ಕಂಡು ಕೊಳ್ಳುವುದಿಲ್ಲ. ಅವನ ಜೀವನ ವಿಕಾಸವಾಗುವುದೂ ಮನೆಯೊಳಗೇ. ಅದಕ್ಕಾಗಿಯೇ ಈ ಅಮೃತ ಮಧುರ ನೆಲೆಯನ್ನು ಎಲ್ಲರೂ ಆಶ್ರಯಿಸುವುದು.

ಹೆಣ್ಣು ಯಾವ ಕಾಲಕ್ಕೂ ಮಾನವ ಜೀವನದ ಪೂರ್ಣತೆಯಲ್ಲಿ ಸಮಭಾಗಿ. ಮನೆಯಲ್ಲೇ ಇದ್ದು ಹೆಣ್ಣು ಉತ್ತಮವಾತಾವರಣಪರಿಣಾಮದ ಪೂರ್ಣಲಾಭ ವನ್ನು ಪಡೆಯಬಲ್ಲಳು. ಧರ್ಮ, ಸಂಸ್ಕೃತಿಗಳ ನಿರಂತರ ಸಾನ್ನಿಧ್ಯ, ಧ್ಯಾನಗಳಲ್ಲಿದ್ದು ಮನೆಯವರೆಲ್ಲರ ಬಾಳನ್ನೂ ಸರಿಯಾದ ಮಾರ್ಗದಲ್ಲಿ ನಡೆಸಬಲ್ಲವಳಾಗಿರುತ್ತಾಳೆ. ಹೊರಗಿನ ಜಗತ್ತಿನಲ್ಲಿ ಓಡಾಡಿ ಮಾನವೀಯತೆಯನ್ನು ಮರೆದು ಕುಸಂಸ್ಕೃತನಾಗಿ, ಒರಟನಾಗಿ ಬಂದ ಗಂಡಸು ಸಹ ಮನೆಯೊಳಗಿನ ವಾತಾವರಣದಿಂದ, ಗೃಹಿಣಿಯ ಸಂಸ್ಕೃತಿಯ ತೇಜಸ್ಸಿನಿಂದ ಹೃದಯ ಸರಳತೆಯನ್ನು ಮತ್ತೆ ಪಡೆದು, ಸಂಸ್ಕೃತಿ ಸಂಪನ್ನನಾಗುತ್ತಾನೆ. ಈ ಮನೆಯ ಪ್ರಭಾವ ಅವನ ಬಾಹ್ಯಜಗತ್ತಿನ ಜೀವನವನ್ನೂ ಉತ್ತಮ ಪಥದ ಮೇಲೆ ನಡೆಸುತ್ತದೆ. ಅದಕ್ಕೇ ಮೊದಲು ಅಂದುದು—ಸಂಸ್ಕೃತಿ ಎಂದಕೂಡಲೆ ತೊಟ್ಟಿಲಿನಿಂದ ಸಿಂಹಾಸನದವರೆಗೆ ಸುಸಂಸ್ಕೃತ ನಡೆನುಡಿ ಅಭಿರುಚಿ

ಗಳನ್ನು ನಿಯಂತ್ರಿಸುವ ಮಹಿಳೆಯ ವಿಚಾರ ಮೊದಲು ನಮ್ಮ ಮನಸಿಗೆ ಹೊಳೆಯುತ್ತದೆ ಎಂದು ನಿರಹಂಭಾವದಿಂದ ತಾಯಿ ತನ್ನ ಸಂಸಾರದಲ್ಲಿ ಆ ಮೂಲಕ ಜಗತ್ತಿನ ಸಂಸಾರದಲ್ಲಿ ಸಂಸ್ಕೃತವಂತ ಜೀವನದ ಮೂಲಬೀಜಗಳನ್ನು ಬಿತ್ತುತ್ತಾಳೆ.

ಭಾರತ ಮಹಿಳೆ ಸಂಸ್ಕೃತಿಯ ಸಾಕಾರ; ಆಕೆ ಮುಡಿಯುವ ಹೂವು, ಆಕೆ ಹಣೆಯ ಮೇಲಿಡುವ ಕುಂಕುಮದ ಚೆಲುಬೊಟ್ಟು ನಮ್ಮ ಭಾರತ ಸಂಸ್ಕೃತಿಯ ಸೌಭಾಗ್ಯಚಿನ್ಹೆ, ನಿಕೇತನ.

ಕೆ. ಬಿ. ಪ್ರಭುಪ್ರಸಾದ.

ತೋಮರ ರಗಳೆ

ಈ ಹೆಸರಿನ ಒಂದು ರಗಳೆ *South Indian Inscriptions* (texts) Volume IX, Part I ಎಂಬ ಗ್ರಂಥದ ೧೧೭ ನೆಯ ಶಾಸನದಲ್ಲಿ ದೊರೆಯುತ್ತದೆ. ಶಕ ೯೭೭ ರಲ್ಲಿ (ಕ್ರಿ. ಶ. ೧೦೫೫) ರಚಿತವಾದ ಈ ಶಾಸನದಲ್ಲಿ ಕೋಗಳಿನಾಡಿನ ಇಂದ್ರಕೀರ್ತಿ ಮುನೀಂದ್ರನೆಂಬ ಜೈನ ಗುರುವಿನ ಪ್ರಶಂಸೆ ವೃತ್ತಗಳಿಂದ ಆರಂಭವಾಗಿ 'ತೋಮರ ರಗಳೆ'ಯಿಂದ ಮುಗಿಯುತ್ತದೆ. ಶಾಸನದ ೧೬-೩೪ ನೆಯ ಪಂಕ್ತಿಗಳಲ್ಲಿ ಈ ರಗಳೆ ಅಡಕವಾಗಿದೆ. ಇಂಥ ಒಂದು ರಗಳೆ ದೊರೆಯುತ್ತದೆಯೆಂಬ ಅಂಶವನ್ನು ಶ್ರೀಮಾನ್ ತಿ. ತಾ. ಶರ್ಮ ಅವರು ಬಲು ಹಿಂದೆಯೇ 'ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ'ಯಲ್ಲಿ ಸೂಚಿಸಿದ್ದರು. ಈಗ ಮತ್ತೊಮ್ಮೆ ಅವರೇ 'ಶಿಲಾಶಾಸನದ ಕನ್ನಡ ಕವಿಗಳು' ಎಂಬ ತಮ್ಮ ಲೇಖನದಲ್ಲಿ (ಕನ್ನಡ ಸಾಹಿತ್ಯಪರಿಷತ್ಪತ್ರಿಕೆ' ಸಂ. ೩೬, ಸಂಚಿಕೆ ೧-೨ ; ಪು. ೫೯) 'ಇಂದ್ರನಂದಿ ಪಂಡಿತ'—ಇದು ಇಂದ್ರಕೀರ್ತಿ ಇರಬೇಕು—ಎಂಬವನನ್ನು ಕುರಿತು ಬರೆಯುವಾಗ "ತೋಮರ ರಗಳೆಯು ಬಹು ಸ್ವಾರಸ್ಯವಾಗಿದೆ" ಎಂದು ಹೇಳಿ ಆ ಸಮಗ್ರ ರಗಳೆಯನ್ನು ಉದ್ಧರಿಸಿಕೊಟ್ಟಿದ್ದಾರೆ. ಈ ರಗಳೆಯ ಲಕ್ಷಣವನ್ನೂ ಹೆಸರನ್ನೂ ಕುರಿತು ಸ್ವಲ್ಪ ವಿವರಣೆ ಆವಶ್ಯಕ.

ಶ್ರೀಮದರುಹಚ್ಚರಣಸರಸಿರುಹಭೃಂಗನಂ
ಭೂವಿ ಕೀರ್ತಿಸೆ ನೆಗಳ್ದ ಗುಣಗಣೋತ್ತುಂಗನಂ |

ಎಂದು ಮೊದಲಾಗುವ ಈ ರಗಳೆಯನ್ನು ನೋಡಿದರೆ ಅದು ಲಲಿತರಗಳೆಯ ಲಕ್ಷಣಕ್ಕನುಸಾರವಾಗಿದೆಯೆಂಬ ಅಂಶ ಸ್ಪಷ್ಟವಾಗಿದೆ ; ಪ್ರತಿಪಾದದಲ್ಲಿಯೂ ಐದು ಮಾತ್ರೆಗಳ ನಾಲ್ಕು ಗಣಗಳೂ ಎರಡೆರಡು ಪಾದಗಳಲ್ಲಿ ಆದಿಪ್ರಾಸ, ಅಂತ್ಯಪ್ರಾಸಗಳೂ ಇವೆ. ಇದನ್ನು ಲಲಿತ ರಗಳೆಯೆಂದೇ ಕರೆಯದೆ ಶಾಸನದಲ್ಲಿ 'ತೋಮರ ರಗಳೆ' ಎಂದು ಏಕೆ ಕರೆದಿದೆ ? ಬಹುಶಃ ಈಗ ಲಲಿತ ರಗಳೆಯೆಂದು ಕರೆಯಿಸಿಕೊಂಡಿರುವ ಪದ್ಯಜಾತಿಗೆ ಆ ಹೆಸರು ಶಾಸನದ ಕಾಲದಲ್ಲಿ, ಎಂದರೆ ಕ್ರಿ. ಶ. ೧೦೫೫ ರಲ್ಲಿ, ಇದ್ದಿರಲಿಲ್ಲವೇನೋ ? ಈ ವಿಷಯ ವಿಚಾರಯೋಗ್ಯ. ಪ್ರಕೃತ 'ತೋಮರ ರಗಳೆ' ಎಂದರೆ ಐದು ಮಾತ್ರೆಗಳ ಅಥವಾ ಪಂಚಕಲದ ಗಣಗಳಿಂದ ರಚಿತವಾದ ರಗಳೆಯೆಂದು ಅರ್ಥ. ಛಂದೋಗ್ರಂಥಗಳಲ್ಲಿ ೩, ೪, ೫, ಇತ್ಯಾದಿ ಮಾತ್ರಾಗಣಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿರುವುದು ಕಾಣುತ್ತದೆ. ವಿರಹಾಂಕನ 'ವೃತ್ತಜಾತಿಸಮುಚ್ಚಯ'ದಲ್ಲಿ "ಬಹು ವಿವಿಹ ಪಹರಣಾಣಂ ಚ ಪಂಚಮತ್ತಂ ಪಿಹುಲ ಸೋಣಿ" ಎಂದು ಪಂಚಕಲದ ಸಾಮಾಂತರಗಳು ಹೇಳಿವೆ ; ಅಸಿ, ಅಶನಿ, ತೋಮರ, ಕನಕ, ಕರವಾಲ, ಕ್ಷುರಪ್ರ, ಬಾಣ, ಬಾಣಾಸನ, ಧನುಸ್ ಇತ್ಯಾದಿ ಆಯುಧಗಳ ಹೆಸರುಗಳು ಪಂಚಮಾತ್ರಾಗಣ ನಿರ್ದೇಶಕ್ಕಾಗಿ ಪ್ರಯೋಗವಾಗಿವೆ. ಹೀಗೆಯೇ ಗಜ, ರಥ, ತುರಗ, ಪದಾತಿ ಇತ್ಯಾದಿ ನಾಮಗಳು ಚತುಷ್ಕಲಕ್ಕಿವೆ. ದಾಮೋದರಮಿಶ್ರ ವಿರಚಿತವಾದ 'ವಾಣೀಭೂಷಣಂ' ಎಂಬ ಗ್ರಂಥದಲ್ಲಿ "ವಿವಿಧ ಪ್ರಹರಣ ನಾಮಾ ಪಂಚಕಲಃ ಪಿಂಗಲೇನೋಕ್ತಃ | ಗಜರಥತುರಗಪದಾತಿಸಂಜ್ಞಕಃ ಸ್ಯಾಚ್ಚತುರ್ಮಾತ್ರಃ" (೧-೧೩) ಎಂದು ಇದೇ ವಿಷಯವನ್ನೇ ಹೇಳಿದೆ. ಆದ್ದರಿಂದ 'ತೋಮರ' ಎಂದರೆ ಪಂಚಮಾತ್ರಾಗಣವೆಂದು ಸ್ಪಷ್ಟ. ಅದರ ವಿನ್ಯಾಸದಿಂದಾದ ರಗಳೆಗೆ 'ತೋಮರ ರಗಳೆ' ಎಂಬ ಹೆಸರು ಉಚಿತ.

ಡಿ. ಎಲ್. ಎನ್.

"ಇಪ್ಪತ್ತು ವರುಷ"

'ಏತಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ'

—ಗೀತಾ.

ಕೈಗಡಿಯಾರದ ಕಡೆ ನೋಡಿದಾಗ ಬೆಳಗಿನ ನಾಲ್ಕು ಗಂಟೆಯಾಗಿತ್ತು. ಕರ್ಕಶ ವಾಗಿ ಒಮ್ಮೆ ಕೂಗುಹಾಕಿ ಉಗಿಬಂಡಿ ತನ್ನ ವೇಗವನ್ನು ನಿದಾನವಾಗಿಸಿತು. ರೈಲ್ವೆ ನಿಲ್ದಾಣು ಸಮೀಪಿಸಿದುದನ್ನು ನೆನೆದು, ಕಣ್ಣುಜ್ಜಿಕೊಂಡು ನನ್ನ ಸಾಮಾನ್ನೆಲ್ಲ ಸಾವರಿಸತೊಡಗಿದೆ. ಕಿಟಕಿಯ ಬಾಗಿಲು ತೆರೆದೊಡನೆಯೇ ತಣ್ಣಗಿನ ಗಾಳಿ ಒಮ್ಮೆಲೇ ಒಳಸೇರಿ ಒಮ್ಮೆ ಶರೀರವನ್ನೆಲ್ಲ ನಡುಗಿಸಿಬಿಟ್ಟಿತು. ಹೊರಗೆ ಇಣುಕಿ ನೋಡಿದರೆ ಆಕಾಶವನ್ನೆಲ್ಲ ಮೋಡಗಳು ಆವರಿಸಿಬಿಟ್ಟಿದ್ದುವು. ಮಳೆಯೂ ಜಿನುಗಾಗಿ ಉದುರುತ್ತಿತ್ತು. 'ಈ ಊರಲ್ಲಿ ಆಗಲೇ ಮಳೆ ಬೇರೆ ಆರಂಭವಾಗಿದೆಯಲ್ಲ,' ಎಂದುಕೊಂಡು ಬೇಸರದಿಂದ ಕೈಚೀಲದೊಳಗಿನ ಕೊರಳುಪಟ್ಟಿ ಹೊರದೆಗೆದು ಕೊರಳಿಗೆ ಬಿಗಿದುಕೊಂಡೆ. ನನಗೆ ಇದಿರಾಗಿ ಬೆಂಚಿನಮೇಲೆ ಕುಳಿತು ತೂಕಡಿಸುತ್ತಿದ್ದ ತರುಣಿಯನ್ನೂ ತಣ್ಣಗಿನ ಗಾಳಿ ಎಚ್ಚರಿಸಿತು. ಅವಳ ಪ್ರಶ್ನೆಗೆ ಉತ್ತರವಾಗಿ 'ನಾಲ್ಕುಗಂಟೆ' ಎಂದು ನಾನು ಹೇಳಿದಾಗ ಅವಳೂ ಚುರುಕಾಗಿ ಹೊರಗಿಟ್ಟಿದ್ದ ಮಾಸಪತ್ರಿಕೆಯೊಂದನ್ನು ತನ್ನ ಕೈಚೀಲದಲ್ಲಿ ತುರುಕುತ್ತ 'ಹಾಗಾದರೆ ಈಗ ಬರುವ ಸ್ಟೇಶನ್ನು...' ಎಂದು ಕೇಳಿದ ಅವಳ ಪ್ರಶ್ನೆಯನ್ನೂ ಪೂರ್ತಿಮಾಡಲು ಅವಕಾಶಕೊಡದೆ 'ಅಹುದು, ... ಅದೇ ಸ್ಟೇಶನ್ನು' ಎಂದು ಉತ್ತರಿಸಿದೆ. ಗಾಡಿ ನಿಂತಿತು.

ಪ್ಲ್ಯಾಟಫಾರ್ಮಿನಲ್ಲಿ ಮಿಣುಕು ಲಾಂದ್ರ ಒಂದರ ಹೊರತು ಇನ್ನೇನೂ ಕಂಡು ಬರುತ್ತಿರಲಿಲ್ಲ. ಕೂಲಿಗಳು ತೀವ್ರ ಸಿಕ್ಕುವ ಆಸೆಯೂ ತೋರಲಿಲ್ಲ. ನನ್ನ ಹಿಂದಿನಿಂದ ಇಳಿದ ಆ ತರುಣಸ್ತ್ರೀ 'ಈ ಊರಲ್ಲಿ ಈ ವೇಳೆಗೆ ಗಾಡಿಯಮೇಲೆ ಬರುವ ಕೂಲಿಗಳು ವಿರಳ. ಅದರಲ್ಲಿಯೂ ಇಂದು ಮಳೆ ಬೇರೆ ಬರುತ್ತಾ ಇದೆ' ಎಂದುದನ್ನು ಕೇಳಿಯಂತೂ ಕೂಲಿ ಸಿಕ್ಕುವ ಆಸೆ ಸಂಪೂರ್ಣ ಬಿಡಲೇಬೇಕಾಯಿತು.

'ನಿಮ್ಮ ಸಾಮಾನು ಹೆಚ್ಚಾಗಿದೆಯೇ ?'

'ಏನು ವಿಶೇಷವಿಲ್ಲ, ಒಂದು ಟ್ರಂಕು ಹಾಗೂ ಒಂದು ಹಾಸಿಗೆ ಸುರುಳಿ ಎರಡು ಮಾತ್ರಾ,' ಎಂದು ಅವಸರವಾಗಿ ಪುನಃ ಗಾಡಿಯೊಳಕ್ಕೆ ನುಗ್ಗಿದೆ—ನನ್ನ ಸಾಮಾನು ಕೆಳಗಿಳಿಸಲು,

'ನಿಮ್ಮ ಸಾಮಾನು ಈ ಕಿಟಿಕಿಯೊಳಗಿಂದ ಇತ್ತ ಕೊಡಿ, ಜೊತೆಗೆ ಎದುರಿನ ಬೆಂಚಿನ ಮೇಲಿನ ನನ್ನದೂ ಒಂದು ಟ್ರಂಕು ಕೊಡಿ—ಗಾಡಿ ಇಲ್ಲಿ ಬಹಳವೇಳೆ ನಿಲ್ಲುವುದಿಲ್ಲ.'

ಸಾಮಾನು ಅವಳ ಕೈಯಲ್ಲಿ ಕೊಡಲು ಒಂದು ಕ್ಷಣ ಏಕೋ ಸಂಕೋಚ ವಾಯಿತು. ಆದರೆ ಗಾಡಿ ಕೂಗಿದ್ದರಿಂದ ಪ್ರತಿ ನುಡಿಯದೆ ಎಲ್ಲ ಸಾಮಾನು ಕಿಟಿಕಿ ಯೊಳಗಿಂದ ಅವಳ ಕಡೆಗೆ ಕೊಟ್ಟು ನಾನು ಕೆಳಗಿಳಿಯುತ್ತಿರುವಾಗಲೇ ಗಾಡಿ ಚಲಿಸಿತು.

ಗಾಡಿ ಹೊರಟುಹೋಯಿತು. ರೇಲ್ವೆ ನಿಲ್ದಾಣದಲ್ಲಿ ನಮ್ಮಿಬ್ಬರನ್ನು ಳಿದು ಇನ್ನಾವ ಪ್ರವಾಸಿಕನೂ ಇಳಿದಿರಲಿಲ್ಲ. ಆ ನಿರ್ಜನವಾದ ಪ್ಲ್ಯಾಟಫಾರ್ಮಿನಲ್ಲಿ ನಾವಿಬ್ಬರೇ ನಮ್ಮ ಸಾಮಾನಿನ ಹತ್ತಿರ ನಿಂತುಕೊಂಡಿದ್ದೆವು. ಸ್ವಲ್ಪ ಹೊತ್ತಿನಲ್ಲಿಯೇ ನಮಗಭಿಮುಖವಾಗಿ ಲಾಂದ್ರವೊಂದು ಚಲಿಸುತ್ತಿರುವದು ಕಂಡಿತು. ಅದರ ಜೊತೆಗೇ ಖಾಕಿ ಉಡುಪಿನ ವ್ಯಕ್ತಿಯೊಂದು ನಿದಾನವಾಗಿ ಹೆಜ್ಜೆ ಇಡುತ್ತ ನಮ್ಮ ಕಡೆಗೆ ಬರಲಾರಂಭಿಸಿತು. 'ರೇಲ್ವೆ ಪೋರ್ಟರು ಎಂದು ಕಾಣುತ್ತದೆ' ನಾನೆಂದೆ.

'ಅಹುದು, ಅವನಿಗೆ ಹೇಳಿ ನಮ್ಮ ಸಾಮಾನೆಲ್ಲ ವೇಟಿಂಗ ರೂಮಿನಲ್ಲಿಡಿಸಿಬಿಟ್ಟು, ನಸುಕು ಹರಿಯುವ ವರೆಗೆ ಹಾಗೂ ಹೀಗೂ ಸ್ವಲ್ಪವೇಳೆ ಕಳೆಯಲೇ ಬೇಕು. ಏಕಂದರೆ ಈ ಹೊತ್ತಿನಲ್ಲಿ ಊರೊಳಗೆ ಹೋಗಲು ವಾಹನಗಳೂ ಸಿಕ್ಕುವುದಿಲ್ಲ.' ಅವಳ ನುಡಿಗೆ ನಾನು ಸಮ್ಮತಿಸೂಚಕ ಗೋಣುಹಾಕಿದೆ.

* * *

'ನೀವು ಚಹ ತೆಗೆದುಕೊಳ್ಳುತ್ತೀರಷ್ಟೆ!' ವೇಟಿಂಗ ರೂಮಿನ ಸೋಫಾದ ಮೇಲೆ ವಿಶ್ರಮಿಸುತ್ತ ನಾನು ಕೇಳಿದ ಪ್ರಶ್ನೆಗೆ ಅವಳು ಆಶ್ಚರ್ಯಚಕಿತಳಾದಂತೆ ಕಂಡು ಬಂದಿತು.

'ಈ ವೇಳೆಯಲ್ಲಿ ನಿಮಗೆ ಇಲ್ಲಿ ಚಹ ಸಿಕ್ಕುವದೆಂಬ ಭರವಸೆ ಇದೆಯೇ?' ಅವಳು ನಸುನಕ್ಕಳು.

'ಹಿಂದುಗಡೆಯ ಜಂಕ್ಷನ್ನಿನಲ್ಲಿ ಥರ್ಮಾಸ ತುಂಬಿಸಿಕೊಂಡಿದ್ದೆ...' ಎನ್ನುತ್ತ ಥರ್ಮಾಸಿನಿಂದ ಒಂದು ಬಟ್ಟಲು ಚಹ ತೆಗೆದು ಅವಳಿಗೆ ಕೊಟ್ಟು, ಇನ್ನೊಂದರಲ್ಲಿ ನಾನು ತೆಗೆದುಕೊಂಡೆ. ಹೊರಗಿನ ಗಾಳಿಯ ಜೋರೂ ಹೆಚ್ಚಾಗಿತ್ತು. ಮಳೆ ಕಡಿಮೆಯಾಗಿದ್ದರೂ ಪೂರ್ಣ ನಿಂತಿರಲಿಲ್ಲ. ಅಂತಹ ಸನ್ನಿವೇಶದಲ್ಲಿ ಬಿಸಿಬಿಸಿಯಾದ ಚಹ ಒಳ್ಳೆಯ ಉತ್ಸಾಹದಾಯಕವಾಗಿತ್ತು.

ಅಪರಿಚಿತ ತರುಣನೊಂದಿಗೆ ಇಷ್ಟು ನಿಸ್ಸಂಕೋಚವಾಗಿ ವ್ಯವಹರಿಸುತ್ತಿದ್ದ ಆ

ತರುಣಿಯ ವರ್ತನೆ ನನಗೆ ಆಶ್ಚರ್ಯವನ್ನುಂಟುಮಾಡದಿರಲಿಲ್ಲ. ಚಹ ಕುಡಿಯು ತ್ತಿದ್ದಂತೆಯೇ ಅವಳನ್ನು ಒಂದೆರಡುಸಲ ಸೂಕ್ಷ್ಮವಾಗಿ ನಿರೀಕ್ಷಿಸಿದುದೂ ಆಯಿತು. ವೇಟಿಂಗ ರೂಮಿನಲ್ಲಿಯ ಪ್ರಕಾಶ ಅಷ್ಟು ನಿಚ್ಚಳವಾಗಿರಲಿಲ್ಲ. ಆದರೂ ಅವಳ ಸೌಮ್ಯವೂ ಗಂಭೀರವೂ ಆದ ಮುಖವನ್ನೂ, ಹಣೆಯ ಮೇಲೆ ಕುಂಕುಮತಿಲಕವಿರ ದ್ದನ್ನೂ ಕೊರಳಲ್ಲಿ ಮಾಂಗಲ್ಯವಿರದ್ದನ್ನೂ ಗುರುತಿಸಲು ಕಷ್ಟವಾಗಲಿಲ್ಲ. ಏನೋ ಅರ್ಥವಾದಂತೆ ಎನಿಸಿ ಮನಸ್ಸಿನ ಉದ್ವೇಗ ಶಾಂತವಾಯಿತು. ಆ ಮಂದ ಪ್ರಕಾಶ ದಲ್ಲಿ ಕೂಡ ಅವಳು ರೂಪವತಿ ಎಂದು ಯಾರೂ ಹೇಳಬಹುದಾಗಿತ್ತು. ಅವಳ ವಯಸ್ಸೂ ಇಪ್ಪತ್ತೈದು ವರುಷ ಮೀರಿರಲಿಕ್ಕಿಲ್ಲ ಎಂಬುದನ್ನೂ ಸುಲಭವಾಗಿ ತರ್ಕಿಸಬಹುದಾಗಿತ್ತು.

'ಕ್ಷಮಿಸಿ, ನಿಮ್ಮ ಹೆಸರು ಕೇಳಬಹುದೇ ?' ಥರ್ಮಾಸಿನಿಂದ ಬರಿದಾದ ಅವಳ ಬಟ್ಟಲಿಗೆ ಪುನಃ ಚಹ ಸುರುವುತ್ತ ನಾನು ಮಾತನಾಡಿದೆ.

'ನಿರ್ಮಲಾ' ಅವಳ ಉತ್ತರದಲ್ಲಿ ಸಂಕೋಚದ ಲವಲೇಶವೂ ಇರಲಿಲ್ಲ.

'ತಮ್ಮ ಹೆಸರು ?'

'ಶ್ರೀಧರ'

'ಈ ಊರಿಗೆ, ತಾವು ಹೊಸಬರೇನೋ'

'ಅಹುದು, ನಾನಿಲ್ಲಿ ಬಂದುದು ಇದೇ ಮೊದಲು ಬಾರಿ. ಇಲ್ಲಿಯ ಹಾಯಸ್ಕೂಲಿ ನಲ್ಲಿ ಶಿಕ್ಷಕನ ಕೆಲಸ ದೊರೆತಿದೆ. ಇಂದು ಭಾನುವಾರ. ನಾಳೆ ಶಾಲೆಯ ಕೆಲಸಕ್ಕೆ ಹಾಜರ ಆಗಬೇಕು.'

'ಇದೇ ವರುಷವೇ ನೀವು ಗಣಿತವಿಷಯ ತೆಗೆದುಕೊಂಡು ಬಿ.ಎ. ಪರೀಕ್ಷೆ ಯಲ್ಲಿ ಮೊದಲನೆಯ ವರ್ಗದಲ್ಲಿ ಉತ್ತೀರ್ಣರಾದಿರಲ್ಲವೇ ?' ನಿರ್ಮಲಾ ಬಾಯಿಯ ಮುಖದಮೇಲೆ ತುಂಟ ನಗೆ ಮೂಡಿತ್ತು. ನನಗೆ ವಿಸ್ಮಯವಾಯಿತು. 'ಈ ಅಪರಿಚಿತ ತರುಣಿ . . .' ಇತ್ಯಾದಿ ನನ್ನ ವಿಚಾರಮಾಲಿಕೆಯನ್ನು ಮಧ್ಯದಲ್ಲಿಯೇ ತಡೆದು ಅವಳೇ ಮುಂದುವರಿಸಿದಳು. "ಶ್ರೀಧರರಾಯರೆ, ವಿಸ್ಮಯಪಡುವ ಕಾರಣವಿಲ್ಲ. ನಾಳೆ ನಾವು 'ಶಿಕ್ಷಕರ ಕೋಣೆ'ಯಲ್ಲಿ ಪರಸ್ಪರ ಪರಿಚಯ ಮಾಡಿಕೊಳ್ಳುವ ಪೂರ್ವದಲ್ಲಿಯೇ ಈ ರೇಲ್ವೆ ನಿಲ್ದಾಣದಲ್ಲಿ ನಮ್ಮ ಪರಿಚಯವಾದ ಯೋಗಾಯೋಗ ನಿಜಕ್ಕೂ ಕೌತುಕಾಸ್ಪದವಾದದ್ದೇ. ನಾನೂ ಅದೇ ಶಾಲೆಯಲ್ಲಿ ಶಿಕ್ಷಿಕೆಯಾಗಿರುವೆ. ಗಣಿತ ವಿಷಯಕ್ಕೆ ನಿಮ್ಮನ್ನು ಶಿಕ್ಷಕರೆಂದು ನಿಯಮಿಸಿಕೊಂಡದ್ದನ್ನು ನನಗೆ ಹೆಡ್ ಮಾಸ್ತರರಾದ ಗೋಪಾಳರಾಯರು ಈ ಮೊದಲೇ ಹೇಳಿದ್ದರು."

'ಓಹೋ, ಹೀಗೋ . . . ಅಪೂರ್ವ ಯೋಗಾಯೋಗ.'

ಕರ್ಕಶವಾಗಿ ಕೂಗುತ್ತ ಗೂಡ್ಸ ಗಾಡಿಯೊಂದು ನಿಲ್ದಾಣದಲ್ಲಿ ಬಂದು ನಿಂತಿತು. ಹೊರಗಡೆ ಮಳೆ ಹೊರಪಾಗಿ, ಆಕಾಶ ನಿರಭ್ರವಾಗಿತ್ತು. ಅರುಣೋದಯವಾದದ್ದರಿಂದ ಬೆಳಕು ಹರಿಯುವದರಲ್ಲಿತ್ತು. ಕೈಗಡಿಯಾರ ನೋಡಿದೆ. ಇನ್ನೂ ಅರ್ಧಗಂಟೆಯಾದರೂ ವೇಟಿಂಗ ರೂಮು ಬಿಟ್ಟು ಕದಲುವಂತಿರಲಿಲ್ಲ.

'ನೀವು ಯಾವ ವಿಷಯ ಕಲಿಸುತ್ತೀರಿ?' ಪುನಃ ನಾನೇ ಮಾತಿಗಾರಂಭಿಸಿದೆ.

'ನಾನು ಪ್ರಾಮುಖ್ಯವಾಗಿ ಕಲಿಸುವದು ಸಂಸ್ಕೃತವನ್ನು. ಕೆಲವುವೇಳೆ ಬೇರೆ ಭಾಷೆಗಳನ್ನೂ ಕಲಿಸಬೇಕಾಗುತ್ತದೆ. ಸಂಸ್ಕೃತ ವಿಷಯ ತೆಗೆದುಕೊಂಡು ಎಂಟು ವರುಷಗಳ ಕೆಳಗೇ ನಾನು ಬಿ.ಎ. ಪರೀಕ್ಷೆ ಪಾಸುಮಾಡಿದೆ. ಈ ಸಲ ಬಿ.ಟಿ. ಅಭ್ಯಾಸ ಮುಗಿಸಿ ಇದೇ ತಾನೇ ವಾಪಸು ಬರುತ್ತ ಇರುವೆ. ಅದಿರಲಿ, ನೀವು ಅಭ್ಯಾಸ ಮುಂದುವರಿಸುವ ಬಗ್ಗೆ ಯೋಚಿಸಿಲ್ಲವೇ?'

'ಎಮ್.ಎ. ಪರೀಕ್ಷೆಯ ಸಲುವಾಗಿ ಆಗಲೇ ಟರ್ಮ್ಸ ತುಂಬಲಾರಂಭಿಸಿದ್ದೇನೆ. ಆದರೆ ಅಲ್ಲಿಯವರೆಗೆ ಹೊಟ್ಟೆಯಪಾಡಿಗಾಗಿ ಶಿಕ್ಷಕನ ವೃತ್ತಿ ಅವಲಂಬಿಸದೆ ಗತ್ಯಂತರವಿಲ್ಲ ಎಂದು ಕಂಡುಬಂದುದರಿಂದ ಇಲ್ಲಿಗೆ ಬರಬೇಕಾಯಿತು.'

'ಈ ಊರಿನಲ್ಲಿ ನಿಮಗೆ ಪರಿಚಿತರಾರಾದರೂ ಇದ್ದಾರೆಯೇ?'

'ಇಲ್ಲ.'

'ಹಾಗಾದರೆ ಊರಲ್ಲಿ ಎಲ್ಲಿ ಉಳಿದುಕೊಳ್ಳಬೇಕೆಂದಿರುವಿರಿ?'

'ಅದನ್ನೇ ನಾನು ಯೋಚಿಸುತ್ತಿರುವೆ. ಒಂದು ಒಳ್ಳೆಯ ಹೋಟಲ್ ನೋಡಬೇಕೆಂದಿರುವೆ.'

'ಈ ಊರಲ್ಲಿ ಒಳ್ಳೆಯ ಹೋಟಲ್ಲೇ? ಸರಿ ಹೋಯಿತು. . . ಸದ್ಯಃ ನನ್ನ ಜೊತೆಗೆ ಮನೆಗೆ ನಡೆಯಿರಿ. ಸ್ನಾನಮಾಡಿ, ಒಟ್ಟೆ ಬದಲಾಯಿಸಿ, ಸ್ವಲ್ಪವಿಶ್ರಾಂತಿ ತೆಗೆದುಕೊಳ್ಳಿ. ಆ ಮೇಲೆ ಒಳ್ಳೆಯದೋ ಕೆಟ್ಟದೋ ಯಾವದಾದರೂ ಹೋಟಲ್ ಹುಡುಕುವಿರಂತೆ.' ನಿರ್ಮಲಾಬಾಯಿ ನನ್ನ ಒಪ್ಪಿಗೆಯ ದಾರಿ ಕಾಯದೆ ತಮ್ಮ ಆಸನ ಬಿಟ್ಟೆದ್ದು ಸಾಮಾನು ಸವರಿಸಲಾರಂಭಿಸಿದರು.

'ಢಣ್. . . ಢಣ್. . . ಣ್‌ಣ್‌ಣ್. . .' ರೇಲ್ವೆ ನಿಲ್ದಾಣದ ಗಂಟೆ ಬಾರಿಸಿ ಮುಂಜಾನೆಯ ಗಾಡಿ ಬರುವ ಸೂಚನೆ ಕೊಟ್ಟಿತು. ಈಗ ಏನೋ ನಿಲ್ದಾಣಕ್ಕೆ ಸ್ವಲ್ಪ ಜೀವಕಳೆ ಬಂದಂತಾಗಿತ್ತು. ಪ್ರವಾಸಿಕರು ಅತ್ತಿತ್ತ ಓಡಾಡತೊಡಗಿದ್ದರು. ಅಷ್ಟರಲ್ಲಿ ಪೋರ್ಟರು ಬಂದು ನಮ್ಮಿಬ್ಬರ ಸಾಮಾನು ತೆಗೆದುಕೊಂಡು ಹೋಗಿ ನಿಲ್ದಾಣದ ಹೊರಕ್ಕೆ ಅದೇ ತಾನೆ ಬಂದು ನಿಂತ ಟಾಂಗೆಯೊಂದರಲ್ಲಿ ಹಾಕಿದ. ನಾನು ಮರು ಮಾತಾಡದೆ ನಿರ್ಮಲಾಬಾಯಿಯನ್ನನುಸರಿಸಿ ಟಾಂಗೆ ಏರಿ ಕುಳಿತುಕೊಂಡೆ. ಈಗ

ನಸುಕು ಹರಿದು ಎಲ್ಲೆಡೆ ನಿಚ್ಚಳವಾದ ಪ್ರಕಾಶ ಹರಡಿತ್ತು. ಹತ್ತಿರದಲ್ಲಿಯೇ ಕುಳಿತ ನಿರ್ಮಲಾಬಾಯಿಯನ್ನು ಒಂದುಸಲ ನಿರೀಕ್ಷಿಸಿದೆ. ಪೂರ್ವದಿಗಂತದಲ್ಲಿ ಅದೇ ಅರ್ಧ ಉದಯಿಸಿದ ನೇಸರಿನೆಡೆಗೆ ನೋಡುವದರಲ್ಲಿ ಅವಳು ಮಗ್ನಳಾಗಿದ್ದಳು. ಸ್ಪಷ್ಟವಾದ ಬೆಳಕಿನಲ್ಲಿ ಅವಳನ್ನು ನಾನದೆಷ್ಟೋ ವೇಳೆ ಅವಲೋಕಿಸುತ್ತಿದ್ದೆ. ವೇಟಿಂಗ ರೂಮಿನ ಮಂದಪ್ರಾಕಾಶದಲ್ಲಿ ಅವಳ ಬಗ್ಗೆ ನಾನು ಮಾಡಿದ ನಿರೀಕ್ಷಣೆ ಸರಿಯಾಗಿದ್ದಂತೆ ತೋರಿತು. ನಿರ್ಮಲಾಬಾಯಿಯ ವಯಸ್ಸು ಸುಮಾರು ಇಪ್ಪತ್ತೈದು ವರುಷ ಆಗಿರ ಬಹುದು. ಅವಳು ರೂಪವತಿ. ಅವಳ ಮುಖ ಸೌಮ್ಯ ಹಾಗೂ ಗಂಭೀರ; ಅವಳು ಅಕಾಲ ವಿಧವೆ.

*　　*　　*

'ಗೋಪಾಳರಾಯರೇ, ಇದೋ ನಮ್ಮ ಶಾಲೆಯ ಹೊಸ ಮಾಸ್ತರರನ್ನು ಕರೆದುತಂದಿರುವೆ—ಶ್ರೀಧರರಾಯರು' ನಸುನಗುತ್ತ ನಿರ್ಮಲಾಬಾಯಿ ನನ್ನನ್ನು ಶಾಲೆಯ ಹೆಡ್ ಮಾಸ್ತರರಿಗೆ ಪರಿಚಯ ಮಾಡಿಕೊಟ್ಟಳು.

'ಓಹೋ, ಶ್ರೀಧರರಾಯರೇ, ಬನ್ನಿ' ಎಂದು ಗೋಪಾಳರಾಯರು ನನ್ನನ್ನು ತಮ್ಮ ರೂಮಿನಲ್ಲಿ ಕರೆದೊಯ್ದು ಕುಳ್ಳಿರಿಸಿಕೊಂಡರು. ನಿರ್ಮಲಾಬಾಯಿಗೆ ಕ್ಲಾಸು ತೆಗೆದುಕೊಳ್ಳುವದಿದ್ದುದರಿಂದ ಅವಳು ಹೊರಟುಹೋದಳು.

'ಅದೇನು, ನಿಮಗೆ ನಿರ್ಮಲಾಬಾಯಿಯ ಪರಿಚಯ ಮೊದಲಿನಿಂದಲೂ ಇದ್ದಿತೇ?' ಗೋಪಾಳರಾಯರು ಸ್ವಲ್ಪ ಉತ್ಸುಕತೆಯಿಂದಲೇ ಕೇಳಿದರು. ನಾನು ನಡೆದ ಸಂಗತಿಯನ್ನೆಲ್ಲ ಸಾದ್ಯಂತವಾಗಿ ವಿವರಿಸಿದೆ. ಅವರು ಮುಗಳು ನಗೆ ನಕ್ಕು ಸುಮ್ಮನಾದರು.

'ನೋಡಿ, ನಿಮಗೇನು ಹೆಚ್ಚಾಗಿ periods ಹಾಕಿಲ್ಲ' ನನ್ನ ಕೈಯಲ್ಲೊಂದು ವೇಳಾ ಪತ್ರಿಕೆಯ ಪ್ರತಿಯನ್ನಿಡುತ್ತ ಗೊಪಾಳರಾಯರು ಶಾಲೆಯ ಕಾರ್ಯಕಲಾಪ ಗಳ ಬಗ್ಗೆ ವಿವರಿಸತೊಡಗಿದರು. ಅವರು ಹೇಳುತ್ತಿದ್ದುದನ್ನೆಲ್ಲ ನಾನು ಮೌನವಾಗಿ ಆಲಿಸುತ್ತಿದ್ದೆ.

ಮಧ್ಯಂತರ ಬಿಡುವಿನ ವೇಳೆಯಲ್ಲಿ ಶಿಕ್ಷಕರ ಕೋಣೆಯಲ್ಲಿ ಪದ್ಧತಿಯಪ್ರಕಾರ ಎಲ್ಲ ಶಿಕ್ಷಕರ ಪರಿಚಯಮಾಡಲಾಯಿತು. ಚಹದ ಕಾರ್ಯಕ್ರಮವೂ ಸಾಂಗ ವಾಯಿತು. ಅಲ್ಲಿ ನೆರದ ಶಿಕ್ಷಕರಲ್ಲಿ ಹೆಚ್ಚು ಜನರು ಅರ್ಧವಯಸ್ಸು ಮೀರಿದವರೂ ಪ್ರಾಪಂಚಿಕ ಕೋಟಲೆಗೆ ಸಿಕ್ಕಿದವರೂ ಆದವರೇ ಇದ್ದರು. ಅದಕ್ಕನುಗುಣವಾಗಿ ಅವರ ಚರ್ಚೆಯ ಪ್ರಾಮುಖ್ಯ ವಿಷಯಗಳೆಂದರೆ '. . . . ಪೇಟೆಯಲ್ಲಿ ಕಾಳಿನ ಧಾರಣೆ ಏರಿದುದು. . . . ಕಾಯಿಪಲ್ಲೆ ದುರ್ಮಿಳವಾದುದು. . . . ರಾತ್ರಿಯ

ಇಸ್ಪೀಟು ಕ್ಲಬ್ಬಿನಲ್ಲಿ ನಡೆದ ಅವಾಂತರ. . . . ಮುಂತಾದವುಗಳೇ ಆಗಿದ್ದುದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ತಮ್ಮೊಳಗೆ ಹೊಸದಾಗಿ ಬಂದು ಸೇರಿದ ತರುಣ ಶಿಕ್ಷಕನ ಬಗ್ಗೆ ವಿಶೇಷ ಆಸ್ಥೆ ವಹಿಸುವಷ್ಟು ಉತ್ಸಾಹವಾಗಲಿ ಉತ್ಸುಕತೆಯಾಗಲಿ ಯಾರಲ್ಲಿಯೂ ಇದ್ದಂತೆ ಕಂಡುಬರಲಿಲ್ಲ.

'ನೀವು ಎಮ್. ಎ. ಕ್ಕೆ ಟರ್ಮು ತುಂಬಿರುವಿರಷ್ಟೆ!' ಇಂಗ್ಲೀಷು ಪ್ರಾಧ್ಯಾಪಕರಾದ ಬಳವಂತರಾಯರು ತಮ್ಮ ಕನ್ನಡಕ ತೆಗೆದು ಕರವಸ್ತ್ರದಿಂದ ಒರೆಸುತ್ತ 'ನನಗೆಲ್ಲ ತಿಳಿದೇ ಇದೆ.' ಎನ್ನುವ ರೀತಿ ನನ್ನನ್ನು ಪ್ರಶ್ನಿಸಿದರು. ನಾನು ಸಮ್ಮತಿಸೂಚಕ ಗೋಣು ಹಾಕಿದೆ. ಕೆಲವರ ಮುಖದಲ್ಲಿ ಸಮಾಧಾನ ಸೂಚಕ ಚಿಹ್ನೆಗಳೂ ಇನ್ನು ಕೆಲವರ ಮುಖದಲ್ಲಿ ಸಂತೋಷಸೂಚಕ ಚಿಹ್ನೆಗಳೂ ಕಂಡುಬಂದಿದ್ದು ನನಗರ್ಥವಾಗಲಿಲ್ಲ. ನನಗರಿಯದೇನೇ ಒಂದು ತರಹದ ಅಸ್ವಸ್ಥತೆ ನನ್ನನ್ನಾವರಿಸಿತು. ಎಲ್ಲಿಲ್ಲದ ಕೃತ್ರಿಮತೆ ನನ್ನ ನಡೆ-ನುಡಿಗಳಲ್ಲಿ ತಲೆದೋರಿದಂತಾಗಿ ನನಗೆ ಉಸಿರುಕಟ್ಟಿದಂತಾಯಿತು. ಇನ್ನುಳಿದ ಶಿಕ್ಷಕರ ಹರಟೆ, ಚರ್ಚೆ ಸ್ವಚ್ಛಂದವಾಗಿ ಸಾಗಿದ್ದರೂ ನನಗೆ ಅದರಲ್ಲಿ ಬೆರೆತು ಸಮರಸವಾಗುವದು ಅಸಾಧ್ಯವೂ ಅಸಹ್ಯವೂ ಎನಿಸಿಬಿಟ್ಟಿತು.

ಬಿಡುವಿನ ವೇಳೆ ಮುಗಿದು ಎಲ್ಲ ಶಿಕ್ಷಕರು ತಮ್ಮ ಕ್ಲಾಸುಗಳಿಗೆ ತೆರಳಿದಾಗ ನನಗೆ ಸ್ವಲ್ಪ ಹಗುರೆನಿಸಿದಂತಾಯಿತು. 'ನೀವಾಗಲೇ ಕ್ಲಾಸು ತೆಗೆದುಕೊಳ್ಳಲಾರಂಭಿಸಿದಿರಾ?' ನಿರ್ಮಲಾಬಾಯಿಯ ಪ್ರಶ್ನೆ ಅವಳು ಕ್ಲಾಸಿಗೆ ತೆರಳದಿದ್ದುದನ್ನು ನನ್ನ ಗಮನಕ್ಕೆ ತಂದಿತು.

'ಇಷ್ಟೇನು ಅವಸರ. ನಾಳಿನಿಂದ ಪ್ರಾರಂಭಿಸಬಹುದಲ್ಲ. . . . ಅದಿರಲಿ, ನಿಮಗೀಗ ಕ್ಲಾಸು ಇಲ್ಲವೇ?'

'ಇದು ನನಗೆ off-period,' ಇಷ್ಟು ಹೊತ್ತು ಓದುತ್ತಿದ್ದ ವೃತ್ತಪತ್ರವನ್ನು ಕೆಳಕ್ಕೆ ಬಿಸುಟೆ. ಅವಳೇ ಮಾತಿಗೆ ಆರಂಭಿಸಿದಳು.

'ನಿಮಗೆ ಗಣಿತವಿಷಯವನ್ನುಳಿದು ಮತ್ತಾವ ವಿಷಯದಲ್ಲಾದರೂ ಆಸ್ಥೆ ವಿಶೇಷವಾಗಿದೆಯೇ?'

'ಏನೋ, ತತ್ವಜ್ಞಾನಕ್ಕೆ ಸಂಬಂಧಿಸಿದ ಕೆಲಗ್ರಂಥ ಓದಿರುವೆ. ಮುಂದಾದರೂ ಓದಬೇಕೆಂದಿರುವೆ.'

'ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಎರಡೂ ಬಗೆಯ ಗ್ರಂಥ ಓದಿರುವಿರಾ?'

'ಸಾಧಾರಣ ಓದಿರುವೆ.'

'ನಾನೇನೋ ನಮ್ಮ ಪೌರ್ವಾತ್ಯ ತಾತ್ವಿಕ ಗ್ರಂಥಗಳಲ್ಲಿ ಸ್ವಲ್ಪಮಟ್ಟಿಗೆ

ಪರಿಶ್ರಮ ಪಟ್ಟಿರುವೆ. ಪಾಶ್ಚಿಮಾತ್ಯ ತತ್ವಜ್ಞಾನ ನನಗೇಕೋ ಹಿಡಿಸುವದಿಲ್ಲ. ಪೌರ್ವಾತ್ಯ ತತ್ವಜ್ಞಾನವನ್ನು ಅದು ಸರಿಗಟ್ಟಲಾರದೆಂದು ನನಗೆನಿಸುತ್ತದೆ.'

'ನೀವು ವೈಜ್ಞಾನಿಕ ಗ್ರಂಥಗಳನ್ನು ಅಭ್ಯಾಸಮಾಡಿರುವಿರಾ ?'

'ಇಲ್ಲ'

'ವಿಜ್ಞಾನ ವಿಷಯಕ ಅಭ್ಯಾಸವು ಪಾಶ್ಚಿಮಾತ್ಯ ತತ್ವಜ್ಞಾನವನ್ನರಿಯಲು ಅವಶ್ಯವಾಗಿ ಬೇಕು. ಆ ತಳಹದಿ ಇಲ್ಲದೆ ನೀವು ಒಮ್ಮೆಲೇ ತಾತ್ವಿಕಗ್ರಂಥ ಓದ ಲಾರಂಭಿಸಿದರೆ, ಅವು ನಿಮಗೆ ಸರಿಯಾಗಿ ಅರ್ಥವಾಗಲಾರವು. ಸರಿಯಾಗಿ ಅರ್ಥ ಮಾಡಿಕೊಳ್ಳದೆ ಆ ತತ್ವಜ್ಞಾನ ಕಡಿಮೆ ತರಗತಿಯದು ಎಂದು ತರ್ಕಿಸುವದು ತಪ್ಪು.'

'ಹಾಗಾದರೆ ಪಾಶ್ಚಿಮಾತ್ಯ ತತ್ವಜ್ಞಾನ ಹೆಚ್ಚು ಶ್ರೇಷ್ಠತರಗತಿಯದು' ಎಂದು ನಿಮ್ಮ ಅಭಿಪ್ರಾಯವೇ ?

'ಪೌರ್ವಾತ್ಯ ತತ್ವಜ್ಞಾನಕ್ಕೆ ಯಾವ ರೀತಿಯಲ್ಲಿಯೂ ಅದು ಕಡಿಮೆ ತರಗತಿಯ ದಲ್ಲ' ಎಂದು ಮಾತ್ರ ಖಂಡಿತವಾಗಿ ಹೇಳಬಲ್ಲೆ !

'ನೀವು ನನಗೆ ಪಾಶ್ಚಿಮಾತ್ಯ ತತ್ವಜ್ಞಾನ, ಜೊತೆಗೆ ಸ್ವಲ್ಪಮಟ್ಟಿಗೆ ವೈಜ್ಞಾನಿಕ ವಿಷಯಗಳನ್ನು ತಿಳಿಸಿ ಹೇಳುವಿರಾ ?'

'ಇಲ್ಲಿ ಕೆಲ ಒಳ್ಳೆಯ ಪುಸ್ತಕಗಳಾದರೂ ಸಿಕ್ಕುವಂತಿದ್ದರೆ ಅಗತ್ಯವಾಗಿ ಮಾಡ ಬಹುದಿತ್ತು. ವೇಳೆಗಳೆಯಲು ಅದೊಂದು ಅತ್ತ್ಯುತ್ತಮ ಸಾಧನವೂ ಆಗುತ್ತಿತ್ತು.' ಆದರೆ . . . 'ಪುಸ್ತಕಗಳ ಹೊಣೆ ನಾನು ಹೊರುವೆ.' ನಿರ್ಮಲಾಬಾಯಿಯ ಮುಖದ ಮೇಲೆ ಒಂದು ಕ್ಷಣ ಹರುಷರೇಖೆ ಮಿಂಚಿ ಮಾಯವಾಯಿತು.

* * * *

ಶಾಲೆಯ ಕೆಲಸ ಮುಗಿಸಿ ಸಾಯಂಕಾಲ ಇಬ್ಬರೂ ಮನೆ ಸೇರುವ ಹೊತ್ತಿಗೆ ನಿರ್ಮಲಾಬಾಯಿಯ ತಾಯಿ ಗೌರಮ್ಮ ನಮಗಾಗಿ ಚಹ-ತಿಂಡಿ ಮಾಡಿಟ್ಟು ದಾರಿ ಕಾಯುತ್ತಿದ್ದರು. ಗೌರಮ್ಮಗಾಗಲೇ ಐವತ್ತು ವರುಷ ಮಿಕ್ಕಿತ್ತು. ಅವರೂ ಮುತ್ತೈದೆತನವನ್ನು ಬಹುಕಾಲ ಬೇಡಿಬಂದವರಾಗಿರಲಿಲ್ಲ. ನಿರ್ಮಲಾಬಾಯಿ ಚಿಕ್ಕ ವಯಸ್ಸಿನವಳಿದ್ದಾಗಲೇ ಗೋವಿಂದರಾಯರು ತೀರಿಕೊಂಡು ಗೌರಮ್ಮನನ್ನು ಅನಾಥೆಯನ್ನಾಗಿಸಿದ್ದರು.

ಚಹ ಕುಡಿದಾದ ಬಳಿಕ, ನಿರ್ಮಲಾಬಾಯಿ ನನ್ನನ್ನು ತಮ್ಮ ರೂಮಿನಲ್ಲಿ ಕರೆ ದೊಯ್ದರು. ಅಲ್ಲಿಯೇ ಇದ್ದ ಒಂದು ದೊಡ್ಡ ಕಪಾಟಿನ ಬಾಗಿಲು ತೆರೆದು ಓರಣ ವಾಗಿರಿಸಿದ ಪುಸ್ತಕ ಭಂಡಾರವನ್ನು ನನಗೆ ನೋಡ ಹೇಳಿದರು. ಅದರಲ್ಲಿಯ ಕೆಲವು ಪುಸ್ತಕಗಳನ್ನು ತೆರೆದು ನೋಡಿದ ಮೇಲಂತೂ ನನಗಾದ ಆಶ್ಚರ್ಯ

ಅಷ್ಟಿಷ್ಟಲ್ಲ. ಪಾಶ್ಚಿಮಾತ್ಯ ತತ್ವಜ್ಞಾನ ಹಾಗೂ ವಿಜ್ಞಾನ ವಿಷಯಕ ಗ್ರಂಥಗಳ ಅತ್ಯುತ್ತಮವಾದ ಸಂಗ್ರಹವೇ ಅದಾಗಿತ್ತು.

'ಈ ಪುಸ್ತಕಗಳೆಲ್ಲ ನಿಮ್ಮ . . .' ನಿರ್ಮಲಾಬಾಯಿಯ ಕಡೆಗೆ ನೋಡಿದಾಗ ಅವರ ಕಣ್ಣು ಹನಿಗೂಡಿದುದನ್ನು ಕಂಡು ತಟ್ಟನೆ ನನ್ನ ಪ್ರಶ್ನೆ ಅರ್ಧಕ್ಕೇ ನಿಲ್ಲಿಸಿದೆ. ಕಪಾಟಿನ ತೀರ ಕೆಳಗಿನ ಭಾಗದಲ್ಲಿ ಓರಣವಾಗಿಟ್ಟ 'ಡಾಯರಿ'ಗಳಿದ್ದುದು ಕಂಡು ಬಂದಿತು. ಸುಮಾರು ಹತ್ತು-ಹದಿನೈದು ವರುಷಗಳ ಡಾಯರಿಗಳಿದ್ದಿರಬಹುದು. ಕೊನೆಯ ಡಾಯರಿ—ತೀರ ಇತ್ತೀಚಿನದು ಎಂಟು ವರುಷಗಳ ಹಿಂದಿನದಾಗಿತ್ತು. 'ನಿರ್ಮಲಾಬಾಯಿಗೆ ದಿನಚರಿ ಬರೆಯುವ ಅಭ್ಯಾಸವಿದ್ದಿರಬಹುದೇ ?' ಎನ್ನಿಸಿತು. ಆದರೆ ಕೇಳುವ ಸಾಹಸ ಮಾಡಲಿಲ್ಲ.

'ನಿಮಗೆ reference ಕ್ಕೆ ಪುಸ್ತಕ ಸಾಕಷ್ಟೆ !' ನಿರ್ಮಲಾಬಾಯಿಯ ಪ್ರಶ್ನೆಗೆ ನಾನು ಮೌನವಾಗಿ ತಲೆಯಲ್ಲಾಡಿಸಿ, ಬದಿಯಲ್ಲಿಯ ಇನ್ನೊಂದು ಚಿಕ್ಕ ಕಪಾಟು ತೆರೆದು ನೋಡಿದೆ. ಅದರಲ್ಲಿ ಪೌರ್ವಾತ್ಯ ತಾತ್ವಿಕ ಗ್ರಂಥಗಳು—ಹೆಚ್ಚಾಗಿ ಸಂಸ್ಕೃತ ಗ್ರಂಥಗಳೇ ವಿಶೇಷವಾಗಿದ್ದುವು.

'ಇವು . . . ನಿಮ್ಮ reference ತಾನೆ ?' ನನ್ನ ಪ್ರಶ್ನೆಗೆ ನಿರ್ಮಲಾಬಾಯಿ ನಸುನಕ್ಕರು ಮಾತ್ರ.

ಸೂರ್ಯ ಅದೇ ಅಸ್ತಂಗತನಾಗಿದ್ದ. ಎಲ್ಲೆಡೆ ಸಂಧಿಪ್ರಕಾಶ ಹರಡಿತ್ತು. ತಂಗಾಳಿಯೂ ಮೆಲ್ಲಗೆ ತೀಡುತ್ತಿತ್ತು. 'ಹಾಗೆ ಸ್ವಲ್ಪ ತಿರುಗಾಡಿಕೊಂಡು ಬರೋಣ ಬನ್ನಿ' ನಿರ್ಮಲಾಬಾಯಿ ಎಂದುದರಿಂದ ಇಬ್ಬರೂ ಹೊರಟೆವು. ಅವರ ಮನೆಗೆ ಸಮೀಪದಲ್ಲಿಯೇ ಪೂರ್ವಾಭಿಮುಖವಾಗಿ ಚಿಕ್ಕ ನದಿಯೊಂದು ಪ್ರವಹಿಸುತ್ತಿತ್ತು. ಊರಿಗೆ ಸಮೀಪದಲ್ಲಿಯೇ ಒಂದು ಒಳ್ಳೆಯ 'ಘಾಟೂ' ಇದ್ದಿತು. ವಾಯುಸೇವನೆಗಾಗಿ ಬರುವ ಜನರಿಗೆ ಆ ನದಿಯ ಘಾಟು ಒಂದು ಒಳ್ಳೆಯ ಸ್ಥಾನವಾಗಿತ್ತು. ನಾವಿಬ್ಬರೂ ಆ ಘಾಟು ದಾಟಿ ಪಶ್ಚಿಮಾಭಿಮುಖವಾಗಿ ಸ್ವಲ್ಪದೂರ ಹೋಗಿ ನದಿಯ ದಂಡೆಯ ಮೇಲಿನ ಮರಳು ದಿನ್ನೆಯೊಂದರಮೇಲೆ ಕುಳಿತುಕೊಂಡೆವು. ಆ ಸ್ಥಳ ನಿರ್ಜನವಾಗಿತ್ತು. ಅಷ್ಟೇ ರಮ್ಯವೂ ಆಗಿತ್ತು.

'ನನ್ನದೊಂದು ಮಾತು ನಡೆಸಿಕೊಡುತ್ತೀರಾ ?' ಬಹಳ ಹೊತ್ತಿನಿಂದ ವಿಚಾರ ಮಾಡಿ ಕೇಳಿದಂತಿತ್ತು ನಿರ್ಮಲಾಬಾಯಿಯ ಪ್ರಶ್ನೆ.

'ಏನದು, ಹೇಳಿ' ನನ್ನಲ್ಲಿಯೂ ಸ್ವಲ್ಪ ಕುತೂಹಲ ಉಂಟಾಯಿತು.

'. . . ದೇವರು ನಮಗೇನೂ ಕಡಿಮೆಮಾಡಿಲ್ಲ. ಸ್ವಂತಮನೆ ಇದೆ. ಚೂರು ಚೂರು ಜಮೀನೂ ಇದೆ. ಜೊತೆಗೆ ನಾನೂ ಕೆಲಸಮಾಡಿ ಸಂಬಳ ತರುವೆ . . .'

ನಿರ್ಮಲಾಬಾಯಿ ಅಷ್ಟಕ್ಕೇ ತಡೆದು ನನ್ನೆಡೆಗೆ ನೋಡಿದರು. ನನ್ನ ಮುಖದಮೇಲೆ ಅಸ್ವಸ್ಥತೆಯ ಲಕ್ಷಣ ಅವರಿಗೆ ಸ್ಪಷ್ಟವಾಗಿ ಕಂಡಿರಬೇಕು. ಗಟ್ಟಿಯಾಗಿ ಒಮ್ಮೆ ನಕ್ಕುಬಿಟ್ಟರು—ಅದೇ ನಿಃಸಂಕೋಚವಾದ ನಗು! ನನಗೆ ಇನ್ನಿಷ್ಟು ದಿಗಿಲು. ಪುನಃ ಅವರೇ ಮಾತನಾಡಿದರು. '. . . ಮತ್ತೇನಿಲ್ಲ. ನೋಡಿ, ನೀವಾದರೂ ಈ ಊರಲ್ಲಿ ಎಷ್ಟುದಿನ ತಾನೆ ಇರಬೇಕಾಗಿದೆ? ಬಹಳೆಂದರೆ ಎರಡು ವರುಷ. ಅದೂ ಸೂಟಿಗಳಲ್ಲೆಲ್ಲ ಮನೆಗೆ ಹೋಗುವವರು. ಎಮ್.ಎ. ಆದಮೇಲೆ ಇಲ್ಲಿ ಏತಕ್ಕೆ ಹೆಚ್ಚು ದಿನ ನಿಲ್ಲುವಿರಿ? ಅದು ಇಲ್ಲಿಯ ಶಿಕ್ಷಕ ವರ್ಗಕ್ಕೂ ತಿಳಿದ ಮಾತೇ ಆಗಿದೆ . . .'

'Introduction ಸ್ವಲ್ಪ ದೀರ್ಘವಾಗುತ್ತಿದೆ; ಮುಖ್ಯವಿಷಯವೇನು ಹೇಳ ಬಾರದೇ?' ಈಗ ನಾನೂ ಸ್ವಲ್ಪ ನಿಃಸಂಕೋಚವಾಗಿಯೇ ಮಾತನಾಡತೊಡಗಿದೆ. '. . . ಅದೂ ಅಲ್ಲದೆ ಈ ಊರಲ್ಲಿ ಒಳ್ಳೆಯ ಹೋಟಲ್ಲು ಇಲ್ಲವೇ ಇಲ್ಲ. ಜೊತೆಗೆ ವ್ಯವಸ್ಥಿತವಾದ ರೂಮು ಸಿಕ್ಕುವದೂ ದುಸ್ತರವೇ . . . ನೀವು ಈ ಊರಲ್ಲಿ ಇರುವಷ್ಟು ದಿನ ನಮ್ಮ ಮನೆಯಲ್ಲಿಯೇ ಏಕಿರಬಾರದು?'

ನಿರ್ಮಲಾಬಾಯಿಯ ಪ್ರಶ್ನೆ ನನ್ನನ್ನೊಂದು ಕ್ಷಣ ದಿಙ್ಮೂಢನನ್ನಾಗಿಸಿತು. ಏನು ಹೇಳಬೇಕೋ ತಿಳಿಯದೆ ಮೌನವಾಗಿದ್ದೆ.

'ಸಂಕೋಚವೇ?'

ಈಸಲವಂತೂ ನನ್ನ ಪರಿಸ್ಥಿತಿ ತೀರ ಶೋಚನೀಯವಾಯಿತು.

'ಛೇ, ಅದೇನಿಲ್ಲ . . . ಆದರೂ ಇಂತಹ ದಿವಸಗಳಲ್ಲಿ . . . ಒಬ್ಬರ ಖರ್ಚು ಎಂದರೂ'—ಒಳ್ಳೆಯ ಪ್ರಯತ್ನಪೂರ್ವಕವಾಗಿ ಏನೋ ನೆಪ ಹೇಳಲು ಪ್ರಯತ್ನಿಸಿದೆ.

'ಅದೇಕೆ, ನೀವು ಹೋಟಲ್ಲಿನಲ್ಲಿದ್ದುದಾದರೆ ತಿಂಗಳಿಗೆ ಸುಮಾರು ಮೂವತ್ತು ರೂಪಾಯಿಗಳಷ್ಟಾದರೂ ನಿಮಗೆ ವೆಚ್ಚ ಆಗಿಯೇ ಆಗುತ್ತದೆ. ಅಷ್ಟನ್ನು ನೀವು ನಮ್ಮ ಮನೆಗಾಗಿಯೇ ವೆಚ್ಚಮಾಡಿ ಮನೆಯವರಂತೆ ಇರಲು ಬರುವದಿಲ್ಲವೇ? . . . ಆ ಹಣದ ಪ್ರಶ್ನೆ ನನಗೇನೂ ಮಹತ್ವದ್ದೆನಿಸುವದಿಲ್ಲ. ಅದಕ್ಕಾಗಿ ನೀವು ಚಿಂತಿಸ ಬೇಕಿಲ್ಲ. ನಿಮ್ಮ ಅಭ್ಯಾಸಕ್ಕೂ ಯಾವ ತೊಂದರೆ ಉಂಟಾಗಲಾರದು. ಮುಖ್ಯವಾಗಿ ಇದರಲ್ಲಿ ನನ್ನ ಸ್ವಾರ್ಥವೂ ಇದೆ. ನನಗೆ ಪಾಶ್ಚಿಮಾತ್ಯ ತಾತ್ವಿಕ ಗ್ರಂಥಗಳನ್ನೋದಿ ಅರ್ಥಮಾಡಿಕೊಳ್ಳಲು ನಿಮ್ಮ ಸಹಾಯ ಸಿಕ್ಕುವದು . . .'

ನಾನಿನ್ನೂ ಏನೋ ಯೋಚಿಸುತ್ತಿದ್ದೆ.

'ಇನ್ನೂ ಏನು ಯೋಚಿಸುತ್ತಿದ್ದೀರಿ' ನಿರ್ಮಲಾಬಾಯಿಯ ಧ್ವನಿ ತೀರ ಮೃದು ವಾಗಿತ್ತು. ನನಗವರ ಮುಖದ ಕಡೆಗೆ ನೋಡುವ ಧೈರ್ಯ ಸಾಲದೆ ಹೋಯಿತು. 'ನಾಲ್ಕು ಜನ ಏನಾದರೂ ಕಟ್ಟುಕತೆ ಹಬ್ಬಿಸಿಬಿಟ್ಟಾರೆಂದು ಹೆದರಿಕೆಯೇ?'

ನಾನು ಅವಾಕ್ಕಾದೆ. ನನ್ನ ಮನಸ್ಸಿನಲ್ಲಿ ಹತ್ತಿಕ್ಕಲೆಳಸುವ ವಿಚಾರಗಳನ್ನೆಲ್ಲ ನಿರ್ಮಲಾಬಾಯಿ ಒಂದೇ ಏಟಿಗೆ ಬಯಲಿಗೆ ಎಳೆದುಬಿಟ್ಟಿದ್ದರು. ಅವರ ಸೌಮ್ಯ ಹಾಗೂ ಗಂಭೀರ ಮುಖದೆಡೆಗೆ ನೋಡಿದಾಗ ನನಗೆ ತುಂಬ ನಾಚಿಕೆಯಾಯಿತು. ನನ್ನ ಬಗ್ಗೆಯೇ ಜುಗುಪ್ಸೆ ಉಂಟಾಯಿತು.

'ಶ್ರೀಧರರಾಯರೆ, ವಯಸ್ಸಿನಲ್ಲಿ ನೀವು ನನಗಿಂತ ಚಿಕ್ಕವರು. ಮೇಲಾಗಿ ಸುಶಿಕ್ಷಿತರು. ನಾನೂ ಕಲಿತವಳು. ನೆರೆಹೊರೆಯ ನಾಲ್ಕು ಪೋಲಿಗಳ ಮಾತಿಗೆ ಹೆದರಬೇಕಾದ ಸ್ಥಿತಿಯಲ್ಲಿ ನಾವೇನೂ ಇಲ್ಲ ಎಂದು ನನಗೆ ಖಂಡಿತ ಅನಿಸುತ್ತದೆ . . . ಆದರೂ . . . ನಿಮ್ಮಿಷ್ಟ . . .'

'ನಿರ್ಮಲಾಬಾಯಿ, ನಿಮ್ಮಂತಹರ ಪ್ರೀತಿ ವಿಶ್ವಾಸಗಳ ನೆರವು ಸಿಕ್ಕುತ್ತಿರುವದು ನನ್ನ ಭಾಗ್ಯವೇ ಸರಿ . . . ಇಂದಿನಿಂದ ನಿಮ್ಮ ಮನೆಯೇ ನನ್ನ ಮನೆ. ಗೌರಮ್ಮ ನಿಮಗೆ ಹೇಗೋ ಹಾಗೆ ನನಗೂ ತಾಯಿ ಸಮಾನ.' ನನ್ನ ಮಾತೂ ನಿರ್ಧಾರಪೂರ್ಣವಾಗಿತ್ತು.

ಪೂರ್ವದಿಗಂತದಲ್ಲಿ ಅದೇ ಚಂದ್ರೋದಯವಾಗಿತ್ತು. ಚಂದ್ರನ ಸೌಮ್ಯವಾದ ಕಿರಣಗಳು ಸಪ್ಪುಳಮಾಡುತ್ತ ಹರಿಯುವ ನದಿಯ ನೀರಿನಮೇಲೆ ಬಿದ್ದು ಪ್ರತಿಫಲನ ಹೊಂದಿ ಅನೇಕ ಚಂದ್ರಮರು ಹೊಯ್ದಾಡುತ್ತಿರುವ ಆಭಾಸವನ್ನುಂಟುಮಾಡು ತ್ತಿದ್ದವು. ದೂರದಲ್ಲಿಯ ಘಾಟೂ ನಿರ್ಜನವಾಗಿತ್ತು.

ಆ ಪ್ರಶಾಂತ ವಾತಾವರಣದಲ್ಲಿ ನಾವಿಬ್ಬರೂ ಮನೆಯ ಕಡೆಗೆ ಹೊರಟಾಗ ನಾನಂತೂ ಒಳ್ಳೆಯ ಉತ್ಸಾಹಿತನಾಗಿದ್ದೆ. ನಿರ್ಮಲಾಬಾಯಿಯ ಚುರುಕಾದ ನಡೆಗೆಯೂ ನಗುಮೊಗವೂ ಅವರೂ ಉಲ್ಲಸಿತರಾಗಿದ್ದರೆಂಬುದಕ್ಕೆ ಸಾಕ್ಷ್ಯವಾಗಿದ್ದವು.

ರಾತ್ರಿಯ ಊಟ ಸಾಗಿತ್ತು. ಗೌರಮ್ಮ ನಮಗಿಬ್ಬರಿಗೂ ಉಣಬಡಿಸುತ್ತಿದ್ದರು.

'ಅಮ್ಮ ನಿನಗೊಂದು ಸಂಗತಿ ತಿಳಿದಿರುವದೇ?' ನಿರ್ಮಲಾಬಾಯಿ ಫಕ್ಕನೆ ನುಡಿದರು. ನಾನು ವೇಟಿಂಗ ರೂಮಿನಲ್ಲಿ ಕಂಡ ತುಂಟನಗೆ ಮತ್ತೊಮ್ಮೆ ಈಗ ಅವರ ಮುಖದ ಮೇಲೆ ನೋಡಸಿಕ್ಕಿತು. ಗೌರಮ್ಮ ಸ್ವಲ್ಪ ಆಶ್ಚರ್ಯಚಕಿತಳಾಗಿ ಒಮ್ಮೆ ಮಗಳ ಕಡೆಗೆ ಇನ್ನೊಮ್ಮೆ ನನ್ನ ಕಡೆಗೆ ನೋಡಿದರು. ನಾನು ಏನೂ ಅರಿಯದವನಂತೆ ಊಟ ಮುಂದುವರಿಸಿದೆ.

'ಈಹೊತ್ತು ತಿರುಗಾಡಲು ಹೋದಾಗ ಶ್ರೀಧರರಾಯರು ತಮ್ಮ ಮನೆಯ ವಾರ್ತೆ ಎಲ್ಲ ಹೇಳುತ್ತಿದ್ದರು. ಅವರು ನಮಗೆ ದೂರದ ಸಂಬಂಧಿಕರಾಗಬೇಕು. . . . ಅವರಿಗೆ ಮುಂದಿನ ಪರೀಕ್ಷೆ ಪಾಸುಮಾಡುವ ವರೆಗೆ ಮಾತ್ರ ಅಂದರೆ ಸುಮಾರು ಎರಡು ವರ್ಷ ಈ ಊರಲ್ಲಿ ಕೆಲಸಮಾಡಬೇಕಾಗುವದು, ಅಷ್ಟೆ. ಅಷ್ಟರಸಲುವಾಗಿ

ಅವರು ಹೋಟಲ್ ಖಂಡಿತ ನೋಡಕೂಡದೆಂದೂ ನಮ್ಮ ಮನೆಯಲ್ಲಿಯೇ ಇರ ಬೇಕೆಂದೂ ನಾನವರಿಗೆ ಹೇಳಿಬಿಟ್ಟಿರುವೆ. . .'

ಗೌರಮ್ಮನ ಮುಖವೂ ಒಂದು ಕ್ಷಣ ಕಳೆಗೊಂಡಿತು. ತೃಪ್ತಿಕರವಾದ ಸ್ವರದಲ್ಲಿ ಇಬ್ಬರನ್ನೂ ಉದ್ದೇಶಿಸಿ ನುಡಿದರು, 'ಚನ್ನಾಯಿತು; ಒಬ್ಬರಿಗೊಬ್ಬರು ಜೋಡಾಗಿ ಓದ್ತಾನೋ ಬರೀತಾನೋ ಇದ್ದರೆ ಬೇಜಾರುಪಟ್ಟುಕೊಳ್ಳದೆ ಅನಾಯಾಸವಾಗಿ ದಿನಗಳೆಯಲೂ ಅನುಕೂಲವಾಗುತ್ತದೆ. ಮನೆಯಲ್ಲಿ ಪುಸ್ತಕಗಳಿಗೇನೂ ಕೊರತೆ ಇಲ್ಲ. . . .' ಏನೋ ನೆನಪಾಗಿ ಅವರ ಕಂಠ ತುಂಬಿಬಂದದ್ದರಿಂದ ಅಷ್ಟಕ್ಕೇ ಸುಮ್ಮ ನಾಗಿಬಿಟ್ಟರು.

ಆ ರಾತ್ರಿ ನನಗೆ ನಿದ್ರೆಹತ್ತುವದು ಅಸಾಧ್ಯವೆಂದು ತೋರಿತು. ಏನೇನೋ ವಿಚಾರ ತಲೆತುಂಬ ಗುದುಮುರಿಗೆ ಹಾಕುತ್ತಿದ್ದವು. 'ಎರಡು ದುಃಖೀ ಸ್ತ್ರೀ ಜೀವ ಗಳು! ಅವುಗಳನ್ನು ಸಾಂತ್ವನಗೊಳಿಸಲು ನಾನೇಕೆ ಕೈಲಾದಮಟ್ಟಿಗೆ ಯತ್ನಿಸ ಬಾರದು' ಎಂಬ ಒಂದು ವಿಚಾರಸರಣಿ ಆರಂಭವಾಗುವಷ್ಟರಲ್ಲಿ 'ನಿರ್ಮಲಾಬಾಯಿಯ ಪೂರ್ವೇತಿಹಾಸ ಏಕೆ ಕೇಳಬಾರದು' ಎಂದು ಇನ್ನೊಂದು ವಿಚಾರಮಾಲಿಕೆ ತಲೆ ದೋರುತ್ತಿತ್ತು. 'ಆ ದೊಡ್ಡ ಕಪಾಟಿನಲ್ಲಿಯ ಗ್ರಂಥಗಳೆಲ್ಲ ನಿರ್ಮಲಾಬಾಯಿಯ ಪತಿಗೆ ಸೇರಿದವುಗಳಾಗಿರಬೇಕು. ಹಾಗಿದ್ದ ಪಕ್ಷದಲ್ಲಿ ಆತ ಒಳ್ಳೆಯ ತತ್ವಜ್ಞಾನಿ ಯಾಗಿದ್ದಿರಬಹುದು. ಆ ಡಾಯರಿಗಳೆಲ್ಲ ಆತನವೇ ?. . . ಕೊನೆಯಿಲ್ಲದ ವಿಚಾರಗಳು!

* * *

ಇದಾಗಿ ಈಗ ಇಪ್ಪತ್ತು ವರುಷಗಳಾಗಿ ಹೋಗಿರಬಹುದು. ನಿರ್ಮಲಾ ಬಾಯಿಯ ಸಾನ್ನಿಧ್ಯದಲ್ಲಿ ಕಳೆದ ಎರಡು ವರುಷಗಳ ಕಾಲ ಮಾತ್ರ ನನ್ನಾಯುಷ್ಯದಲ್ಲಿ ನಾನೆಂದೂ ಮರೆಯುವದು ಸಾಧ್ಯವಿಲ್ಲ. ಆದರೆ ಅವರು ನನಗೆ ಅಂದಿನಷ್ಟೇ ಇಂದೂ ಒಂದು ಬಿಡಿಸಲಾರದ ಸಮಸ್ಯೆ. ನಾನು ಎಮ್.ಎ. ಪರೀಕ್ಷೆ ಪಾಸುಮಾಡಿದನಂತರ ಕಾಲೇಜಿನಲ್ಲಿ ಪ್ರಾಧ್ಯಾಪಕನ ಕೆಲಸ ದೊರಕಿದ್ದರಿಂದ ನಿರ್ಮಲಾಬಾಯಿಯ ಊರು ಬಿಟ್ಟುಬರಬೇಕಾಯಿತು. ಆ ಬಳಿಕಲೂ ಅವರು ಆಗಾಗ್ಗೆ ಬರೆಯುತ್ತಿರುವದುಂಟು. ಆದರೆ ಅನಂತರ ಇಲ್ಲಿಯವರೆಗೆ ಅವರನ್ನು ಕಂಡುದು ಎರಡುಸಲ ಮಾತ್ರ. ನಾನು ಕಾಲೇಜಿ ನಲ್ಲಿ ಕೆಲಸಹಿಡಿದು ಎರಡು ವರುಷಗಳಾದ ಬಳಿಕ ವಿವಾಹಬದ್ಧನಾಗುವ ಸಮಯಕ್ಕೆ ವಧೂವರರನ್ನು ಆಶೀರ್ವದಿಸಲು ನಿರ್ಮಲಾಬಾಯಿ, ಗೌರಮ್ಮ ಇಬ್ಬರೂ ನಮ್ಮ ಮನೆಗೆ ಬಂದು ಐದಾರು ದಿನಗಳ ವರೆಗೆ ಇದ್ದು ಹೋಗಿದ್ದರು. ಮುಂದೆ ಎರಡು ವರುಷ ಗಳ ನಂತರ ಅವರು ತಂದೆ-ತಾಯಿ ತೀರಿಕೊಂಡು ಅನಾಥನಾದ ಹತ್ತು ವರುಷದ ಬಾಲಕ ನಾರಾಯಣನನ್ನು ದತ್ತಕ ತೆಗೆದುಕೊಂಡಾಗ್ಗೆ ನಾನೇ ಹೆಂಡತಿಯೊಡಗೂಡಿ

ನಿರ್ಮಲಾಬಾಯಿಯವರ ಊರಿಗೆ ಎರಡು ದಿನ ಹೋಗಿದ್ದೆ. ಆ ಮೇಲೆ ಮಾತ್ರ ಅವರನ್ನು ಭೇಟಿಯಾಗುವ ಸಂದರ್ಭ ಒದಗಿರಲಿಲ್ಲ. 'ಕಮಲೂ'ನ ನಾಮಕರಣ ಸಮಾರಂಭಕ್ಕೂ 'ಕಿಟ್ಟು'ವಿನ ಚೌಲಕರ್ಮಕ್ಕೂ ಅವರಿಗೆ ದೇಹಾಲಸ್ಯದ ಮೂಲಕ ಬರಲಾಗದ್ದಕ್ಕಾಗಿ ವಿಷಾದಸೂಚಕ ಕಾಗದ ಬರೆದಿದ್ದರು. ಅವರಿಗೆ ವಿಜ್ಞಾನ ವಿಷಯಕ ಗ್ರಂಥಾಭ್ಯಾಸಕ್ಕೂ ತನ್ಮೂಲಕ ಪಾಶ್ಚಿಮಾತ್ಯ ತಾತ್ವಿಕ ಗ್ರಂಥಾಭ್ಯಾಸಕ್ಕೂ ನಾನು ಸಹಾಯ ಸಲ್ಲಿಸಿದ್ದು ನಿಮಿತ್ತಮಾತ್ರ. ಆ ಬಳಿಕ ಅವರ ಮನೆಯಲ್ಲಿಯ ಗ್ರಂಥಭಂಡಾರವೇ ಅವರಿಗೆ ಬೇಸರ ಪರಿಹರಿಸುವ ಅಮೌಲ್ಯ ಸಾಧನವಾಗಿ ಪರಿಣಮಿಸಿತ್ತು. ಜೊತೆಗೆ ಅವರ ಮನಸ್ಸಿನ ಸ್ತಿಮಿತವನ್ನೂ ಕಾಪಾಡುವದರಲ್ಲಿ ಅವು ತುಂಬಾ ಸಹಾಯವಾಗಿದ್ದಿರಬೇಕು. ಆಗಾಗ್ಗೆ ಅವರು 'ಅನೇಕ ತಾತ್ವಿಕ ಪ್ರಶ್ನೆ'ಗಳನ್ನು ಕುರಿತು ಕಾಗದ ಬರೆಯುತ್ತಿದ್ದರು. ನನ್ನ ಕೈಲಾದಮಟ್ಟಿಗೆ ನಾನೂ ಅವರ ಸಂದೇಹ ಪರಿಹರಿಸಲು ಯತ್ನಿಸುತ್ತಿದ್ದೆ. ಹೊಸ ಗ್ರಂಥಗಳು ದೊರೆತರೆ ಅವನ್ನೂ ಅವರಿಗೆ ತಪ್ಪದೆ ರವಾನಿಸುತ್ತಿದ್ದೆ.

ಅಂದು ಶನಿವಾರವಾದ್ದರಿಂದ ಮಧ್ಯಾಹ್ನ ಎರಡು ಗಂಟೆಗೇನೇ ನನ್ನ ಪಾಠ ಹೇಳುವ ಕೆಲಸ ಕೊನೆಗಂಡಿತ್ತು. ಮನೆಗೆ ಹೊರಡಬೇಕೆನ್ನುವಷ್ಟರಲ್ಲಿ ಕಾಲೇಜಿನ ಆಳು ಪತ್ರವೊಂದನ್ನು ಕೊಟ್ಟುಹೋದ. ಕವರಿನ ಮೇಲಿನ ವಿಳಾಸ ಬರೆದುದನ್ನು ನೋಡಿದೊಡನೆ ಅದು ನಿರ್ಮಲಾಬಾಯಿಯಿಂದ ಬಂದ ಕಾಗದ ಎಂಬ ಬಗ್ಗೆ ಸಂದೇಹಕ್ಕಾಸ್ಪದ ಉಳಿಯಲಿಲ್ಲ. ಒಡೆದು ನೋಡಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

ಶ್ರೀಧರರಾಯರಿಗೆ,

ದಯವಿಟ್ಟು ಒಂದು ದಿನದಮಟ್ಟಿಗೆ ಬಿಡುವು ಮಾಡಿಕೊಂಡು ಬಂದು ಹೋಗುವಿರಾ?

ತಮ್ಮ

ನಿರ್ಮಲಾಬಾಯಿ

ಈ ರೀತಿ ಪತ್ರದ ಒಕ್ಕಣಿಕೆಯಾಗಿತ್ತು. ಇಷ್ಟು ಚಿಕ್ಕ ಪತ್ರವನ್ನು ಅವರು ನನಗೆ ಬರೆದದ್ದು ಇದೇ ಮೊದಲುಬಾರಿ. ನನಗೇಕೋ ಸ್ವಲ್ಪ ಗಾಬರಿಯಾಯಿತು. ಬೇಡಬೇಡವೆಂದರೂ ಏನೇನೋ ಅಸಂಬದ್ಧ ವಿಚಾರಮಾಲಿಕೆಗಳು ತಲೆಯಲ್ಲಿ ತಾಂಡವವಾಡತೊಡಗಿದವು. 'ಏನಾದರೂ ಸ್ವಲ್ಪ ಸಹಾಯ ಬೇಕಾಗಿರಬಹುದು. ಅದಕ್ಕಾಗಿ ಕರೆಯಕಳುಹಿದ್ದಾರು' ಎಂದು ನನ್ನನ್ನು ನಾನೇ ಸಾಂತ್ವನಗೊಳಿಸಲು ಮಾಡಿದ ಪ್ರಯತ್ನ ವ್ಯರ್ಥವಾಯಿತು. ಮನಸ್ಸಿನ ಸ್ತಿಮಿತವೇ ಕದಡಿಹೋಯಿತು.

ರೈಲು ವೇಗವಾಗಿ ಧಾವಿಸುತ್ತಿತ್ತು. ನಿರ್ಮಲಾಬಾಯಿಯ ಊರಿಗೆ ಹೊರಡುವ ಮೊದಲನೆಯ ಗಾಡಿಯನ್ನೇ ಹಿಡಿದು ಹೊರಟಿದ್ದೆ. 'ಗೌರಮ್ಮ ಸರಿಯಾಗಿದ್ದಿರಬಹುದಷ್ಟೆ?' ಒಮ್ಮೊಮ್ಮೆ ಸಂದೇಹ ಜನಿಸುತ್ತಿತ್ತು. 'ಹಾಗೇನಾದರೂ ಇದ್ದಲ್ಲಿ ನಿರ್ಮಲಾಬಾಯಿ ಸ್ಪಷ್ಟವಾಗಿ ಬರೆಯದೆ ಇರುತ್ತಿರಲಿಲ್ಲ' ಸಂದೇಹಕ್ಕೆ ಸಮಾಧಾನವೂ ಸಿದ್ಧವಾಗಿರುತ್ತಿತ್ತು. ಹೀಗೆ ಅದೆಷ್ಟುವೇಳೆ ವಿಚಾರಮಗ್ನನಾಗಿದ್ದೆನೋ ಯಾವಾಗ ನಿದ್ರೆಹೋದೆನೋ ಎರಡೂ ನನಗೆ ಅರಿಯದು.

ಗಾಡಿಯ ಕರ್ಕಶವಾದ ಕೂಗು ನನ್ನನ್ನು ಬಡಿದೆಬ್ಬಿಸಿತು. ಕೈಗಡಿಯಾರ ನೋಡಿದಾಗ ಮುಂಜಾನೆಯ ನಾಲ್ಕು ಗಂಟೆಯಾಗಿತ್ತು. ಗಾಡಿ ನಿಲ್ದಾಣವನ್ನು ಅದೇ ಸೇರಿ ನಿಂತಿತ್ತು. ಅವಸರವಾಗಿ ನನ್ನ ಕೈಚೀಲ ಸರಿಪಡಿಸಿಕೊಂಡು ಕೆಳಗಿಳಿದೆ. ಗಾಡಿ ಚಲಿಸಿತು.

ಗಾಡಿಯಿಂದ ಇಳಿದವ ನಾನೊಬ್ಬನೇ. ಇಡಿಯ ಪ್ಲ್ಯಾಟಫಾರ್ಮಿನಲ್ಲಿ ಮಿಣುಕು ಲಾಂದ್ರದ ಹೊರತು ಮತ್ತೇನೂ ಇರಲಿಲ್ಲ. ಆಗಸದೆಡೆಗೆ ನೋಡಿದಾಗ ಶ್ರಾವಣಮಾಸದ ಕಾರ್ಮೋಡಗಳು ಎಲ್ಲೆಲ್ಲೂ ಪಸರಿಸಿದ್ದವು. ಇನ್ನೇನು ಮಳೆ ಆರಂಭವಾಗುವದರಲ್ಲಿಯೇ ಇದ್ದಿತು. ಚಳಿಗಾಳಿಯೂ ಬಿಟ್ಟಿತ್ತು.

ಇಪ್ಪತ್ತು ವರುಷಗಳ ಹಿಂದೆ ಮೊಟ್ಟಮೊದಲು ಈ ಊರಿಗೆ ಬಂದಾಗಿನ ದೃಶ್ಯ ನನ್ನ ಕಣ್ಣುಮುಂದೆ ಹಠಾತ್ತಾಗಿ ಕಟ್ಟಿತು. ಅದೇ ಖಾಕಿ ಉಡುಪಿನ ಪೋರ್ಟರು ಬಂದು ವೇಟಿಂಗ ರೂಮಿನ ಬಾಗಿಲು ತೆಗೆದುಕೊಟ್ಟ. ಸೋಫಾದ ಮೇಲೆ ವಿಶ್ರಮಿಸುತ್ತ ಥರ್ಮಾಸಿನಿಂದ ಒಂದು ಬಟ್ಟಲು ಚಹ ಸುರುವಿಕೊಂಡೆ. ಚಹ ಕುಡಿಯುತ್ತಿರುವಂತೆಯೇ ನಿರ್ಮಲಾಬಾಯಿಯೊಡನೆ ಮೊಟ್ಟಮೊದಲು ಈ ವೇಟಿಂಗ ರೂಮಿನಲ್ಲಿ ಕಳೆದ ದಿನದ ಒಂದೊಂದೇ ಸಂಗತಿ ಸ್ಮೃತಿಪಟಲದ ಮೇಲೆ ಸ್ಪಷ್ಟವಾಗಿ ಮೂಡಿ ಮೂಡಿ ಮಾಯವಾಗತೊಡಗಿದವು. ಹೊರಗಿನ ಗಾಳಿಯ ವೇಗ ಆಕಸ್ಮಿಕವಾಗಿ ಹೆಚ್ಚಿ ವೇಟಿಂಗ ರೂಮಿನ ಬಾಗಿಲುಗಳು ಧಡಾರೆಂದು ತೆರೆದುಬಿಟ್ಟು ಒಳಗಿದ್ದ ಮಿಣುಕುದೀಪ ನಂದಿಹೋಯಿತು. ಅದೇ ವೇಳೆಗೆ ಮುಸಲಧಾರೆಯಾಗಿ ಮಳೆ ಸುರಿಯಲಾರಂಭಿಸಿತು. ಹೊರಗೂ ಒಳಗೂ ಎಲ್ಲೆಡೆ ಅಂಧಕಾರ. ಗಾಳಿ-ಮಳೆಗಳ ಆರ್ಭಟ ಭಯಾನಕವಾಗಿತ್ತು. ಆದರೆ ನನಗೆ ಅವುಗಳ ಕಡೆಗೆ ಲಕ್ಷ್ಯವಿರಲಿಲ್ಲ. ಅಂತರ್ಮುಖನಾಗಿ ಏನೋ ಯೋಚಿಸುತ್ತಿದ್ದೆ.

ಮುಂಜಾನೆಯ ಗಾಡಿ ಬರುವ ಸೂಚನೆಯನ್ನೀಯುವ ಗಂಟೆ ಬಾರಿಸಿದಾಗಲೇ ನನಗೆ ಹೊರಗೆ ಬೆಳಕಾದದ್ದೂ, ಗಾಳಿ-ಮಳೆಯ ಜೋರು ಕುಗ್ಗಿದ್ದೂ ಕಂಡುಬಂದದ್ದು. ನಿಲ್ದಾಣದ ಹೊರಕ್ಕೆ ಹೊರಟೆ. ಏಕೋ ಹೆಜ್ಜೆಗಳು ಭಾರವಾದಂತಾಗಿ ಕಣ್ಣು ಹನಿಗೂಡಿದವು.

ಟಾಂಗೆಯಿಂದ ಕೆಳಗಿಳಿದಾಗ ನಿರ್ಮಲಾಬಾಯಿ ಮನೆಯ ಬಾಗಿಲಿನಲ್ಲಿಯೇ ನಿಂತಿದ್ದರು. 'ನೀವು ಇದೇ ಗಾಡಿಯಿಂದ ಬರುವಿರೆಂದು ಎಣಿಸಿದ್ದೆ ; ನಿರ್ಮಲಾಬಾಯಿ ಆನಂದಿತ ಮುಖಮುದ್ರೆಯನ್ನು ತೋರ್ಪಡಿಸಲು ಹೆಣಗಾಡುತ್ತಿರುವಂತೆ ನನಗೆ ಕಂಡುಬಂದಿತು. ಆದರೆ ಆ ತೋರಿಕೆಯ ಮುಖಚರ್ಯೆ ನನ್ನನ್ನು ವಂಚಿಸಲಸಮರ್ಥ ವಾಯಿತು. ನಿರ್ಮಲಾಬಾಯಿಯು ಶರೀರದ ಮೇಲೆ ವಯಸ್ಸಿನ ಪರಿಣಾಮ ಅಷ್ಟೇನೂ ವಿಶೇಷವಾಗಿದ್ದಂತೆ ಕಂಡುಬರುತ್ತಿರಲಿಲ್ಲ. ಆದರೆ ಅವರ ಮುಖ ತೀರ ನಿಸ್ತೇಜ ವಾಗಿತ್ತು. ಅವರ ಕಣ್ಣು ನೋಡಿದರೆ ಇತ್ತೀಚಿನ ಮೂರು ನಾಲ್ಕು ದಿನ ಅವರು ನಿದ್ರೆಮಾಡಿರುವಂತೆ ತೋರುತ್ತಿರಲಿಲ್ಲ. ಯಾವುದೋ ತೀವ್ರತಮವಾದ ಮಾನಸಿಕ ವೇದನೆಯಿಂದ ಅವರು ವಿಹ್ವಲರಾಗಿದ್ದರು. ಇನ್ನು ಸ್ವಲ್ಪಹೊತ್ತಿನಲ್ಲಿಯೇ ಜಾಗ್ರತ ವಾಗುವ ಜ್ವಾಲಾಮುಖಿಯನ್ನು ಸ್ಮೃತಿಗೆ ತರುವಂತಿತ್ತು—ಅವರ ನೋಟ. ನನಗೆ ತುಂಬ ಕಸಿವಿಸಿಯಾಯಿತು. ಆದರೂ ಒಳ್ಳೆಯ ಪ್ರಯತ್ನಪೂರ್ವಕವಾಗಿ ಸವ ರಿಸಿಕೊಂಡು, ಸ್ವಾಭಾವಿಕ ಮುಗುಳುನಗೆ ನಗುತ್ತ 'ಎಲ್ಲ ಕ್ಷೇಮ ತಾನೆ' ಎಂದು ವಿಚಾರಿಸಿ ಉತ್ತರವನ್ನಪೇಕ್ಷಿಸದೆ ನಿರ್ಮಲಾಬಾಯಿಯೊಡನೆ ಮನೆಯೊಳಕ್ಕೆ ಗೌರಮ್ಮ ನನ್ನು ಹುಡುಕಿಕೊಂಡು ಹೋದೆ. ಗೌರಮ್ಮ ತೀರ ಇಳಿದುಹೋಗಿದ್ದರು. ನನ್ನನ್ನು ಗುರುತಿಸಲೂ ಅವರಿಗೆ ಸ್ವಲ್ಪ ಹೆಚ್ಚು ವೇಳೆ ಬೇಕಾಯಿತು.

'. . . ಏನು, ಶ್ರೀಧರರಾಯರೇ ! ಒಳ್ಳೆಯ ಅಪರೂಪವಾಗಿಬಿಟ್ಟಿರುವಿರಲ್ಲ. . . ಎಲ್ಲ ಸೌಖ್ಯವಷ್ಟೆ. . . ಅದೇಕೆ ನಾರಾಯಣನ ಲಗ್ನಕ್ಕೂ ನಿಮಗೆ ಬರಲಾಗಲಿಲ್ಲ ವಲ್ಲ. . . ನಮ್ಮದೂ ಎಲ್ಲ ಅವಸ್ಥೆ ಮುಗಿದಂತೆಯೇ. . . ಏನೋ ಮೇಲಿಂದಮೇಲೇ ಬಂದು ಭೆಟ್ಟಿಯಾಗಿ ಹೋದರೆ ನಮ್ಮ ಮನಸ್ಸಿಗೂ ಸಮಾಧಾನವಿರುತ್ತದೆ. ಈಗೇ ನಾದರೂ ಕೆಲಸದ ನಿಮಿತ್ತ ಬಂದಿರುವಿರಾ ?'

ಗೌರಮ್ಮನ ನುಡಿ ಕೇಳಿ ನನಗೇಕೋ ಸಂದೇಹವಾಯಿತು. ಆದರೂ ತೋರ್ಪ ಡಿಸದೆ ಉತ್ತರಿಸಿದೆ. 'ಕೆಲಸವೇನೂ ವಿಶೇಷವಿರಲಿಲ್ಲ. ಹಾಗೆ ನಿಮ್ಮನ್ನೆಲ್ಲ ನೋಡಿ ಕೊಂಡು ಹೋಗೋಣ ಎಂದು ಬಂದೆ. ಭೆಟ್ಟಿಯಾಗಿಯೂ ಬಹಳ ದಿನಗಳಾಗಿತ್ತು. ನನಗೆ ಸ್ವಲ್ಪ ಬಿಡುವೂ ಇತ್ತು.'

'ನೀವು ಬಂದದ್ದೂ ಒಂದು ರೀತಿಯಿಂದ ನೆಟ್ಟಗೇ ಆಯಿತು. ಇತ್ತೀಚೆಗೆ ೪-೬ ದಿನಗಳಿಂದ ನಿರ್ಮಲಾಗೂ ಮೈಯಲ್ಲಿ ಹುಷಾರಿಲ್ಲ. ರಜೆಮೇಲೆಯೇ ಇದ್ದಾಳೆ. . .'

ಗೌರಮ್ಮನ ನಿರೂಪ ತೆಗೆದುಕೊಂಡು ನಿರ್ಮಲಾಬಾಯಿಯ ರೂಮಿನೊಳಗೆ ಹೋದೆ. ಅವರೂ ಅದೇ ಚಹ-ತಿಂಡಿಯ ವ್ಯವಸ್ಥೆಯಲ್ಲಿ ತೊಡಗಿದ್ದರು. ಅವರಿಗೆ ಸಹಾಯಕಳಾಗಿ ಹದಿನೆಂಟು ವರುಷದ ಇನ್ನೋರ್ವ ತರುಣಿಯೂ ಅವರ ಹತ್ತಿರವೇ

ನಿಂತಿದ್ದಳು. ನಾನು ರೂಮಿನೊಳಗೆ ಬಂದುದನ್ನು ಕಂಡು 'ಲಕ್ಷ್ಮೀ, ಶ್ರೀಧರರಾಯರು ಕಣೇ. . .' ಎಂದು ನಿರ್ಮಲಾಬಾಯಿ ಹೇಳಿದ ತಕ್ಷಣ ಲಕ್ಷ್ಮಿ ಬಂದು ನನಗೆ ನಮಸ್ಕರಿಸಿದಳು. ಇವಳೇ ನಾರಾಯಣನ ಹೆಂಡತಿ ಎಂಬುದರಲ್ಲಿ ಯಾವ ಸಂದೇಹಕ್ಕಾಸ್ಪದವಿರಲಿಲ್ಲ. ನಾನಾರು ಎಂಬುದು ಅವಳಿಗಾಗಲೇ ಗೊತ್ತಿದ್ದಂತೆ ತೋರಿತು 'ಅತ್ತೆಮ್ಮ' ನಾನು ಸ್ನಾನಕ್ಕೆ ನೀರು ಅಣಿಗೊಳಿಸುವೆ, ಎಂದು ಲಕ್ಷ್ಮಿ ಹೊರಟು ಹೋದಳು.

ಚಹ ಕುಡಿಯುತ್ತಿದ್ದಂತೆಯೇ ನಾನು ಕೋಣೆಯನ್ನು ಸ್ವಲ್ಪ ಸೂಕ್ಷ್ಮವಾಗಿ ನಿರೀಕ್ಷಿಸಿದೆ. ಸಾಮಾನುಗಳೆಲ್ಲ ಅಸ್ತವ್ಯಸ್ತವಾಗಿದ್ದವು. ಕಪಾಟನಲ್ಲಿಯ ಪುಸ್ತಕಗಳೂ ಓರಣವಾಗಿಟ್ಟಿರಲಿಲ್ಲ. ಸಹಜವಾಗಿ ಕಪಾಟಿನ ಕೆಳಗಿನ ಭಾಗದ ಮೇಲೆ ದೃಷ್ಟಿ ಹಾಯಿಸಿದೆ. ಇಪ್ಪತ್ತು ವರುಷಗಳ ಹಿಂದೆ ಕಂಡ ಅವೇ 'ಡಾಯರಿ'ಗಳು ಓರಣವಾಗಿ ಇಡಲ್ಪಟ್ಟಿದ್ದವು. ಜೊತೆಗೆ ಹೊಸದೊಂದು ಡಾಯರಿ ಕಂಡುಬಂದಿತು—ಅದು ಇದೇ ವರುಷದ್ದಾಗಿತ್ತು. ನನಗೆ ತುಂಬ ವಿಸ್ಮಯವೆನಿಸಿತು.

'ಅತ್ತೆಮ್ಮ, ಶ್ರೀಧರರಾಯರು ಸ್ನಾನಕ್ಕೆ ಏಳ್ತಾರೆ ತಾನೆ' ಲಕ್ಷ್ಮಿ ವಾಪಸು ಬಂದಿದ್ದಳು.

'ಈಗ ತಾನೆ ಬಂದಿದಾರೆ, ಒಂದು ತಾಸು ವಿಶ್ರಮಿಸಲಿ. ಅಲ್ಲಿಯವರೆಗೆ ನಿಮ್ಮದೆಲ್ಲ ತೀರಿಸಿಕೊಳ್ಳಿ' ನಿರ್ಮಲಾಬಾಯಿ ಲಕ್ಷ್ಮಿಯನ್ನು ಹಿಂದಕ್ಕೆ ಕಳುಹಿಸಿದರು.

'ನಿರ್ಮಲಾಬಾಯಿ, ಈಗ ನಿಮ್ಮ ದೇಹಾರೋಗ್ಯ ಸರಿಯಾಗಿರುವುದಷ್ಟೆ!' ನಾನು ಸಾವಧಾನವಾಗಿ ಮಾತಿಗೆ ಆರಂಭಿಸಿದೆ.

'ಶ್ರೀಧರರಾಯರೇ, ನನ್ನ ದೇಹ ಎಂದಿನಂತೆ ಆರೋಗ್ಯವಾಗಿಯೇ ಇದೆ' ನಿರ್ಮಲಾಬಾಯಿ ಏನನ್ನೋ ಹೇಳಲೆಳಸಿ, ಹೇಳಲಾರದವರಾಗಿದ್ದರು.

ಕೋಣೆಯಲ್ಲಿಯ ಕಿಟಕಿಯೊಳಗಿಂದ ದೂರದೃಷ್ಟಿ ಹರಿಸಿದೆ. ನದಿಗೆ ಮಹಾಪೂರ ಬಂದು ಪಾತ್ರ ತುಂಬಿ ಹರಿಯುತ್ತಿದ್ದುದು ಕಂಡುಬಂದಿತು. ನೀರಿನ ಸೆಳೆತಕ್ಕೆ ಸಿಕ್ಕು ಗಿಡಗಂಟೆಗಳು ವೇಗವಾಗಿ ಎಲ್ಲಿಯೋ ಕೊಚ್ಚಿಕೊಂಡೊಯ್ಯಲ್ಪಡುತ್ತಿದ್ದುವು.

'ಈಸಲ ನದಿಗೆ ಬಹಳೇ ನೀರು ಬಂದಂತಿದೆಯಲ್ಲವೇ ?' ನಾನು ಪ್ರಶ್ನಿಸಿದೆ.

'ಅಹುದು, ಇಪ್ಪತ್ತು ವರುಷಗಳಲ್ಲಿ ನದಿಗೆ ಇಷ್ಟು ದೊಡ್ಡ ಮಹಾಪೂರ ಬಂದಿರಲಿಲ್ಲ. ನಾಲ್ಕು ದಿವಸಗಳ ಕೆಳಗೆ ಇಲ್ಲಿಯ ಪೂಲು ಕೂಡ ಪ್ರವಾಹದ ವೇಗಕ್ಕೆ ಈಡಾಗದೆ ಬಿದ್ದು ಹೋಯಿತು.'

ಸ್ವಲ್ಪಹೊತ್ತು ಇಬ್ಬರೂ ಮೌನವಾಗಿದ್ದೆವು. ಭೋರ್ಗರೆಯುವ ನದಿಯ ಸಪ್ಪಳವೊಂದು ಮಾತ್ರ ಸ್ಪಷ್ಟವಾಗಿ ಕೇಳಬರುತ್ತಿತ್ತು. ಹೊರಕ್ಕೆಲ್ಲ ಒಮ್ಮೆಲೇ

ಮಬ್ಬುಗತ್ತಲಾದಂತಾಗಿ ಮಳೆಯು ಸರವು ಆರಂಭವಾಯಿತು. ನಾನು ನಿರ್ಮಲಾ ಬಾಯಿಯ ಕಡೆಗೆ ನೋಡಿದೆ. ಅವರು ಏನನ್ನೋ ಧ್ಯಾನ್ಯಿಸುವಂತಿದ್ದರು. ಸ್ವಲ್ಪ ಸಮಯದ ನಂತರ ಯಾವದೋ ನಿರ್ಧಾರಕ್ಕೆ ಬಂದವರಂತೆ ನನ್ನನ್ನುದ್ದೇಶಿಸಿ ನುಡಿದರು.

'ಶ್ರೀಧರರಾಯರೆ, ಮನುಷ್ಯಪ್ರಾಣಿ ಈ ಜಗತ್ತಿನಲ್ಲಿ ಹುಟ್ಟಿಬರುವದೂ ಏಕಾಕಿಯಾಗಿ; ಕೊನೆಗೆ ಈ ಜಗತ್ತು ಬಿಟ್ಟು ತೆರಳುವದೂ ಏಕಾಕಿಯಾಗಿ. ಆದರೂ ಜಗತ್ತಿನಲ್ಲಿರುವಷ್ಟು ದಿನ ಏಕಾಕಿಯಾಗಿಯೇ ಜೀವನ ನಡೆಯಿಸುವದು ಇಷ್ಟೊಂದು ದುಸ್ತರವೇಕೆನಿಸಬೇಕು ?'

ನಿರ್ಮಲಾಬಾಯಿಯ ಪ್ರಶ್ನೆಗೆ ನನ್ನ ಉತ್ತರದ ಆವಶ್ಯಕತೆ ಇರಲಿಲ್ಲವೆಂಬುದು ನನಗೆ ತಿಳಿದಿತ್ತು. ನನಗೆ ತುಂಬ ಸಂಕಟವಾಯಿತು. 'ಇಪ್ಪತ್ತು ವರುಷಗಳವರೆಗೆ ಮನಸ್ಸನ್ನು ಸ್ತಿಮಿತದಲ್ಲಿಟ್ಟುಕೊಂಡು ತಾಳ್ಮೆಯಿಂದ ನಡೆಯಿಸಿದ ಏಕಾಕೀ ಜೀವನದ ದುಃಸಾಧ್ಯತೆಯ ಅರಿವು ಹೀಗೆ ಒಮ್ಮೆಂದೊಮ್ಮೆ ಉಂಟಾಗಲು ಯಾವ ಸನ್ನಿವೇಶವೋ ಕಾರಣವಾಗಿದೆ. ನಿರ್ಮಲಾಬಾಯಿಯವರೇ ಇನ್ನು ಮುಚ್ಚುಮರೆ ಸಾಕು. ನನ್ನ ಮೇಲೆ ವಿಶ್ವಾಸವಿದೆಯಷ್ಟೆ! ಹಾಗಾದರೆ ನಡೆದ ಸಂಗತಿ ದಯವಿಟ್ಟು ಹೇಳಿ.'

ನನ್ನ ಮಾತು ನೇರವಾಗಿ ಅವರ ಹೃದಯವನ್ನು ತಾಗಿರಬೇಕು.

'ಶ್ರೀಧರರಾಯರೆ . . . .' ಮುಂದೆ ನಿರ್ಮಲಾಬಾಯಿಯ ಗಂಟಲು ಕಟ್ಟಿದ್ದರಿಂದ ಮಾತೇ ಹೊರಡಲಿಲ್ಲ. ಅವರ ಎರಡೂ ಕಣ್ಣುಗಳಿಂದ ನೀರು ಕೋಡಿಯಾಗಿ ಸುರಿಯಿತು. ಚಿಕ್ಕ ಮಗುವಿನಂತೆ ಅವರು ಅದೆಷ್ಟೋ ಹೊತ್ತು ಬಿಕ್ಕಿಬಿಕ್ಕಿ ಅಳುತ್ತಿದ್ದರು. ನದಿಯ ಪ್ರವಾಹದ ಕಡೆಗೆ ನೋಡಿದಾಗ 'ಈಸಲದ ಮಹಾಪೂರಕ್ಕೆ ಪೂಲು ಕೂಡ ಈಡಾಗದ್ದು ಏನೂ ಅಚ್ಚರಿಯಲ್ಲ' ಎಂದುಕೊಂಡೆ. ನನ್ನ ಹೃದಯವೂ ಭಾರವಾದಂತಾಗಿ ಕಣ್ಣು ಒದ್ದೆಯಾದವು. ನಿರ್ಮಲಾಬಾಯಿಯನ್ನು ಸಂತೈಸಲು ನಾನೇನೂ ಯತ್ನಿಸಲಿಲ್ಲ.

ಹೊರಗೆ ಮಳೆ ನಿಂತು ಸೂರ್ಯ ಸ್ವಲ್ಪಹೊತ್ತು ಕಾಣಿಸಿಕೊಂಡ. ಬಿಸಿಲೂ ಬಿದ್ದಿತು. ನಿರ್ಮಲಾಬಾಯಿ ಕಣ್ಣು ಒರೆಸಿಕೊಳ್ಳುತ್ತಿದ್ದರು. ಮುಖದಲ್ಲಿಯ ಉದ್ವಿಗ್ನ ಕಳೆ ಮಾಯವಾಗಿ, ಅದರ ಸ್ಥಳದಲ್ಲಿ ಗಾಂಭೀರ್ಯ ವ್ಯಾಪಿಸತೊಡಗಿತ್ತು. ಅವರು ನನ್ನನ್ನುದ್ದೇಶಿಸಿ ಮಾತನಾಡತೊಡಗಿದಾಗಲಂತೂ ಅವರ ಮುಖ ಸ್ವಲ್ಪ ಗೆಲವಾಗಿಯೇ ತೋರತೊಡಗಿತು.

'ಶ್ರೀಧರರಾಯರೆ, ನನಗಿದೊಂದು ಸಂಗತಿ ಬಳ್ಳೆಯ ವಿಚಿತ್ರವೆಂದು ಕಂಡುಬರುತ್ತಿದೆ. ನಾನೊಬ್ಬಳೇ ಅದೇಷ್ಟೋಸಲ ಇಡಿಯ ರಾತ್ರಿಯೆಲ್ಲ ಕಣ್ಣೀರುದುರಿಸಿ

ದ್ದೇನೆ. ಆದರೆ ನನಗೆ ಹಗುರೆನಿಸಿದುದಿಲ್ಲ. ಅದೇ ನನ್ನನ್ನು ಸ್ವಕೀಯಭಾವದಿಂದ ಕಾಣುವ ನಿಮ್ಮೆದುರು ಈಗ ತುಸುಹೊತ್ತು ಕಣ್ಣೀರುದುರಿಸಿದ ಪರಿಣಾಮವಾಗಿ ನನ್ನ ಮನಸ್ಸಿನಲ್ಲಿಯ ಉದ್ವಿಗ್ನತೆ ಎಲ್ಲ ಮಾಯವಾಗಿ, ಮನಸ್ಸು ಹಗುರಾದಂತಾಗಿದೆ. ಮಾನವಪ್ರಾಣಿಗೆ ಸ್ವಕೀಯರೆನ್ನುವವರ ಆವಶ್ಯಕತೆ ಇಷ್ಟೇಕಿರಬೇಕೋ? . . . ಅಥವಾ ಅದು ಕೆಲವರ ಮಾನಸಿಕ ದೌರ್ಬಲ್ಯ ಮಾತ್ರವೋ?'.

'ಅದಕ್ಕೆ ಸ್ವಲ್ಪಮಟ್ಟಿಗೆ ನಿಸರ್ಗ ನಿಯಮವೂ, ಹೆಚ್ಚಾಗಿ ಪರಂಪರಾಗತ ಸಂಸ್ಕಾರಗಳೂ ಕಾರಣವಾಗಿರಬೇಕಲ್ಲದೆ ಮತ್ತೇನೂ ಇಲ್ಲ' ನಾನೇನೋ ಕಾರಣ ವಿವರಿಸಲು ಪ್ರಯತ್ನಿಸಿದೆ.

ದೊಡ್ಡ ಕಪಾಟಿನ ಕೆಳಭಾಗದಲ್ಲಿಯ ಡಾಯರಿಗಳಲ್ಲಿ ತೀರ ಹೊಸದಾದ ಡಾಯರಿಯನ್ನು ನಿರ್ಮಲಾಬಾಯಿ ತಮ್ಮ ಕೈಯಲ್ಲಿ ತೆಗೆದುಕೊಂಡು, ಸ್ವಲ್ಪ ಸಮಯ ಮೌನವಾಗಿದ್ದು ಬಳಿಕ ಮಾತನಾಡತೊಡಗಿದರು.

'ಏಳೆಂಟು ದಿನಗಳ ಕೆಳಗೆ ಈ ಊರಿಗೆ ಒಬ್ಬ ಸಾಧುಪುರುಷರು ಬಂದಿದ್ದರು. ಅವರೊಳ್ಳೆ ತೇಜಃಪುಂಜರೂ ತಪೋಧನರೂ ಆಗಿ ಕಾಣುತ್ತಿದ್ದರೆಂದು ಜನರು ಹೇಳುವದನ್ನು ಮಾತ್ರ ಕೇಳಿದ್ದೆ. ಘಾಟಿನ ಹತ್ತಿರದಲ್ಲಿಯ ಚಿಕ್ಕ ದೇವಸ್ಥಾನದಲ್ಲಿಯೇ ಅವರು ಉಳಿದುಕೊಂಡಿದ್ದರು. ದಿನಾಲು ಅವರ ದರ್ಶನಕ್ಕಾಗಿ ಅನೇಕರು ಹೋಗಿ ಬರುತ್ತಿದ್ದರು. ಈಗ ನಾಲ್ಕು ದಿನಗಳ ಕೆಳಗೆ ಇಳಿಹೊತ್ತಿನಲ್ಲಿ ನಾನೊರ್ವಳೇ ಅವರ ದರ್ಶನಕ್ಕೆ ಹೋಗಿದ್ದೆ. ನಾನು ಹೋದಾಗ ಅವರಾವುದೋ ಗಹನವಿಚಾರದಲ್ಲಿದ್ದಂತೆ ಕಾಣುತ್ತಿದ್ದರು. ದೇವಸ್ಥಾನದ ಮುಂದಿನ ಅಂಗಳದಲ್ಲಿ ನಿಂತುಕೊಂಡು ಏಕಚಿತ್ತದಿಂದ ತುಂಬಿ ಹರಿಯುವ ನದಿಯ ಪ್ರವಾಹ ತನಗೆದುರಾದ ಪೂಲಿಗೆ ರಭಸವಾಗಿ ಅಪ್ಪಳಿಸುವ ದೃಶ್ಯವನ್ನು ನೋಡುತ್ತ ನಿಂತಿದ್ದರು. ನಾನು ಹತ್ತಿರ ಹೋದೊಡನೆಯೇ ಅವರ ಸಮಾಧಿ ಭಂಗವಾಯಿತೋ ಏನೋ, ನನ್ನೆಡೆಗೆ ಒಂದು ಕ್ಷಣ ನೋಡಿದರು. ನಾನೂ ಅವರ ಮುಖದಕಡೆಗೆ ನೋಡಿದೆ.

'ಶ್ರೀಧರರಾಯರೆ, ನನ್ನ ಕಣ್ಣುಗಳನ್ನು ನಾನೇ ನಂಬಲಾರದೆಹೋದೆ. ನಾನವರನ್ನು . . . ಗುರುತಿಸಿದೆ.' ನಿರ್ಮಲಾಬಾಯಿಯ ಕಣ್ಣೊಳಗಿಂದ ನೀರು ಹೊರಸೂಸಿ ಕಪೋಲಗಳ ಮೇಲೆ ಹರಿಯುತ್ತಿದ್ದರೂ ಅದರ ಕಡೆಗೆ ಅವರ ಲಕ್ಷ್ಯ ಎಳ್ಳಷ್ಟೂ ಇರಲಿಲ್ಲ. ಹಾಗೆಯೇ ತಮ್ಮ ಕತೆ ಮುಂದುವರಿಸಿದರು.

'ಇಪ್ಪತ್ತೈದು ವರುಷಗಳ ಕಾಲಾವಧಿ ಅವರ ದೇಹದಲ್ಲಿ ಅನೇಕ ಮಾರ್ಪಾಟುಗಳನ್ನುಂಟುಮಾಡಿದ್ದರೂ ನನಗವರನ್ನು ಗುರುತಿಸುವದು ಕಷ್ಟವಾಗಲಿಲ್ಲ. ನನ್ನ ಹೃದಯವೆಲ್ಲ ಮರುಕಳಿಸಿ ಬಂದಂತಾಯ್ತು. ನನಗೆ ಎಚ್ಚರದಪ್ಪಿದಂತೆಯೇ ಆಗಿತ್ತು.

ಅವರ ಪಾದಗಳ ಮೇಲೆ ತಲೆ ಇಟ್ಟು ಎಷ್ಟುಹೊತ್ತು ರೋದಿಸುತ್ತಿದ್ದೆನೋ ನನಗರಿಯದು. ಕೆಲ ಸಮಯದನಂತರ ಅವರೇ ನನ್ನನ್ನು ಎಬ್ಬಿಸಿ, ತಮ್ಮ ಕಾವೀ ಬಟ್ಟೆಯಿಂದ ನನ್ನ ಕಣ್ಣು ಒರೆಸಿ, ತಲೆ ನೇವರಿಸುತ್ತ ವಾತ್ಸಲ್ಯಪೂರ್ಣವಾಗಿ ಸಮಾಧಾನ ಮಾಡುವ ತೆರದಿ ನುಡಿದರು 'ಏನಮ್ಮಾ, ಇಷ್ಟು ದುಃಖಿಯಾಗಿರುವಿ. ನಿನಗೆ ಬಂದ ಸಂಕಟವೇನು ?'

ನಾನು ಕಕ್ಕಾವಿಕ್ಕಿಯಾದೆ. ಪುನಃ ಅವರ ಮುಖವನ್ನೀಕ್ಷಿಸಿದೆ. ಅವರ ಮುಖದ ಗಾಂಭೀರ್ಯದಲ್ಲಿ ಏನೂ ಹೆಚ್ಚುಕಡಿಮೆಯಾಗಿರಲಿಲ್ಲ. ನನ್ನ ನಿರೀಕ್ಷಣೆಯೂ ತಪ್ಪಾಗಿರಲಿಲ್ಲ. ಬಹಳ ಕಷ್ಟದಿಂದ ದುಃಖವನ್ನು ಅದುಮಿ ಹಿಡಿದೆ.

'ಸ್ವಾಮಿ, ದೇವರು ಈ ಜಗತ್ತಿನಲ್ಲಿ ದುಃಖವನ್ನೇಕೆ ನಿರ್ಮಿಸಿದ ?' ನನ್ನ ಪ್ರಶ್ನೆಗೆ ಅವರು ಮುಗುಳುನಗೆ ನಕ್ಕು ಉತ್ತರಿಸಿದರು. 'ದೇವರು ದುಃಖವನ್ನೂ ನಿರ್ಮಿಸಲಿಲ್ಲ, ಸುಖವನ್ನೂ ನಿರ್ಮಿಸಲಿಲ್ಲ. ಎರಡನ್ನೂ ನಿರ್ಮಿಸಿಕೊಂಡು ಬಳಲುವವರು ನಾವೇ—ಅಜ್ಞಾನಿ ಮಾನವರು.'

ಅವರಿಗೆ ಮತ್ತೊಮ್ಮೆ ವಂದಿಸಿ ನಾನು ಮರಳಿದೆ. ನನಗೆ ಕಾಲಲ್ಲಿ ನಡೆಯುವ ತ್ರಾಣ ಕೂಡ ಇದ್ದಂತೆ ತೋರಲಿಲ್ಲ. ಅವರು ನನ್ನನ್ನು ಗುರುತಿಸಲಿಲ್ಲ . . . ಅಥವಾ . . . ನನ್ನ ಕಣ್ಣಿಗೆ ಕತ್ತಲು ಬಂದಂತಾಯಿತು. ಒಮ್ಮಿಂದೊಮ್ಮೆ ಭಯಂಕರವಾದ ಸಪ್ಪಳವೊಂದು ಕೇಳಿಬಂದು ನನ್ನ ಶರೀರ ಥರಥರನೆ ನಡುಗಿತು. ಕೋಲ್ಮಿಂಚಿನ ಬೆಳಕಿನಲ್ಲಿ ಎದುರಿಗೆ ನೋಡಿದಾಗ ನದಿಯ ಪ್ರವಾಹ ಪೂಲನ್ನು ಕೊಚ್ಚಿಕೊಂಡು ಹೋಗಿತ್ತು.'

"ಹೇಗೋ ಅಂದು ರಾತ್ರಿ ಮನೆ ಸೇರಿದೆ. ಆ ಹೊತ್ತಿನಿಂದ ನನಗೆ ನಿದ್ರೆಯೇ ಇಲ್ಲ. ಯಾವ ಕೆಲಸದಲ್ಲಿಯೂ ಮನಸ್ಸಿಲ್ಲ. ನನಗೆ ರೋದಿಸಬೇಕೆಂದೇನೂ ಇಷ್ಟವಿಲ್ಲ. ಆದರೂ ಕಣ್ಣೀರು ತಮ್ಮಿಂದ ತಾವೇ ಒಂದೇಸವನೆ ಹರಿದುಹೋಗುತ್ತಾ ಇವೆ."

ಸ್ವಲ್ಪಹೊತ್ತು ಸುಮ್ಮನಾಗಿದ್ದು ನಿರ್ಮಲಾಬಾಯಿ ಪುನಃ ಹೇಳಲಾರಂಭಿಸಿದರು. "ಶ್ರೀಧರರಾಯರೆ, ದಿನಚರಿ ಬರೆಯುವ ಅಭ್ಯಾಸವಿರುವ ಸನ್ಯಾಸಿಗಳ ಬಗ್ಗೆ ನೀವು ಎಂದಾದರೂ ಕೇಳಿರುವಿರಾ ? ನಿಜಕ್ಕೂ ಇದು ಅತ್ಯಾಶ್ಚರ್ಯಕರವಾದ ವಿಷಯವಲ್ಲವೇ ? ನಾನು ಮರುದಿನ ಪ್ರಾತಃಕಾಲ ಪುನಃ ಘಾಟಿನ ಹತ್ತಿರದ ಚಿಕ್ಕ ದೇವಸ್ಥಾನಕ್ಕೆ ಹೋದೆ. ಇನ್ನೂ ನಸುಕು ಹರಿಯುವದರಲ್ಲಿತ್ತು. ಅದೇ ಒಬ್ಬಿಬ್ಬ ಹೆಂಗುಸರು ನೀರಿಗಾಗಿ ನದಿಗೆ ಬರತೊಡಗಿದ್ದರು. ನಾನು ದೇವಸ್ಥಾನದೊಳಕ್ಕೆ ಕಾಲಿಟ್ಟಾಗ ಅದು ನಿರ್ಜನವಾಗಿದ್ದುದು ನನ್ನ ಲಕ್ಷ್ಯಕ್ಕೆ ಬಂದಿತು. ಸಾಧುಪುರುಷರು ಮುನ್ನಾದಿನ ರಾತ್ರಿಯಲ್ಲಿಯೇ ದೇವಸ್ಥಾನವನ್ನು ತ್ಯಜಿಸಿರಬೇಕು—ಅದೂಕೂಡ

ಸ್ವಲ್ಪ ಗಡಿಬಿಡಿಯಲ್ಲಿಯೇ ಹೊರಟುಹೋಗಿರಬೇಕೆಂಬುದು ಯಾರ ಲಕ್ಷ್ಯಕ್ಕೂ ಬರುವಂತಿದ್ದಿತು. ಅವರು ತಮ್ಮ ಈ ಡಾಯರಿ ಅಲ್ಲಿ ಮರೆತುಹೋಗಿದ್ದರು."

ನಿರ್ಮಲಾಬಾಯಿ ತಮ್ಮ ಕೈಯಲ್ಲಿಯ ಡಾಯರಿ ಎದುರಿನ ಮೇಜಿನ ಮೇಲೆ ಸಶಬ್ದವಾಗಿ ಇಟ್ಟರು. ನಾನು ಅವರ ಹೇಳಿಕೆಯನ್ನು ಮೌನವಾಗಿ ಆಲಿಸುತ್ತಿದ್ದೆ ಅಷ್ಟೆ. ಅವರ ವಿಚಾರಸರಣಿಗೆ ಆತಂಕ ತರುವ ಇಷ್ಟ ನನಗೆ ಎಳ್ಳಷ್ಟೂ ಇರಲಿಲ್ಲ. ಸ್ವಲ್ಪಹೊತ್ತು ಏನೋ ವಿಚಾರಿಸಿ ನಿರ್ಮಲಾಬಾಯಿ ಪುನಃ ಮಾತನಾಡತೊಡಗಿದರು.

"ಶ್ರೀಧರರಾಯರೆ, ನನ್ನ ಜೀವನದಲ್ಲಿ ನಡೆದುಹೋದ ಒಂದು ಮಹತ್ವಪೂರ್ಣ ಘಟನೆಯನ್ನು ಈಗ ನಿಮ್ಮೆದುರು ಹೇಳಲಿರುವೆ. ಈ ವಿಷಯವಾಗಿ ನಾನು ಇದುವರೆಗೂ ಯಾರ ಇದಿರಿನಲ್ಲಿಯೂ ಬಾಯಿಬಿಚ್ಚಿಲ್ಲ . . . ಆ ಮಾತಿಗೆ ಈಗ ಇಪ್ಪತ್ತೈದು ಒಂದುವೇಳೆ ಮೂವತ್ತು ವರುಷಗಳಾಗಿಹೋಯಿತು ಎಂದರೂ ಅಡ್ಡಿ ಇಲ್ಲ. ನಾನಾಗ ಬಿ.ಎ. ಕ್ಲಾಸಿನಲ್ಲಿ ಓದುತ್ತಿದ್ದೆ. ಕಾಲೇಜಿನಲ್ಲಿ ಸಂಸ್ಕೃತವನ್ನು ಬಿ.ಎ. ಪರೀಕ್ಷೆಗೆ ಮುಖ್ಯ ವಿಷಯವನ್ನಾಗಿ ತೆಗೆದುಕೊಂಡವಳೆಂದರೆ ಆ ವರುಷ ನಾನೊರ್ವಳೇ ಆಗಿದ್ದೆ. ನಮ್ಮ ಕಾಲೇಜಿಗೆ ಆನಂದರಾಯರು ಸಂಸ್ಕೃತ ವಿಷಯದ ಮುಖ್ಯ ಪ್ರಾಧ್ಯಾಪಕರಾಗಿ ಬಂದುದೂ ಅದೇ ವರುಷವೇ. ಅವರಿನ್ನೂ ನವಯುವಕರು. ಆದರೆ ಸಂಸ್ಕೃತ ವಿಷಯದಲ್ಲಿಯೂ ತತ್ವಜ್ಞಾನದಲ್ಲಿಯೂ ಅವರ ಪಾಂಡಿತ್ಯ ಅಗಾಧವಾಗಿತ್ತು. ಅವರ ಗಂಭೀರ ಮುಖಚರ್ಯೆ ನೋಡಿದರೆ ಅವರ ಪಾಂಡಿತ್ಯದ ಅರಿವು ತಟ್ಟನೆ ಯಾರಿಗೂ ಆಗುವಂತಿತ್ತು. ಅವರು ಹೆಚ್ಚಾಗಿ ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಯಾವಾಗಲೂ ಆಲೋಚನಾಪರರಾಗಿದ್ದಂತೆಯೇ ಇರುತ್ತಿದ್ದರು."

"ಬಿ.ಎ. ಕ್ಲಾಸಿನಲ್ಲಿ ಅವರಿಗೆ ನಾನೊರ್ವಳೇ ವಿದ್ಯಾರ್ಥಿ. ಅವರು ನನಗೆ ಪಾಠ ಹೇಳಿಕೊಡುತ್ತಿದ್ದ ರೀತಿಯೂ ಬೇರೆಯೇ ಆಗಿದ್ದಿತು. ನಮ್ಮ ಪಾಠ ಸಾಗುತ್ತಿದ್ದುದು ಚರ್ಚೆ, ಸಂವಾದ ಇವುಗಳ ಮೂಲಕವೇ. ಅವರ ನಿಃಸಂಕೋಚವೂ ಸರಳವೂ ವಿನಯಪೂರ್ಣವೂ ಆದ ಆಚರಣೆ ನನಗೆ ಒಬ್ಬ ಮೇಧಾವಿಯಾದ ಸಹಪಾಠಿಯನ್ನು ಜ್ಞಾಪಕಕ್ಕೆ ತರುತ್ತಿದ್ದಿತು. ಅಂತೆಯೇ ನಾನವರೊಡನೆ ಅನೇಕವೇಳೆ ವಿವಿಧ ವಿಷಯಗಳನ್ನು ಕುರಿತು ಸಮಯಾಸಮಯ ವಿವೇಚನೆ ಇಲ್ಲದೆ ಚರ್ಚಿಸುತ್ತಿದ್ದೆ. ಅದಕ್ಕಾಗಿ ಅವರೆಂದಿಗೂ ಆಕ್ಷೇಪಣೆ ಎತ್ತಿದುದಿಲ್ಲ. ಪ್ರತಿಯಾಗಿ ಅವರು ಒಳ್ಳೆಯ ಉತ್ಸಾಹವನ್ನೇ ತೋರ್ಪಡಿಸುತ್ತಿದ್ದರು."

"ಬಿ.ಎ. ಪರೀಕ್ಷೆ ಮುಗಿಸಿ ಮನೆಗೆ ಮರಳುವ ಪೂರ್ವದಲ್ಲಿ ಆನಂದರಾಯರಿಗೆ ಭೆಟ್ಟಿಯಾಗಿ ಬರಲು ಅವರ ರೂಮಿಗೆ ಹೋದೆ. ಅವರಿನ್ನೂ ಅವಿವಾಹಿತರು; ಕಾಲೇಜು ಹಾಸ್ಟೆಲ್‌ನಲ್ಲಿಯೇ ಅವರ ವಾಸ್ತವ್ಯವಿದ್ದಿತು. ನಾನು ಹೋದೊಡನೆಯೇ ಆದರ

ದಿಂದ ಬರಮಾಡಿ ಕುಳ್ಳಿರಿಸಿಕೊಂಡರು. 'ನಿರ್ಮಲಾ, ಪೇಪರು ಚನ್ನಾಗಿ ಮಾಡಿರುವಿಯಷ್ಟೆ!'

'ಚನ್ನಾಗಿ ಮಾಡಿರುವೆ. ಫಸ್ಟ್‌ಕ್ಲಾಸು ಸಿಕ್ಕಬಹುದೆಂದು ಅನಿಸುತ್ತದೆ' ನಾನು ಸ್ವಲ್ಪ ಅನುಮಾನಿಸುತ್ತ ಉತ್ತರವಿತ್ತೆ.

'ನಿನಗಲ್ಲದೆ ಇನ್ನಾರಿಗೆ ಫಸ್ಟ್‌ಕ್ಲಾಸು ಸಿಕ್ಕುವದು' ಆನಂದರಾಯರ ನಸುನಗೆಯಲ್ಲಿ ನಿರ್ಧಾರಸೂಚಕ ಭರವಸೆಯಡಗಿತ್ತು. ನನಗೇಕೋ ನಾಚಿಕೆಯಾದಂತಾಯಿತು.

'ಆನಂದರಾಯರೆ, ನೀವು ಸಂಸ್ಕೃತ ವಿಷಯದ ಪ್ರಾಧ್ಯಾಪಕರಾಗಿದ್ದು ವಿಜ್ಞಾನ ವಿಷಯಕ ಹಾಗೂ ಪಾಶ್ಚಿಮಾತ್ಯ ತತ್ವಜ್ಞಾನ ಗ್ರಂಥಗಳಲ್ಲಿ ಹೇಗೆ ಇಷ್ಟು ಅಭಿರುಚಿಯುಳ್ಳವರಾಗಿರುವಿರಿ?' ನಾನವರನ್ನು ಕೇಳಿದೆ. ಏಕೆಂದರೆ ನನಗವರ ರೂಮಿನಲ್ಲಿ ಇವೇ ಗ್ರಂಥಗಳೇ ಹೆಚ್ಚಾಗಿದ್ದದು ಕಂಡುಬಂದಿತು.

'ಸಂಸ್ಕೃತ ಬಲ್ಲವರಿಗೆ ವಿಜ್ಞಾನ ವಿಷಯಗಳಲ್ಲಿ ಅಭಿರುಚಿ ಇರಕೂಡದೇ? ಅನೇಕ ಬಗೆಯ ವಿಚಾರಪ್ರಣಾಲಿಗಳನ್ನು ತಿಳಿದುಕೊಳ್ಳುವದರಿಂದ ದೃಷ್ಟಿ ವಿಶಾಲವಾಗುವದು. ಸಂಕುಚಿತ ಮನೋವೃತ್ತಿ ಅಳಿಯುವದು.'

'ಆನಂದರಾಯರೊಡನೆ ತಾತ್ವಿಕ ಚರ್ಚೆಯಲ್ಲಿ ತೊಡಗಲು ನಾನು ಅಸಮರ್ಥಳೆಂದು ನನಗೆ ತಿಳಿದಿತ್ತು. ನಾನು ಸುಮ್ಮನಾದೆ.'

'ನಿಮ್ಮ ಮನೆಯಲ್ಲಿ ಹಿರಿಯರು ಯಾರಿದ್ದಾರೆ?' ಬೇರೊಂದು ವಿಷಯ ಪ್ರಸ್ತಾಪಿಸುತ್ತ ಆನಂದರಾಯರೆಂದರು.'

'ವಿಧವೆ ತಾಯಿ ಮಾತ್ರ' ನಾನು ಉತ್ತರಿಸಿದೆ.

'ಬಿ.ಎ. ಪರೀಕ್ಷೆಯಾದ ಮೇಲೆ ಏನು ಮಾಡಬೇಕೆಂದಿರುವಿ?'

"ಈ ಪ್ರಶ್ನೆಯನ್ನು ಈ ಮೊದಲು ನನಗೆ ನಾನೇ ಹಲವಾರುಸಲ ಕೇಳಿಕೊಂಡಿದ್ದೆ. ಆದರೆ ನಿಶ್ಚಿತವಾದ ಉತ್ತರ ಸಿಕ್ಕಿರಲಿಲ್ಲ. ಆನಂದರಾಯರಿಂದಲೂ ಇದೇ ಪ್ರಶ್ನೆ ಬಂದುದು ಕೇಳಿ ನನಗೆ ಹೇಗೋ ಅನಿಸಿತು. 'ಇನ್ನೂ ಯೋಚಿಸಿಲ್ಲ. . .' ಎಂದೇನೋ ಹೇಳಲು ಯತ್ನಿಸಿದೆ. ಆನಂದರಾಯರು ನನ್ನ ಉತ್ತರದಕಡೆಗೆ ಲಕ್ಷ್ಯಕೊಟ್ಟಂತೆ ತೋರಲಿಲ್ಲ."

'ಪ್ರಸಂಗ ಬಂದರೆ, ನೌಕರಿ ಹಿಡಿದು ಸ್ವತಂತ್ರಜೀವನವನ್ನು ಸಾಗಿಸುವ ಮನೋಧೈರ್ಯವಿದೆಯೇ?' ಆನಂದರಾಯರ ಆಕಸ್ಮಿಕ ಪ್ರಶ್ನೆಯಿಂದ ಬೆಚ್ಚಿಬಿದ್ದೆ. ಅವರ ಮುಖದಕಡೆಗೆ ನೋಡಿದಾಗ ಅವರು ಈ ಪ್ರಶ್ನೆಯನ್ನು ಆಳವಾಗಿ ವಿಚಾರಮಾಡಿಯೇ ಕೇಳಿದ್ದಂತೆ ಅನಿಸಿತು. ಒಂದು ನಿಮಿಷ ಆಲೋಚಿಸಿ, ನಿರ್ಧಾರಸ್ವರದಲ್ಲಿ ನಾನು ಉತ್ತರಿಸಿದೆ 'ಇದೆ.' ಆನಂದರಾಯರ ಮುಖ ಪ್ರಫುಲ್ಲಿತವಾಯಿತು.

'ನಿರ್ಮಲಾ, ಇದೋ ಈ ಕಾಗದ ಒಯ್ದು ನಿಮ್ಮ ತಾಯಿಗೆ ಓದಿ ತೋರಿಸಿ ಅವರ ಮತ ಕೇಳಿ ನನಗೆ ಉತ್ತರ ಬರೆ' ಒಂದು ಕವರನ್ನು ನನ್ನ ಕೈಲಿಡುತ್ತ ಆನಂದ ರಾಯರು ನುಡಿದರು. ಒಂದು ಕ್ಷಣ ನನ್ನ ಹೃದಯದ ಬಡಿತ ಜೋರಾದಂತೆ ಎನಿಸಿತು. ಮುಖವೂ ಬೆವರಿತು. ಆದರೂ ಅದನ್ನು ತೋರಗೊಡದಂತೆ ಅವರ ಅಪ್ಪಣೆ ಪಡೆದು ಊರಿಗೆ ಹೊರಟು ಬಂದೆ.

"ಶ್ರೀಧರರಾಯರೆ, ಆನಂದರಾಯರು ನನ್ನ ಕೈಲಿತ್ತ ಕಾಗದ ಮೊದಲು ಬಾರಿ ಓದಿನೋಡಿದಾಗ ನನ್ನ ಹೃದಯದಲ್ಲಿ ಉಂಟಾದ ಭಾವನೆಗಳನ್ನು ಶಬ್ದರೂಪವಾಗಿ ಹೇಳಲಸಮರ್ಥಳಾಗಿರುವೆ. ಅವರ ಕಾಗದ ಚಿಕ್ಕದಾಗಿತ್ತು. ಸ್ಪಷ್ಟವೂ ಆಗಿತ್ತು. ತೀರ ಸ್ವಾಭಾವಿಕವಾಗಿ ಬರೆದಂತಿತ್ತು. ಅದರ ಒಕ್ಕಣಿಕೆ ನಾನೆಂದೂ ಮರೆಯು ವುದೂ ಸಾಧ್ಯವಿಲ್ಲ 'ನಿರ್ಮಲಾ, ನಿನ್ನನ್ನು ವಿವಾಹವಾಗಿ ನನ್ನ ಜೀವನದ ಸಂಗಾತಿ ಯನ್ನಾಗಿ ಮಾಡಿಕೊಳ್ಳಬೇಕೆಂದು ಯೋಚಿಸಿರುವೆ. ಈ ವಿಚಾರಕ್ಕೆ ನಿನ್ನ ಹಾಗೂ ನಿನ್ನ ಹಿರಿಯರ ಒಪ್ಪಿಗೆ ಇದ್ದುದಾದರೆ ಆ ಪ್ರಕಾರ ತಿಳಿಸುವೆಯಾ ? ಆನಂದರಾಯ.'

"ನನಗದೆಷ್ಟೋ ವೇಳೆ ಪತ್ರದ ವಿಷಯದಲ್ಲಿ ನಂಬಿಕೆಯಾಗಲಿಲ್ಲ. ತಾಯಿ ಗಾದರೋ ಈ ಕಾಗದದ ವಿಷಯ ಕೇಳಿ ತುಂಬ ಹರುಷವಾಯಿತು. ಅದೇಕೆ ಆಗ ಬೇಡ. ಮುಚ್ಚುಮರೆ ಏಕೆ, ಶ್ರೀಧರರಾಯರೆ, ನನಗೂ ಈ ವಿಷಯ ತುಂಬಾ ಸಂತೋಷದಾಯಕವಾಗಿತ್ತು. ಮರುದಿನವೇ ಆನಂದರಾಯರಿಗೆ ಊರಿಗೆ ಬರಲು ಕಾಗದ ಬರೆದೆ. ಕಾಲೇಜಿಗೆ ಬೇಸಗೆ ರಜ ಆಗಲೇ ಪ್ರಾರಂಭವಾಗಿತ್ತು.

"ನನ್ನ ಕಾಗದಕ್ಕನುಸಾರವಾಗಿ ಆನಂದರಾಯರು ತಮ್ಮ ಸಾಮಾನು ಸಹಿತ ನಮ್ಮೂರಿಗೆ ಬಂದೇಬಿಟ್ಟರು. ಅವರನ್ನು ಕರೆತರಲು ನಾನೇ ರೇಲ್ವೆ ನಿಲ್ದಾಣಕ್ಕೆ ಹೋಗಿದ್ದೆ. ಅವರೊಡನೆ ವ್ಯವಹರಿಸುವಾಗ ನನಗೆಷ್ಟೂ ಸಂಕೋಚವೆನಿಸದ್ದು ನನಗೇ ಅಚ್ಚರಿಯ ವಿಷಯವಾಗಿತ್ತು, ಆನಂದರಾಯರು ಮನೆಗೆ ಬಂದಾಗಿನಿಂದ ಮನೆಯ ವಾತಾವರಣವೇ ಬದಲಾದಂತೆ ಭಾಸವಾಗತೊಡಗಿತು. ನನಗಂತೂ ಎಲ್ಲಿಲ್ಲದ ಉತ್ಸಾಹ ಬಂದಂತಾಗಿತ್ತು. ಆದಿನ ಊಟಕ್ಕೆ ಕುಳಿತಾಗ 'ಆನಂದರಾಯರೆ, ನಿಮಗೆ ಹಿರಿಯರು ಯಾರಿದ್ದಾರೆ ?' ಎಂದು ಅಮ್ಮ ಪ್ರಶ್ನೆ ಮಾಡಿದಳು. ಅವರು ತುಸು ಹೊತ್ತು ಮೌನವಾಗಿದ್ದು ಬಳಿಕ ನುಡಿದರು. 'ನನ್ನ ಜೀವನಕ್ಕೆ ಸರಿಯಾದ ಮಾರ್ಗದರ್ಶನ ಮಾಡಬಲ್ಲ ಹಿರಿಯರೆಂಬುವವರು ನನಗಾರೂ ಉಳಿದಿಲ್ಲ. ಈ ಜಗತ್ತಿನಲ್ಲಿ ನಾನು ಏಕಾಕಿ' ತಾಯಿಗೆ ಈ ವಾಕ್ಯ ಎಷ್ಟರಮಟ್ಟಿಗೆ ಅರ್ಥವಾಯಿತೋ ದೇವರೇ ಬಲ್ಲ. ನನಗೆ ಮಾತ್ರ ಅವರ ಉತ್ತರ ಸ್ವಲ್ಪ ವಿಚಿತ್ರವಾಗಿ ಕಂಡಿತು.

"ನೆರೆಮನೆಯ ಭಟ್ಟಾಚಾರ್ಯರನ್ನು ಕರೆದು ವಿವಾಹದ ಬಗ್ಗೆ ಎಲ್ಲ ವಿಷಯ

ಕೂಲಂಕಷವಾಗಿ ವಿಚಾರಿಸಿಯಾಯಿತು. ಎಂಟು ದಿನಗಳನಂತರ ವಿವಾಹ ಮುಹೂರ್ತವನ್ನು ನಿಷ್ಕರ್ಷಿಸಿದರು. ವಿವಾಹ ಸಮಾರಂಭವು ಸಂಪೂರ್ಣವಾಗಿ ಆಡಂಬರ ರಹಿತವಾಗಿರತಕ್ಕದ್ದೆಂದು ಆನಂದರಾಯರು ಕಟ್ಟಪ್ಪಣೆಯನ್ನೇ ಮಾಡಿದ್ದರು. ಆದ್ದರಿಂದ ವಿವಾಹಕ್ಕಾಗಿ ವಿಶೇಷ ಸಿದ್ಧತೆಯನ್ನೂ ಮಾಡುವಂತಿರಲಿಲ್ಲ. ಪ್ರತಿದಿವಸ ಆನಂದರಾಯರೊಡನೆ ನದಿಯಕಡೆಗೆ ತಿರುಗಾಡಲಿಕ್ಕೆ ಹೋಗುತ್ತಿದ್ದೆ. ಅದೆಷ್ಟೋ ವಿಷಯ ಚರ್ಚೆ ಸಾಗುತ್ತಿದ್ದಿತು. ೩-೪ ದಿನಗಳ ಅವಧಿಯಲ್ಲಿಯೇ ಆನಂದರಾಯರ ಸಹವಾಸ ನನ್ನನ್ನೂ ಒಳ್ಳೆಯ 'ತತ್ವಜಿಜ್ಞಾಸು' ವನ್ನಾಗಿ ಮಾರ್ಪಡಿಸಿತು. ಅವರ ಎಲ್ಲ ಗ್ರಂಥಭಾಂಡಾಗಾರವೂ ಈಗ ಮನೆಯಲ್ಲಿಯೇ ಇದ್ದಿತು. ಆಗಾಗ್ಗೆ ಮನೆಯಲ್ಲಿಯೂ ಗ್ರಂಥಗಳನ್ನು ಓದಲು ಹೇಳುತ್ತಿದ್ದರು. ಓದಿಯಾದ ಬಳಿಕ ಅದರ ಬಗ್ಗೆ ಕೂಲಂಕಷವಾಗಿ ಚರ್ಚೆಯೂ ಸಾಗುತ್ತಿತ್ತು. ಅವರಿಗೆ ದಿನಚರಿ ಬರೆಯುವ ಅಭ್ಯಾಸವಿದ್ದಿತು. ಪ್ರತಿದಿನವೂ ರಾತ್ರಿ ನಿದ್ರೆ ಹೋಗುವ ಮೊದಲು ಅವರು ದಿನಚರಿ ಬರೆಯಲು ತಪ್ಪಿಸುತ್ತಿರಲಿಲ್ಲ.

"ವಿವಾಹದ ದಿನವೂ ಬಂದಿತು. ಆದಿನ ಭಟ್ಟಾಚಾರ್ಯರೂ ಸ್ವಲ್ಪ ನೆರೆಹೊರೆಯವರೂ ಮಾತ್ರ ಆಮಂತ್ರಿತರಾಗಿ ಬಂದಿದ್ದರು. ಭಟ್ಟಚಾರ್ಯರೇ ಎಲ್ಲ ವಿವಾಹ ವಿಧಿಯನ್ನು ಸಾಂಗವಾಗಿ ನೆರವೇರಿಸಿದರು. ಓಲಗವಿಲ್ಲ, ಜನಗಳ ಓಡಾಟವಿಲ್ಲ—ಯಾವದೇ ತರದ ಗಡಿಬಿಡಿಯ ವಾತಾವರಣವಿರಲಿಲ್ಲ. ಎಲ್ಲ ವಿಧಿಯೂ ಪ್ರಶಾಂತವೂ ಗಂಭೀರವೂ ಆದ ವಾತಾವರಣದಲ್ಲಿಯೇ ಸಾಂಗವಾಯಿತು. ಆಮಂತ್ರಿತ ನೆರೆಹೊರೆಯವರು ಅಲ್ಪೋಪಹಾರ ಸ್ವೀಕರಿಸಿ, ವಧೂವರರಿಗೆ ಆಶೀರ್ವದಿಸಿ ಹೊರಟು ಹೋದರು.

"ಶ್ರೀಧರರಾಯರೆ, ನಾನು ಯಾವ ವಿಷಯವನ್ನೂ ಈಗ ನಿಮ್ಮಿಂದ ಬಚ್ಚಿಡಲು ಅಸಮರ್ಥಳಾಗಿರುವೆ. ಮಾನ—ಮರ್ಯಾದೆ, ದಾಕ್ಷಿಣ್ಯ—ಲಜ್ಜೆ ಎಲ್ಲವನ್ನೂ ಬದಿಗಿಟ್ಟು ನನ್ನ ಮನಸ್ಸಿನೊಳಗಿರುವುದೆಲ್ಲವನ್ನೂ ಸ್ಪಷ್ಟವಾಗಿ ಹೇಳುತ್ತಿರುವೆ. ಅದರಿಂದಲಾದರೂ ನನ್ನ ತಾಳತಪ್ಪಿದ ಮನಸ್ಸು ಸ್ತಿಮಿತಕ್ಕೆ ಬಂದೀತೆಂದು ಆಶೆ ಹಿಡಿದಿರುವೆ. ಅದಕ್ಕಾಗಿ ನೀವು ನನ್ನನ್ನು ದಯವಿಟ್ಟು ಕ್ಷಮಿಸಬೇಕು.

"ಅಂದು ನಮ್ಮ ದಾಂಪತ್ಯಜೀವನದ ಮೊದಲುರಾತ್ರಿ. ಕೋಣೆಯನ್ನು ನಾನೇ ಸ್ವಲ್ಪಮಟ್ಟಿಗೆ ಶೃಂಗಾರಗೊಳಿಸಲು ಪ್ರಯತ್ನಪಟ್ಟಿದ್ದೆ. ಊಟವಾದಬಳಿಕ ಆನಂದರಾಯರು ಕೋಣೆಯಲ್ಲಿ ಹೋಗಿ ತಮ್ಮ ಗ್ರಂಥಾವಲೋಕನದಲ್ಲಿ ತೊಡಗಿದರೆಂದು ನನಗೆ ಅನಿಸಿತು. ಆ ಬಳಿಕ ತಾಯಿ ಕೊಟ್ಟ ಹಾಲಿನ ಲೋಟ ತೆಗೆದುಕೊಂಡು ಅವರ ಕೋಣೆಯ ಕಡೆಗೆ ಸಾಗಿದಾಗ, ಒಂದು ಕ್ಷಣ ನನ್ನ ಶರೀರವೆಲ್ಲ ಕಂಪಿಸಿತು.

ಮೋರೆಯ ಮೇಲೆಲ್ಲ ಬೆವರುಹನಿ ಸಾಲುಗಟ್ಟಿದವು. ಬಾಯಿಯೊಣಗಿದಂತಾಯ್ತು. ಅಂತೂ ಧೈರ್ಯಮಾಡಿ ಕೋಣೆಯೊಳಕ್ಕೆ ಹೋದೆ. ಆನಂದರಾಯರು ತಮ್ಮ ದಿನಚರಿ ಬರೆಯುವದರಲ್ಲಿ ಮಗ್ನರಾಗಿದ್ದರು. ನಾನು ಒಳಕ್ಕೆ ಬಂದುದನ್ನು ನೋಡಿ ಅವರು ತಮ್ಮ ಬರೆವಣಿಗೆ ನಿಲ್ಲಿಸಿ, ನನ್ನಕಡೆ ಒಂದುಸಲ ನೋಡಿ ನಸುನಕ್ಕರು. ನಾನು ಇನ್ನೂ ಹಾಗೆಯೇ ನಿಂತುದನ್ನು ಕಂಡು ಅವರು ತಮ್ಮ ಆಸನ ಬಿಟ್ಟೆದ್ದು, ನನ್ನ ಕೈಯೊಳಗಿಂದ ಹಾಲಿನ ಲೋಟ ಇಸಿದುಕೊಂಡು ಮೇಜಿನಮೇಲಿಟ್ಟು, ನನ್ನ ಕೈಹಿಡಿದೊಯ್ದು ಓರಣವಾಗಿ ಬಿಡಿಸಿದ ಮಂಚದಮೇಲಿನ ಹಾಸಿಗೆಯ ಮೇಲೆ ಕುಳ್ಳಿರಿಸಿ, ಕೋಣೆಯಬಾಗಿಲು ಭದ್ರವಾಗಿ ಬಂದುಮಾಡಿ ಪುನಃ ತಮ್ಮ ಆಸನದಲ್ಲಿ ಕುಳಿತುಕೊಂಡರು. ನನಗವರ ಕಡೆಗೆ ನೋಡುವ ಧೈರ್ಯವಾಗಲಿಲ್ಲ. ನನ್ನ ಶ್ವಾಸೋಚ್ಛ್ವಾಸದ ವೇಗ ಹೆಚ್ಚಾಗಿ ಮುಖ ಇನ್ನಿಷ್ಟು ಬೆವರತೊಡಗಿತು. ನನ್ನ ಅವಸ್ಥೆ ಕಂಡು ಅವರಿಗೆ ಕರುಣೆ ಬಂದಿರಬೇಕು. ನನ್ನ ಹತ್ತಿರ ಬಂದು ಕುಳಿತು ಕೊಂಡು ತಮ್ಮ ಉಪ್ಪರಣೆಯಿಂದ ನನ್ನ ಮುಖವನ್ನು ಒರಿಸಿ ಮೃದುವಾಗಿ ಮಾತನಾಡಿಸಿದರು.

'ನಿರ್ಮಲಾ, ಏತಕ್ಕಾಗಿ ಇಷ್ಟು ಸಂಕೋಚ ? ಯಾರಿಗಾಗಿ ಇಷ್ಟು ಹೆದರಿಕೆ ?'

" ನಾನೇನೋ • ಉತ್ತರ ಕೊಡಬೇಕೆಂದಿದ್ದೆ. ಆದರೆ ಮಾತೇ ಹೊರಬರಲಿಲ್ಲ. ಸುಮ್ಮನೆ ಅವರ ಮುಖದಕಡೆಗೆ ಒಮ್ಮೆ ನೋಡಿದೆ. ಅವರ ಪ್ರಶಾಂತವೂ ಗಂಭೀರವೂ ಆದ ಮುಖಮುದ್ರೆಯಲ್ಲಿ ಎಳ್ಳಷ್ಟೂ ಬದಲಾವಣೆಯಾಗಿರಲಿಲ್ಲ. ನನ್ನ ಹೃದಯದ ಅನಾವಶ್ಯಕ ಬಡಿತವೂ ಕಡಿಮೆಯಾಗಿ, ಸ್ವಲ್ಪ ಹಾಯಾಗಿ ಉಸುರಾಡಿಸತೊಡಗಿದೆ. ಆನಂದರಾಯರು ಪುನಃ ತಮ್ಮ ಆಸನದಲ್ಲಿ ಕುಳಿತು, ತಮ್ಮ ಡಾಯರಿಯೊಳಗಿನ ಹಿಂದಿನ ಪಾನುಗಳನ್ನು ನೋಡುವದರಲ್ಲಿ ಮಗ್ನರಾದರು. ಕೆಲವುವೇಳೆ ಅವರು ಮೇಲೆ ಮುಖಮಾಡಿ ಏನೋ ದೀರ್ಘವಾಗಿ ಆಲೋಚಿಸುತ್ತಿದ್ದರು. ನಾನು ಮೌನವಾಗಿ ಅವರ ಕಾರ್ಯಗಳನ್ನವಲೋಕಿಸುತ್ತ ಕುಳಿತುಬಿಟ್ಟಿದ್ದೆ.

" ಗೋಡೆಯಮೇಲಿನ ಗಡಿಯಾರ ಥಣ್ . . . ಥಣ್ . . . ಎಂದು ಹನ್ನೆರಡು ಬಾರಿಸಿದಾಗ ಆನಂದರಾಯರು ತಮ್ಮ ಸ್ವಪ್ನಲೋಕವನ್ನು ತ್ಯಜಿಸಿ ಇಹಲೋಕದ ಸಂಗತಿಗಳ ಕಡೆಗೆ ಲಕ್ಷ್ಯತಿರುಗಿಸಿದರು. ಮೊಟ್ಟಮೊದಲು ಅವರ ಲಕ್ಷ್ಯಕ್ಕೆ ಬಂದವಳು ನಾನು. ನನ್ನ ಕಡೆಗೆ ನೋಡಿ, ಮಂದಸ್ಮಿತ ಬೀರಿ, ಅವರು ನನ್ನೆಡೆ ಬಂದರು. ಅವರ ಸ್ಪರ್ಶದಿಂದ ನನ್ನ ಶರೀರದಲ್ಲಿ ಪುನಃ ಒಮ್ಮೆ ವಿದ್ಯುತ್ ಸಂಚಾರವಾದಂತಾ ಯಿತು. ನಿದಾನವಾಗಿ ನನ್ನ ಬಟ್ಟೆ ಎಲ್ಲ ಕಳಚತೊಡಗಿದರು. ನಾನಾಗ ಏನೂ ಮಾಡಲೂ ಅಸಮರ್ಥಳಾಗಿದ್ದೆ. ಏಕೋ ಶರೀರಮಾತ್ರ ಕಂಪಿಸುತ್ತಿತ್ತು.

"ಸ್ವಲ್ಪ ಸಮಯದಲ್ಲಿಯೇ ನಾನು ಸಂಪೂರ್ಣ ನಗ್ನಗೊಳಿಸಲ್ಪಟ್ಟೆ. ಭವಿಷ್ಯತ್ತಿನ ಸುಖಸಂವೇದನೆಯನ್ನು ನೆನೆಸಿ ನನಗೆ ದೇಹಭಾವ ತಪ್ಪಿದಂತಾಗಿತ್ತು. ಹೀಗೆಯೇ ತುಸುವೇಳೆ ಕಳೆದಿರಬೇಕು. ನಗ್ನಶರೀರದ ಮೇಲೆ ಬಿಸಿಬಿಸಿಯಾದ ನೀರುಹನಿಗಳ ಸ್ಪರ್ಶದಿಂದ ಬೆಚ್ಚಿಬಿದ್ದು ಆನಂದರಾಯರ ಮುಖದ ಕಡೆಗೆ ನೋಡಿದೆ. ಅವರ ಕಣ್ಣು ಅಶ್ರುಪೂರ್ಣವಾಗಿದ್ದುವು. ನನಗೆ ತಿಳಿಯದೆಯೇ ನನ್ನ ಕಣ್ಣೂ ತುಂಬಿಬಂದವು.

"ಆನಂದರಾಯರು ನನ್ನನ್ನು ಹಾಗೇಯೇ ಮಂಚದಮೇಲೆ ಕುಳ್ಳಿರಲು ಬಿಟ್ಟು ತಾವು ರೂಮಿನಲ್ಲಿ ಎಡೆಯಾಡತೊಡಗಿದರು. ತುಸ ಸಮಯದನಂತರ ಯಾವದೋ ನಿರ್ಧಾರಕ್ಕೆ ಬಂದವರಂತೆ ನನ್ನ ಕಡೆಗೆ ತಿರುಗಿ, ತಾವೇ ಬಿಚ್ಚಿಹಾಕಿದ ವಸ್ತ್ರಗಳನ್ನು ಪುನಃ ತೊಟ್ಟುಕೊಳ್ಳುವಂತೆ ನನಗೆ ಬಿನ್ನವಿಸಿ, ತಮ್ಮ ಎಡೆಯಾಟ ಮುಂದುವರಿಸಿದರು.

"ನನಗೆ ನಾಚಿಕೆ, ಭಯ, ಲಜ್ಜೆ ಎಲ್ಲ ಮಾಯವಾಗಿ ಸಿಟ್ಟುಬಂದಿತು. ನೇರವಾಗಿ ಅವರಿಗೆ ಕೇಳಿಬಿಟ್ಟೆ. 'ಆನಂದರಾಯರೆ, ನಿಮ್ಮ ಈ ವಿಚಿತ್ರವರ್ತನೆ ನನಗೆ ಅರ್ಥವಾಗುವದಿಲ್ಲ.' ಆನಂದರಾಯರಿಗೆ ನನ್ನ ಪ್ರಶ್ನೆಯಕಡೆಗೆ ವಿಶೇಷ ಲಕ್ಷ್ಯವಿದ್ದಂತೆ ಕಂಡುಬರಲಿಲ್ಲ. '. . . ಕೊನೆಗೂ . . . ನಾನು ವಿಜಯಿಯಾದೆ . . .' ಅವರು ತಮ್ಮಷ್ಟಕ್ಕೇ ಸ್ವಲ್ಪ ಗಟ್ಟಿಯಾಗಿ ಅಂದುಕೊಂಡದ್ದು ನನಗೂ ಕೇಳಿಬಂದಿತು. ನನಗೆ ಅವಮಾನವಾದಂತಾಗಿ, ದುಃಖ-ಸಂತಾಪ ಈ ಎರಡೂ ಭಾವನೆಗಳ ಹಿಡಿತಕ್ಕೆ ಸಿಕ್ಕಿಬಿದ್ದು ನನಗೆ ಏನುಮಾಡಲೂ ತಿಳಿಯದಂತಾಯಿತು. ಸ್ವಲ್ಪ ಸಮಯದ ನಂತರ ನನ್ನನ್ನೇ ನಾನು ಸವರಿಸಿಕೊಂಡು ಪುನಃ ನನ್ನ ಮೊದಲಿನ ಪ್ರಶ್ನೆಯನ್ನು ಆನಂದರಾಯರಿಗೆ ಕೇಳಿದೆ.

'ನಿರ್ಮಲಾ, ನಾನು ಮಹಾಸ್ವಾರ್ಥಿ' ತಮ್ಮ ಆಸನದ ಮೇಲೆ ಕುಳಿತು ಆನಂದರಾಯರು ಉತ್ತರಿಸತೊಡಗಿದರು. 'ಕುಟುಂಬ, ಸಮಾಜ, ರಾಷ್ಟ್ರ—ಅದೇಕೆ ಈ ಜಗತ್ತಿನ ವಿಷಯವಾಗಿ ನನಗೇನಾದರೂ ಕರ್ತವ್ಯವಿದೆ ಅಥವಾ ಹೊಣೆಗಾರಿಕೆ ಇದೆ ಎಂದು ನಾನೆಂದೂ ಒಪ್ಪಿಲ್ಲ, ಇನ್ನು ಮುಂದೆಯೂ ಒಪ್ಪುವದಿಲ್ಲ. ವೈಯಕ್ತಿಕ ಮುಕ್ತಿ ನನ್ನ ಜೀವನದ ಧ್ಯೇಯವಾಗಿದೆ. ಅದಕ್ಕಾಗಿ ಆತ್ಮಜ್ಞಾನ ಅಗತ್ಯ. ಆ ಆತ್ಮಜ್ಞಾನ ಪಡೆಯುವದಕ್ಕಾಗಿ ನನ್ನ ಶರೀರ, ಈ ಜಗತ್ತು ಇವೆಲ್ಲ ಸಾಧನಗಳು, ಅಷ್ಟೇ. ಅದೇ ದೃಷ್ಟಿಯಿಂದ ನಾನು ಜಗತ್ತಿನ ವಿವಿಧ ಅನುಭವಗಳನ್ನು ಪಡೆದು, ಅವುಗಳ ಅನಿತ್ಯತ್ವದ ಬಗ್ಗೆ ಖಂಡಿತಗೊಳಿಸಿಕೊಂಡು ಅವೆಲ್ಲವುಗಳನ್ನು ಜಯಿಸುತ್ತ ಬಂದಿರುವೆ. ಈಗಾಗಲೇ ನಾನು ಸನ್ಯಾಸವನ್ನು ಸ್ವೀಕರಿಸಿ ಜಗತ್ತಿನ ಹಂಗು ತೊರೆಯಬಹುದಾಗಿತ್ತು. ಆದರೆ ಅನೇಕವೇಳೆ ಹೆಣ್ಣಿನ ಮೋಹಕ ಆಕರ್ಷಣೆ,

ಕಾಮದಾಸೆಗಳ ವಿಚಾರದಿಂದ ಚಿತ್ತ ವಿಚಲಿತವಾಗುತ್ತಿತ್ತು. ಜೀವನದಲ್ಲಿಯ ಅದೊಂದು ಅನುಭವವನ್ನು ಗೆಲ್ಲದೆ ಸನ್ಯಾಸವನ್ನು ಸ್ವೀಕರಿಸಲು ಧೈರ್ಯವಾಗಲಿಲ್ಲ. ಅದಕ್ಕಾಗಿ ನಿನ್ನನ್ನು ವಿವಾಹವಾದೆ. ಕಾಮವನ್ನೂ ಜಯಿಸಬಲ್ಲೆ ಎಂದು ನಿಶ್ಚಯ ಮಾಡಿಕೊಂಡೆ. ಇದಕ್ಕೆ ಅನುವು ಕಲ್ಪಿಸಿಕೊಟ್ಟದ್ದಕ್ಕಾಗಿ ನಿನಗೆ ತುಂಬ ಋಣಿ ಯಾಗಿರುವೆ. ಇನ್ನುಮೇಲೆ ನನಗೆ ಸನ್ಯಾಸವನ್ನು ಸ್ವೀಕರಿಸಲು ಯಾವ ಅಡ್ಡಿ ಆತಂಕಗಳೂ ಉಳಿದಂತಾಗಲಿಲ್ಲ. ಚಿತ್ತಚಂಚಲತೆಗೂ ಇನ್ನುಮೇಲೆ ಯಾವದೇ ತರದ ಅವಕಾಶಕ್ಕಾಸ್ಪದವಿಲ್ಲ.

"ನನ್ನ ಕೋಪ ಮಾಯವಾಗತೊಡಗಿ, ದುಃಖದ ಆವೇಗಮಾತ್ರ ತಡೆಯ ಲಸಾಧ್ಯವಾಗಿ ತೀವ್ರತರವಾಗತೊಡಗಿತು. ಒಳ್ಳೆಯ ಪ್ರಯಾಸದಿಂದ ದುಃಖವನ್ನು ಹತ್ತಿಕ್ಕಿದೆ. 'ಆನಂದರಾಯರೆ, ನನ್ನ ಬಗ್ಗೆ ನಿಮಗೆ ಏನೂ ಕರುಣೆ ಬರುವದಿಲ್ಲವೇ? ಇಂದಿನ ಸಮಾಜಸ್ಥಿತಿಯಲ್ಲಿ ನಿಮ್ಮೀ ವರ್ತನೆಯು ನನ್ನ ಜೀವನವನ್ನು ಹಾಳು ಮಾಡಿದಂತೆಯೇ ಆಗಲಿಲ್ಲವೇ? ಇನ್ನು ನಾನೇನು ಮಾಡಬೇಕು?"

"ಆನಂದರಾಯರು ಸ್ವಲ್ಪವೂ ಅಧೀರರಾಗಲಿಲ್ಲ. 'ನಿರ್ಮಲಾ, ನಾನು ಮೊದಲೇ ಹೇಳಲಿಲ್ಲವೇ. ನಾನು ಮಹಾ ಸ್ವಾರ್ಥಿ ಎಂತ. ಸ್ತ್ರೀಯು ದುರ್ಬಲಳೆಂದು ನಾನೆಂದೂ ಭಾವಿಸಿಲ್ಲ. ನಾನೆಷ್ಟು ಸ್ವತಂತ್ರನೋ ಅಷ್ಟೇ ನೀನೂ ಸ್ವತಂತ್ರಳಿರುವಿ. ನಿನಗೂ ವಿಚಾರಶಕ್ತಿ ಇದೆ. ಇಂದಿನ ಸಮಾಜಸ್ಥಿತಿ ಸರಿಯಾಗಿಲ್ಲದಿದ್ದರೆ ಅದಕ್ಕೆ ನಾನೇನೂ ಹೊಣೆಗಾರನಲ್ಲ. ನೀನು ನಿನ್ನ ಜೀವನ ಹಾಳಾದಂತೆ' ಎಂದು ಭಾವಿಸಿಕೊಂಡರೆ ಅದಕ್ಕೂ ನಾನು ಹೊಣೆಗಾರನಲ್ಲ. ನನ್ನ ಜೀವನದ ಗೊತ್ತುಗುರಿಗಳನ್ನಂತೂ ನಾನು ನಿರ್ಧರಿಸಿಬಿಟ್ಟಿರುವೆ. ಅದರಲ್ಲಿ ವ್ಯತ್ಯಾಸಮಾಡುವದು ಸಾಧ್ಯವಿಲ್ಲ."

'ಕೊನೆಯದಾಗಿ, ಆನಂದರಾಯರೆ ಇನ್ನೊಂದು ಮಾತು ಕೇಳುವೆ. ಆತ್ಮ ಜ್ಞಾನಕ್ಕೆ ಬಲ್ಲವರು ಸನ್ಯಾಸಕ್ಕಿಂತಲೂ ನಿಷ್ಕಾಮಕರ್ಮ ಮಾರ್ಗವು ಉತ್ತಮ ವಾದುದೆಂದು ಹೇಳಿದ್ದುಂಟು. ನೀವು ಈ ಎರಡನೆಯ ಮಾರ್ಗವನ್ನನುಸರಿಸುವು ದಾದರೆ, ನೀವಂತೂ ಆತ್ಮಜ್ಞಾನವನ್ನು ಹೊಂದುವಿರಿ, ಅದರಲ್ಲೇನೂ ಸಂದೇಹವಿಲ್ಲ. ಜೊತೆಗೆ ನಿಮ್ಮ ಸಹವಾಸದಿಂದ ಇನ್ನೊಂದು ಸ್ತ್ರೀಜೀವಕ್ಕೂ ಆತ್ಮಜ್ಞಾನ ಲಾಭ ಹೊಂದುವ ಅವಕಾಶ ಕಲ್ಪಿಸಿಕೊಡಬಹುದಲ್ಲ! ಸನ್ಯಾಸದಲ್ಲಿಯೇ ಏಕಿಷ್ಟು ನಿಮ್ಮ ಶ್ರದ್ಧೆ?'

"ಆ ಮಾರ್ಗದ ಬಗ್ಗೆ ನಾನು ಈ ಮೊದಲೇ ವಿಚಾರಮಾಡಿರುವೆ. ಆದರೆ ನಿರ್ಮಲಾ, ನನಗದರಲ್ಲಿ ವಿಶ್ವಾಸ ಉಳಿದಿಲ್ಲ. ತಪಸ್ವೀ ಜೀವನದ ಕಠೋರತೆಗೆ ಹೆದರುವ ದುರ್ಬಲ ಮನಸ್ಸಿನ ಹಂಚಿಕೆಯದು ಎಂದು ನನಗೇಕೋ ಖಂಡಿತವಾಗಿದೆ."

"ನಾನು ನಿರುತ್ತರಳಾದೆ. ಭವಿಷ್ಯತ್ತಿನ ಜೀವನದಲ್ಲಿ ನನಗೆ ನಿರಾಶೆ ಅಂಧಕಾರ ಗಳನ್ನುಳಿದು ಇನ್ನೇನೂ ಇಲ್ಲ ಎನ್ನಿಸಿ ತುಂಬ ಕಳವಳವಾಯಿತು. ಹೃದಯ ಭಾರ ವಾಯಿತು. ಆದರೆ ಕಣ್ಣೀರು ಮಾತ್ರ ಬತ್ತಿಹೋಗಿದ್ದವು. ಅದೆಷ್ಟೋ ವೇಳೆ ವಿಚಾರಿಸಿ ಕೊನೆಗೆ ಆನಂದರಾಯರಿಗೆ ಹೇಳಿದೆ. 'ಆನಂದರಾಯರೆ, ನಿಮ್ಮ ಜೀವನಧ್ಯೇಯಕ್ಕೆ ಆತಂಕವಾಗಲು ನಾನು ಬಯಸುವದಿಲ್ಲ. ನೀವು ಸನ್ಯಾಸ ಗ್ರಹಿಸಿ ಹೊರಟುಹೋಗು ವಿರಿ, ನಿಜ. ಆದರೆ ನನಗೆ ಮಾತ್ರ ಹಾಗೆ ಮಾಡುವುದು ಒಂದುವೇಳೆ ಇಷ್ಟವಿದ್ದರೂ ಸಾಧ್ಯವಿಲ್ಲ. ನನಗಿನ್ನೂ ಸಮಾಜದಲ್ಲಿಯೇ ಇರಬೇಕಾಗಬಹುದು. ಅದಕ್ಕಾಗಿ ನನ್ನ ದೊಂದು ಮಾತು ನಡೆಯಿಸಿಕೊಡಬೇಕು. ನೀವು ಸನ್ಯಾಸಗ್ರಹಣಮಾಡುವ ವಾರ್ತೆ ದಯವಿಟ್ಟು ಊರಲ್ಲಿ ಯಾರಿಗೂ ತಿಳಿಸಕೂಡದು. ನೀವು ಈ ಊರುಬಿಟ್ಟು ಹೊರಡುವಾಗ ನಿಮ್ಮನ್ನು ಕೆಲದೂರದವರೆಗೆ ಅನುಸರಿಸಲು ನನಗೂ ಅನುಮತಿ ಕೊಡಬೇಕು."

'ನಾನು ನಾಳೆ ರಾತ್ರಿಯ ಗಾಡಿಯಿಂದ ಹೊರಡುವೆ. ನೀನೂ ಸಿದ್ಧಳಾಗು.' ಆನಂದರಾಯರ ನುಡಿ ನನಗೆ ಕರ್ಣಕಠೋರವಾಗಿದ್ದವು.

"ಮರುದಿನ ತಾಯಿಯಮುಂದೆ ಯಾವುದೋ ಮಹತ್ವದ ಕೆಲಸದ ನೆಪಹೇಳಿ ಇಬ್ಬರೂ ಊರಿಗೆ ಹೊರಡುವ ತಯಾರಿ ಮಾಡಿದೆ. ರಾತ್ರಿಯ ಗಾಡಿಯಿಂದ ಹೊರಟೂ ಆಯಿತು. ನಾವು ಕುಳಿತ ಡಬ್ಬಿಯಲ್ಲಿ ಇನ್ನಾವ ಪ್ರವಾಸಿಕರೂ ಇರಲಿಲ್ಲ. ಆನಂದ ರಾಯರು ಒಳ್ಳೆ ನಿಶ್ಚಿಂತರಾಗಿದ್ದಂತೆ ನನಗೆ ತೋರಿದರು. ಅವರು ತಮ್ಮ ಭವಿಷ್ಯ ಜೀವನದ ರೂಪರೇಷೆಗಳನ್ನೆಲ್ಲ ಆಗಲೇ ನಿರ್ಧರಿಸಿಕೊಂಡಂತಿತ್ತು. ದಾರಿಯುದ್ದಕ್ಕೂ ಅವರು ಮಾತನಾಡುವ ತೊಂದರೆ ತೆಗೆದುಕೊಳ್ಳಲು ಇಷ್ಟಪಡಲಿಲ್ಲ. ನನಗೂ ಮಾತ ನಾಡುವ ಮನಸ್ಸಾಗಲಿಲ್ಲ. 'ಎಲ್ಲಿಯವರೆಗೆ ನನ್ನ ಜೊತೆಗೆ ಬರುವಿ?' ಆನಂದ ರಾಯರು ಕೊನೆಗೊಮ್ಮೆ ಮಾತನಾಡಿದರು. ಆಗಲೇ ನಸುಕು ಹರಿಯುವದರಲ್ಲಿತ್ತು. 'ಬೆಳಗಾಗುತ್ತಲೇ ಇಳಿದುಬಿಡುವೆ' ನಾನೂ ಶಕ್ಯವಾದಷ್ಟು ಗಂಭೀರಳಾಗಲು ಯತ್ನಿಸುತ್ತಿದ್ದೆ."

'ನೀನು ಇಳಿಯುವಮುಂದೆ ಎಲ್ಲ ಸಾಮಾನುಸಹ ಇಳಿದುಬಿಡು. ನನಗೇನೂ ಬೇಕಿಲ್ಲ.'

ನಾನು ಸುಮ್ಮನೆ ಗೋಣು ಅಲ್ಲಾಡಿಸಿದೆ. ತುಸುವೇಳೆ ಮೌನವಾಗಿ ಕಳೆಯಿತು. ಇನ್ನೇನು ಬೆಳಗಾಗುವದರಲ್ಲಿತ್ತು. ನಾನೂ ಒಂದು ನಿರ್ಧಾರಕ್ಕೆ ಬಂದಿದ್ದೆ.

'ಆನಂದರಾಯರೆ, ನೀವಾಗಿಯೇ ಕಟ್ಟಿದ ಈ ಮಾಂಗಲ್ಯವನ್ನು ತೆಗೆದುಬಿಟ್ಟು, ನನ್ನ ಹಣೆಯಮೇಲಿನ ಕುಂಕುಮವನ್ನೂ ನಿಮ್ಮ ಕೈಯಿಂದಲೇ ಅಳಿಸಿಬಿಡಿ. ನಾನು

ಇಂದಿನಿಂದ ವಿಧವೆ; ಇಷ್ಟು ಮಾತಾಡಬೇಕಾದರೆ ನನ್ನ ಶಕ್ತಿಸರ್ವಸ್ವವನ್ನೆಲ್ಲ ವೆಚ್ಚ ಮಾಡಬೇಕಾಯಿತು.'

"ಆನಂದರಾಯರು ಒಂದರ್ಧ ನಿಮಿಷ ಏನೋ ಯೋಚಿಸುವಂತಿದ್ದರು. ಬಳಿಕ ಮುಖದಲ್ಲಿ ತಿಲಮಾತ್ರವೂ ಮಾರ್ಪಾಟು ತೋರ್ಪಡಿಸಿದೆ ನನ್ನ ಕೊರಳಲ್ಲಿಯ ಮಾಂಗಲ್ಯ ಬಿಚ್ಚಿಹಾಕಿ, ತಮ್ಮ ಬಲಗೈ ಹೆಬ್ಬೆರಳಿನಿಂದ ನನ್ನ ಹಣೆಯಮೇಲಿನ ಕುಂಕುಮ ತಿಲಕವನ್ನೂ ಅಳಿಸಿಬಿಟ್ಟರು. ನನ್ನ ಹೊಟ್ಟೆಯಲ್ಲಿ ಸಂಕಟವಾಯಿತು."

ಯಾವದೋ ದೊಡ್ಡ ಸ್ಟೇಶನ್ನು ಬಂದಿತು. ಬೆಳ್ಳಗೆ ಬೆಳಕೂ ಆಗಿತ್ತು. ಕೂಲಿಯೊಬ್ಬನನ್ನು ಕರೆದು ಎಲ್ಲ ಸಾಮಾನು ಇಳಿಸಿದೆ. ಆನಂದರಾಯರ ಪಾದಗಳ ಮೇಲೆ ತಲೆಯಿಟ್ಟು ನಮಸ್ಕರಿಸಿ ಹೋಗಲು ಅಪ್ಪಣೆ ಕೇಳಿದೆ. ಸ್ವಲ್ಪ ಸಮಯ ಸುಮ್ಮನಿದ್ದು ಬಳಿಕ ಅವರು ನನ್ನನ್ನುದ್ದೇಶಿಸಿ ನುಡಿದರು. 'ನಿರ್ಮಲಾ, ನನ್ನನ್ನು ಕ್ಷಮಿಸುವಿಯಷ್ಟೆ!'

ನನ್ನ ಹೃದಯ ತುಂಬಿಬಂದಿತು. ನನಗಿನ್ನು ಅವರೆದುರು ನಿಲ್ಲುವದು ಸಾಧ್ಯವಿರಲಿಲ್ಲ. ಅವರಿಗೆ ಉತ್ತರ ಕೂಡ ಹೇಳದೆ ರೇಲ್ವೆನಿಲ್ದಾಣಬಿಟ್ಟು ಹೊರಗೆ ಹೊರಟು ಹೋದೆ.

ಹತ್ತು ದಿನಗಳನಂತರ ನಾನು ತಿರುಗಿ ಊರಿಗೆ ಬಂದೆ. ಈ ಮೊದಲೇ ನಾನು ಕಳಿಸಿದ ತಾರು ತಾಯಿಯನ್ನು ದುಃಖದ ಕಡಲಿನಲ್ಲಿ ಮುಳುಗಿಸಿತ್ತು. ನನ್ನನ್ನು ಕಂಡೊಡನೆಯೇ ಅವಳು ನನ್ನನ್ನು ತಬ್ಬಿಕೊಂಡು ಇಡಿಯ ದಿನವೆಲ್ಲ ರೋದಿಸಿದಳು. ನೆರೆಹೊರೆಯವರೂ ಬಂದು ಸಮಾಧಾನಮಾಡಲೆತ್ನಿಸಿದರು. 'ಗಾಡಿಯ ಅಪಘಾತ ಯಾರ ಕೈಯಲ್ಲಿಯದು? ಎಲ್ಲ ಆ ಭಗವಂತನ ಲೀಲೆ!' ಕೆಲವರು ಅಮ್ಮನನ್ನು ಸಾಂತ್ವನಗೊಳಿಸಲೆತ್ನಿಸುತ್ತಿದ್ದರು. ನಾನು ಯಾರೊಡನೆಯೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ.

"ಶ್ರೀಧರರಾಯರೆ, ಅನೇಕವೇಳೆ ಆತ್ಮಹತ್ಯೆಯ ವಿಚಾರವೂ ನನ್ನ ಮನಸ್ಸಿನಲ್ಲಿ ಸುಳಿದುಹೋಯಿತು. ಆದರೆ ನನ್ನನ್ನು ನಾನೇ ಸಮಾಧಾನಮಾಡಿಕೊಂಡೆ. ಹುಟ್ಟಿದವರಿಗೆಲ್ಲ ಮರಣವೇನೂ ತಪ್ಪಿದುದಲ್ಲ. ಅದಕ್ಕಾಗಿ ನಾನೇಕೆ ವೃಥಾ ಪ್ರಯತ್ನ ಪಡಬೇಕು. ಇದ್ದಷ್ಟು ದಿನ ಕೈಲಾದಷ್ಟುಮಟ್ಟಿಗೆ ಪರೋಪಕಾರವನ್ನಾದರೂ ಮಾಡೋಣ ಎಂದುಕೊಂಡು ಶಾಲೆಯಲ್ಲಿ ಶಿಕ್ಷಕಳ ವೃತ್ತಿ ಕೈಕೊಂಡೆ. ಇಪ್ಪತ್ತು ವರುಷಗಳ ಕೆಳಗೆ ನೀವಿಲ್ಲಿ ಬಂದು ನನಗೆ ಹೊಸದೊಂದು ಜಗತ್ತಿನ ಪರಿಚಯವನ್ನೇ ಮಾಡಿಕೊಟ್ಟಿರಿ. ಅದಕ್ಕಾಗಿ ನಾನು ನಿಮ್ಮ ಉಪಕಾರವನ್ನೆಂದೂ ಮರೆಯಲಾರೆ. ಅಂದಿನಿಂದ ಇಲ್ಲಿಯವರೆಗೂ ನನ್ನ ಮನಸ್ಸಿನ ಸ್ತಿಮಿತವನ್ನು ಕಾಪಾಡಿಕೊಂಡು

ಬಂದಿದ್ದೆ. ಜೀವನದಲ್ಲಿಯೂ ಏನೋ ಒಂದು ತರಹದ ಆಸ್ಥೆಯನ್ನೂ ನಿರ್ಮಿಸಿ ಕೊಂಡಿದ್ದೆ. ಆದರೆ . . . ಆದರೆ . . .''

ನಿರ್ಮಲಾಬಾಯಿ ಎದುರಿನ ಮೇಜಿನ ಮೇಲಿದ್ದ ಹೊಸ ಡಾಯರಿಯಲ್ಲಿಯ ಬರೆದ ಪಾನುಗಳಲ್ಲಿಯ ಕೊನೆಯದನ್ನು ತೆರೆದು ನನ್ನ ಕೈಲಿತ್ತರು. ನಾನು ಓದತೊಡಗಿದೆ.

. . . ಇಳಿಹೊತ್ತಿನ ಸಮಯ. ನಿರ್ಮಲೆಯನ್ನು ಕಂಡೆ. ಅವಳು ನನ್ನನ್ನು ಗುರುತಿಸಿದಳು. ನಾನೂ ಗುರುತಿಸಿದೆ. ಆದರೆ ಅದನ್ನು ಹೊರಗೆ ತೋರ್ಪಡಿಸುವದರಿಂದ ಅವಳ ಮನಸ್ಸಿನ ಸ್ತಿಮಿತವನ್ನು ನಾಶಗೊಳಿಸುವದಲ್ಲದೆ ಬೇರೆ ಏನೂ ಪ್ರಯೋಜನವಾಗುವಂತೆ ಕಂಡುಬರದ್ದರಿಂದ ಗುರುತಿಸದಂತೆ ನಟಿಸಿದೆ. ಅವಳ ತಪಸ್ವೀ ಜೀವನ ನನ್ನ ಸನ್ಯಾಸಕ್ಕೆ ಯಾವ ದೃಷ್ಟಿಯಿಂದಲೂ ಕಡಿಮೆ ತರಗತಿಯದಾಗಿಲ್ಲ. ಈ ಇಪ್ಪತ್ತೈದು ವರುಷದ ಸನ್ಯಾಸೀ ಜೀವನದ ಅನುಭವದಿಂದ ನಾನೇನೂ ಹೊಸ ಜ್ಞಾನ ಸಂಪಾದಿಸಲಿಲ್ಲ. ಏನೋ ಒಂದು ರೀತಿ ಕಾಲಹರಣ ಮಾತ್ರ ಮಾಡಿದೆ. ನಿರ್ಮಲೆಯೊಡನೆ ಬಾಳುವೆ ಮಾಡಿದ್ದರೂ ಆಗಬಹುದಾಗಿತ್ತು—ಇಬ್ಬರಿಗೂ ಮನಃಶಾಂತಿ, ಸಮಾಧಾನಗಳಾದರೂ ಲಭಿಸುತ್ತಿದ್ದವು . . . ಆದರೆ ಈಗ ಕಾಲ ಮೀರಿಹೋಯಿತು. ಈ ಊರಲ್ಲಿ ಹೆಚ್ಚು ಕಾಲ ನಿಂತರೆ ನನ್ನ ಮನಸ್ಸಿನ ಸ್ತಿಮಿತವೂ ಕದಡಬಹುದು. ಈ ಕ್ಷಣಕ್ಕೇ ಈ ಸ್ಥಳ ಬಿಟ್ಟು ಹೊರಡುವದೇ ಯೋಗ್ಯ . . .

ನಿರ್ಮಲಾಬಾಯಿಯ ಕಡೆಗೆ ನೋಡಿದಾಗ ಅವರು ತಮ್ಮ ಸೀರೆಯ ಸೆರಗಿನಿಂದ ಮುಖವನ್ನು ಗಟ್ಟಿಯಾಗಿ ಮುಚ್ಚಿಕೊಂಡು ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತಿದ್ದರು.

'ಮುಗಿದುದು'

—ಪ್ರೊ. ಜ. ಅ. ಅಷ್ಟಪುತ್ರೆ

ಚಿತ್ರಗಾರ ಪಂಪ

ಕನ್ನಡ ನುಡಿಯ ಇತಿಹಾಸದಲ್ಲಿ ಆದಿಪಂಪನ ಹೆಸರು ಚಿನ್ನದ ಹೆಸರು. ಈತನು ಜೀವಿಸಿ, ತನ್ನ ಲೋಕೋನ್ನತ ಕಾವ್ಯಾಮೃತಧಾರೆಯನ್ನೆರೆದು ಒಂದುಸಾವಿರ ವರ್ಷಗಳು ಗತಿಸಿದ್ದರೂ ಇಂದಿಗೂ ಆತನ ಕಾವ್ಯಗಳು ಮಸುಳದೆ, ಎಣೆಯಿಲ್ಲದ, ಕೊನೆಯಿಲ್ಲದ, ಬರಿದಾಗದ ಕಣಜಗಳಾಗಿವೆ. ರಸಿಕರ ಹೃದಯವನ್ನು ಸೆಳೆದು, ಕಾವ್ಯದ ರಸಧಾರೆಯನ್ನು ಸೂಸಿ, ಮನಸ್ಸಿನ ಬಯಕೆಯೆಲ್ಲ ಈಡೇರುವಂತೆ ರಚಿಸಿ ಆನಂದವನ್ನು ಚಿಮ್ಮಿಸಿದ ಮತ್ತು ಚಿಮ್ಮಿಸುತ್ತಿರುವ ಆ ಮಹಾಮಹಿಮನ ರಚನೆ ಅನರ್ಘ್ಯ ರಚನೆಯಾಗಿ ಇಂದಿಗೂ ದಿವಾಕರ ತೇಜಸ್ಸಿನಿಂದ ಕೂಡಿ, ಕನ್ನಡ ತಾಯಿಯ ಸಿರಿಕಂಠದಲ್ಲಿ ಸಜೀವರತ್ನವಾಗಿ ಪರಿಶೋಭಿಸುತ್ತಿದೆ. ಇಂತಹ ಋಷಿಪುಂಗವನನ್ನು ಪಡೆದ ಕನ್ನಡವೇ ಧನ್ಯ, ಸರ್ವಮಾನ್ಯ !

ಈ ಮಹಾಕವಿ ಎರಡು ಕಾವ್ಯಗಳನ್ನು ಬರೆದಿದ್ದಾನೆ. ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯ ಅಥವಾ ಪಂಪಭಾರತ. ಈ ಎರಡು ಕಾವ್ಯಗಳನ್ನು ಕವಿ ಸಹೃದಯರ ಮನಸ್ಸು ಭಾವನಾಲಹರಿಯಲ್ಲಿ ತೇಲಾಡುವಂತೆ ಮನೋಜ್ಞವಾಗಿ ರಚಿಸಿದ್ದಾನೆ. ಸಾಮಾನ್ಯವಾಗಿ ಎಲ್ಲಾ ಸನ್ನಿವೇಶಗಳನ್ನು ಸರ್ವಸುಂದರವಾಗಿ ಸೃಷ್ಟಿಸಿದ್ದರೂ ಕೆಲವು ಸನ್ನಿವೇಶಗಳ ವರ್ಣನೆಯಲ್ಲಿ ಸೀಮಾರೇಖೆಯನ್ನು ಮೀರಿ ಸ್ವಲ್ಪವೂ ಅಂದಗೆಡದಂತೆ, ತನ್ನ ಸಹಜವಾದ ಮಿತಭಾಷೆಯಲ್ಲಿ ಪೂರ್ಣಚಿತ್ರ ಹೃದಯಕ್ಕೆ ನಾಟುವಂತೆ, ರಸವೊಸರಿ ಆನಂದದಲ್ಲಿ ಹೃದಯ ಮುಳುಗುವಂತೆ ಪಂಪ ಬರೆದಿದ್ದಾನೆ. ಇಂತಹ ಸನ್ನಿವೇಶದಲ್ಲಿ ಕವಿಯ ಪ್ರತಿಭಾಶಕ್ತಿ ದಾವಾಗ್ನಿಜ್ವಾಲೆಯಂತೆ ಉರಿಯುತ್ತಿರುವುದು ಪಾಠಕರ ಮನಸ್ಸಿಗೆ ಗೋಚರವಾಗುತ್ತದೆ. ಕವಿಯ ವರ್ಣನಾಶಕ್ತಿಯನ್ನು ಕೈ ಎತ್ತಿತೋರುತ್ತಿರುವ ಕೆಲವು ಸನ್ನಿವೇಶಗಳಲ್ಲಿ ಪಾಠಕರಿಗೆ ಇಂದ್ರಕೀಲದಲ್ಲಿ ಅರ್ಜುನ ತಪಸ್ಸುಮಾಡಿದ ಸನ್ನಿವೇಶರಚನೆಯನ್ನು ಆರಿಸಿಕೊಂಡಿದೆ—ಪಂಪಭಾರತದಿಂದ. ಕನ್ನಡನಾಡು ಕನ್ನಡ ಕವಿಚಕ್ರವರ್ತಿಯ ವೇಣುಗಾನವನ್ನು ಕೇಳಿ ನಲಿಯಲಿ !

ಜೂಜಾಡಿ ರಾಜ್ಯವೈಭವವನ್ನು ಕಳೆದುಕೊಂಡು ತಮ್ಮಂದಿರೊಡಗೂಡಿ 'ಧರ್ಮರಾಯ ಕಾಡಿನಲ್ಲಿ ಗೆಡ್ಡೆಗೆಣಸು'ಗಳನ್ನು ತಿಂದು ಕಾಲಕಳೆಯುತ್ತಿದ್ದಾನೆ. ಅತ್ಯಂತ ಅವಮಾನಹೊಂದಿದ ದ್ರೌಪದಿ ಒಂದುದಿನ ತನ್ನನ್ನು ಕಿತ್ತುತಿನ್ನುತ್ತಿದ್ದ

ಅಳಲನ್ನು ಭೀಮನ ಸಂಗಡ ತೋಡಿಕೊಂಡು, ಅವನನ್ನು ಕ್ರೋಧೋದ್ದೀಪಿತನನ್ನಾಗಿ ಮಾಡುತ್ತಾಳೆ. ಜ್ವಾಲಾಮುಖಿಯಂತೆ ಕೆರಳಿ 'ತನ್ನ ಗದಾದಂಡವಂ ಭುಜಾದಂಡದೊಳ್ ಅಳವಡಿಸಿಕೊಂಡು ಪಗೆವರಿರ್ದದೆಸೆಯಂ ನೋಡಿ ತಳರಲ್ ಬಗೆದ ಭೀಮಸೇನನಂ ಧರ್ಮಪುತ್ರಂ ಕೋಪತಾಪದಿಂ ಮಸಗಿದ ಮದಗಜಮನೆ ಮಾಣಿಸುವಂತೆಂತಾನುಂ ಮೃದುವಚನಂಗಳಿಂ ಮುಳಿಸ'ನ್ನು ಆರಿಸುತ್ತಿರುವಾಗ ಕಾರ್ಮುಗಿಲನ್ನು ಸೀಳಿಬರುವ ಮಿಂಚಿನಂತೆ ಗಗನಮಂಡಳದಿಂದ ಕೃಷ್ಣದ್ವೈಪಾಯನನು ಕೆಳಕ್ಕೆ ಬರುತ್ತಾನೆ. ಪೂಜ್ಯರನ್ನು ಕಂಡು, ಧರ್ಮರಾಯ ತನ್ನ ಅಳಲೆಲ್ಲ ಅಂದೇ ಅಳಿದಂತೆ ಸೋದರರೊಡಗೂಡಿ ಆನಂದದಿಂದ ವಂದಿಸುತ್ತಾನೆ. ಅವರ ದೀನಾವಸ್ಥೆಯನ್ನು ಕಂಡು ಸಹಾನುಭೂತಿಯಿಂದ ಕೃಷ್ಣದ್ವೈಪಾಯನನು ಧರ್ಮರಾಯನಿಗೆ ಅವನ ಶತ್ರುಗಳ

> ಪ್ರಳಯದುರಿ ಕಾಳಕೂಟದ
> ಗುಳಿಗೆ ಪುರಾಂತಕ ಲಲಾಟನೇತ್ರಾನಳನೊಂ |
> ದಳವಿಗಮುಗ್ಗಳಮವರ್ಗಳ
> ಮುಳಿಸುಗಳುಂ ಮುಳಿದು ತುಡುವ ದಿವ್ಯೇಷುಗಳಂ ||

ಪಡೆಯಲು ಅರ್ಜನನಿಗಲ್ಲದೆ ಬೇರೆಯವರಿಗೆ ಸಾಧ್ಯವಲ್ಲವೆಂದು ತಿಳಿಸಿ ಆ ದಿವ್ಯಾಸ್ತ್ರಂಗಳನ್ನು ಪಡೆಯಲು ಉಪಾಯಂಗಳಾದ ಮಂತ್ರಮನುಪದೇಶಿಸಿ, 'ಗುಹ್ಯಕನೆಂಬನಂ ಸ್ಮರಣಮಾತ್ರದೊಳ್ ಬರಿಸಿ ಇಂದ್ರಕೀಲ ಬೆಟ್ಟಕ್ಕೆ ಅರ್ಜುನನನ್ನು ಬಿಟ್ಟು ಬರಲು ಆಜ್ಞೆಯಿತ್ತು' ಗಗನಕ್ಕೆ ಹಾರುತ್ತಾನೆ. ಆಗ ಸಮುದ್ರದ ಅಳಲನ್ನೇ ತುಂಬಿಕೊಂಡಿದ್ದ ದ್ರೌಪದಿ ದುಃಖಾತಿರೇಕದಿಂದ ತನ್ನ ಪತಿಯ ಕಡೆಗೆ ತಿರುಗಿ :

> ಬಗೆಯದೆ ಮೆಯ್ಸೊಕಮಂ ಬಗೆ
> ಪಗೆವರ ಕಡುವೆರ್ಚನೆನ್ನ ಪೂಣ್ಕೆಯನೆರ್ದೆಯೊಳ್ |
> ಬಗೆ ಮುನಿಯ ಮಂತ್ರಪದಮಂ
> ಬಗೆ ಕೂಡುಗೆ ನಿನ್ನ ಬಗೆದ ಬಗೆಯೊಳ್ ಪಾರ್ಥಾ ||

ಎಂದು ಕಣ್ಣೀರಿಡುವಂತೆ ನುಡಿಯುತ್ತಾಳೆ.

ಅರ್ಜುನ ತನ್ನ ಹಿರಿಯರಿಗೆ ವಂದಿಸಿ, ದೃಢಮನಸ್ಕನಾಗಿ, ಗುಹ್ಯಕನ ಹೆಗಲೇರಿ ವಿಧ್ಯಾಧರನಂತೆ ಗಗನಮಾರ್ಗದಲ್ಲಿ ಇಂದ್ರಕೀಲಕ್ಕೆ ಹೊರಡುತ್ತಾನೆ. ಇದು ಹಿನ್ನೆಲೆ. ಇನ್ನು ಮುಂದಿನ ಚಿತ್ರಗಳನ್ನು ಪಂಪನ ದಿವ್ಯವಾಣಿಯಲ್ಲೇ ಆಲಿಸುವ. ಆಗ ಜಗತ್ತಿಗೆ ಜೀವವನ್ನೇ ತುಂಬುವ ಶರತ್ಕಾಲ :

ಕಡವಿನ ಕಂಪಡಂಗಿದುದು ಜಾದಿಯ ಕಂಪೊದವಿತ್ತು ಸೋಗೆಯು
ರ್ಕುಡುಗಿದುದಂಚೆಯುರ್ಕು ಪೊಸತಾಯ್ತು ಮುಗಿಲ್ಗಳ ಕರ್ಪು ಪೀನಮೋ |
ಗಡಿಸಿದುದಿಂದುಮಂಡಳದ ಕರ್ಪೆಸದತ್ತು ಘನಾಗಮಂ ಮೊದ
ಲ್ಗಿಡೆ ಶರದಾಗಮಂ ನೆರೆಯೆ ಪರ್ಚೆ ಸಮಸ್ತ ಮಹೀವಿಭಾಗಮಂ ||
ಅಳಿ ಬಿರಿದಿರ್ದ ಜಾದಿಯೊಳೆ ಬಲ್ಮೊರೆಯುತ್ತಿರೆ ಹಂಸೆ ಪೂತ ಪೂ
ಗೊಳದೊಳೆ ರಾಗಿಸುತ್ತಿರೆ ಶುಕಾವಳಿ ಬಂಧುರ ಗಂಧ ಶಾಳಿ ಸಂ |
ಕುಳದೊಳೆ ಪಾಯ್ದುವಾಯ್ದು ನಲಿಯುತ್ತಿರೆ ಸಾರೆ ಚಕೋರಮಿಂದುಮಂ
ಡಳಗಳಿತಾಮೃತಾಸವಮನುಂಡುಸಿರುತ್ತಿರೆ ಚೆಲ್ವು ಶಾರದಂ ||
ಪುಳಿಯೊಳ್ ಕರ್ಚಿದ ಬಾಳಬಣ್ಣಮನೆ ಪೋಲ್ವಾಕಾಶಮಾಕಾಶಮಂ
ಡಳಮಂ ಪರ್ವಿದ ಬೆಳ್ಮುಗಿಲ್ ಮುಗಿಲ ಬೆಳ್ಪೊಳ್ಪೊಕ್ಕು ತಳ್ಪೊಯ್ಯೆಬ |
ಳ್ವಳ ನೀಳ್ದಿರ್ದ ದಿಶಾಳಿ ಶಾಳಿವನ ಗಂಧಾಂಧ ದ್ವಿರೇಫಾಳಿ ಕ
ಣ್ಗೊಳಿಸಿತ್ತೊರ್ಮೆಯೆ ಬಂದುದಂದು ಶರದಂ ಲೋಕಕ್ಕೆ ಕಣ್ ಬರ್ಪಿನಂ ||

ಕದಂಬಪುಷ್ಪದ ಕಂಪು ಅಡಗಿದೆ; ಜಾಜಿಯ ಪರಿಮಳ ತುಂಬಿದೆ. ನವಿಲಿನ ಸೊಕ್ಕು ಉಡುಗಿದೆ; ಹಂಸದ ಆನಂದ ಹೆಚ್ಚಿದೆ. ಮುಗಿಲಿನ ಕಪ್ಪು ಜಾರಿದೆ; ಚಂದ್ರಮಂಡಲದಲ್ಲಿ ಕಪ್ಪಿದೆ. ಮಳೆ ಮೋಡ ಚದುರಿದೆ; ಆಕಾಶ ನಿರ್ಮಲವಾಗಿದೆ. ದುಂಬಿ ಬಿರಿದಿರುವ ಜಾಜಿಯಲ್ಲಿ ಮೊರೆಯುತ್ತಿದೆ; ಹಂಸ ಹೂಗೊಳದಲ್ಲಿ ನಲಿಯುತ್ತಿದೆ. ಗಿಣಿ ಭತ್ತದ ವನದಲ್ಲಿ ಹಾರಿ ಹಾರಿ ಆನಂದಿಸುತ್ತಿದೆ. ಚಕೋರ ಚಂದ್ರಮಂಡಲದಿಂದ ಸ್ರವಿಸುತ್ತಿರುವ ಅಮೃತವನ್ನುಂಡು ಉಸಿರಾಡುತ್ತಿದೆ. ಆಹಾ! ಎಂತಹ ಶರತ್ಕಾಲ! ಹುಣಿಸೇಹಣ್ಣಿನಿಂದ ಶುದ್ಧಿಮಾಡಿದ ಕತ್ತಿಯ ಕಾಂತಿಯನ್ನು ಹೋಲುವ ಆಕಾಶ, ಆಕಾಶಮಂಡಳವನ್ನು ಹಬ್ಬಿರುವ ಬೆಳ್ಮುಗಿಲು, ಮುಗಿಲ ಕಾಂತಿಯಿಂದ ಕೂಡಿ ಪ್ರತಿಬಿಂಬಿಸುತ್ತಿರುವ ವಿಸ್ತಾರವಾದ ದಿಶಾಳಿ, ಶಾಳಿಗಂಧದಿಂದ ಕೊಬ್ಬಿರುವ ದುಂಬಿಯ ಸಮೂಹ—ಈ ರೀತಿಯಲ್ಲಿ ಜಗತ್ತಿಗೆ ಕಣ್ಣು ಬಂದಂತೆ ಶರತ್ಕಾಲ ಆಗಮಿಸಿದ್ದಿತಂತೆ, ಪಂಪನ ಕಣ್ಣಿಗೆ! ಎಂತಹ ಮಾತಿನ ಮುತ್ತುಗಳು ಕೋದುಕೊಂಡಿವೆ ಈ ವೃತ್ತಗಳಲ್ಲಿ? ಚಿತ್ರ ಎಷ್ಟು ಹೃದಯಂಗಮವಾಗಿದೆ!

ಈ ರೀತಿ ಶರತ್ ಸಂಪತ್ತನ್ನು ಅರ್ಜುನನಿಗೆ ತೋರುತ್ತ ಗುಹ್ಯಕ ಮುಂದೆ ಮುಂದೆ ಹೋಗಿ, ಹಿಮಾಚಲದ ನಿರ್ಭಯ ಗಾಂಭೀರ್ಯವನ್ನು ಹೊಗಳುತ್ತ, ಕೈಲಾಸ ಪರ್ವತದಿಂದ ಇಂದ್ರಕೀಲಕ್ಕೆ ಬಂದು ಚಂದ್ರಕಾಂತ ಶಿಲಾತಲದಲ್ಲಿ ಅರ್ಜುನನನ್ನು ಬಿಟ್ಟು, ಅವನ ಅನುಮತಿ ಪಡೆದು ಹೊರಟುಹೋಗುತ್ತಾನೆ.

ಅನಂತರ ಅರ್ಜುನನು ತನ್ನ ತಪೋನಿಷ್ಠೆಯಲ್ಲಿ ತೊಡಗುತ್ತಾನೆ. ಪ್ರಕೃತಿಯ ಪುಣ್ಯಸ್ಥಳವಾದ ಇಂದ್ರಕೀಲ. ಶಾಂತಿಯೇ ಮೈವೆತ್ತಂತಿರುವ ನಿರ್ಜನ ರವರಹಿತ

ಪಾವನ ಪ್ರದೇಶ. ಸಾಮಾನ್ಯ ವ್ಯಕ್ತಿಯೂ ಈ ಭವ್ಯ ಸಂಸರ್ಗದಲ್ಲಿ ಉನ್ನತಮಟ್ಟಕ್ಕೇರಲು ಸಾಧ್ಯವಲ್ಲವೆ! ಅತ್ಯಂತ ಭಕ್ತಿಯಿಂದ ವಾಂಛಿತಸಿದ್ಧಿಗಾಗಿ ಕಿರೀಟಿ ಆ ಪರಾತ್ಪರ ವಸ್ತುವನ್ನು ಏಕಮನಸ್ಕನಾಗಿ ನಿಷ್ಕಲ್ಮಷ ಹೃದಯನಾಗಿ ಧ್ಯಾನಿಸುತ್ತಾನೆ. ಆ ಧ್ಯಾನರೂಪದಲ್ಲಿದ್ದ ಅರ್ಜುನನ ಚಿತ್ತ ಅಂಜದೆ, ಮನಸ್ಸು ಬಳ್ಕದೆ, ಮೋಹಪಾಶದಲ್ಲಿ ಸಿಲ್ಕದೆ, ಸುಂದರಾಕಾರ ಜಾಜ್ವಲ್ಯಮಾನವಾಗಿದ್ದು ಎತ್ತಿ ಕಟ್ಟಿದ ಜಡೆಯಿಂದಲೂ, ತೊಟ್ಟ ರತ್ನಕವಚದಿಂದಲೂ, ಕೊರಳಿಗೆ ಸೇರಿಕೊಂಡಿದೆಯೊ ಎಂಬಂತಿರುವ ಬಿಲ್ಲು ಮತ್ತು ಪ್ರಯತ್ನದಿಂದ ಬಿಗಿಯಲ್ಪಟ್ಟ ಬತ್ತಳಿಕೆಗಳಿಂದಲೂ ಕಾರ್ಯ ಮತ್ತು ಸ್ಥಿತಿಗೆ ಹೊಂದಿಕೆ ಇಲ್ಲದೆ ಅರ್ಜುನನು ಸೌಮ್ಯಭಯಂಕರನಾಗಿದ್ದನಂತೆ!

'ಅದಿರದ ಚಿತ್ತಮಳ್ಕದ ಮನಂ ಬಗೆಗೊಳ್ಳದ ಮೋಹಮೆತ್ತಿಕ
ಟ್ಟಿದ ಜಡೆ ತೊಟ್ಟ ರತ್ನಕವಚಂ ಕೊರಲೊಳ್ ಸಲೆ ಕೋದ ಬಿಲ್ ಪ್ರಯ|
ತ್ನದೆ ಬಿಗಿದಿರ್ದರಳ್ದೊಣೆ ಋುಸುಪ್ಪಸಿ ಖೇಟಕಮಿಂತಿವೊಂದುಗುಂ
ದದೆ ನಿಲೆ ನೋಳ್ಪ ನೋಟಕರ್ಗೆ ಸೌಮ್ಯಭಯಂಕರನಾದನರ್ಜುನಂ ||

ಅರ್ಜುನನ ಈ ಸ್ಥಿತಿಯ ಚಿತ್ತ ಎಷ್ಟು ಸುಂದರವಾಗಿ ಸ್ವಾಭಾವಿಕವಾಗಿ ಬಂದಿದೆ. 'ಎತ್ತಿ ಕಟ್ಟಿದ ಜಡೆ' ಎಂಬ ಪದಪ್ರಯೋಗ ಎಂತಹ ಜೀವಸ್ಥಾನದಲ್ಲಿ ಬಂದಿದೆ! ತಪಸ್ವಿಯ ಚಿತ್ತ ಎಷ್ಟು ಚೆನ್ನಾಗಿ ಕಣ್ಣುಮುಂದೆ ನಿಲ್ಲುತ್ತದೆ. ಆ ಗಿರಿ ವನದಲ್ಲಿದ್ದ ಸಮಸ್ತ ಪ್ರಾಣಿಗಳು ಈತನ ತಪಃಪ್ರಭಾವದಿಂದ ತಂತಮ್ಮ ಸಹಜ ದ್ವೇಷಗಳನ್ನು ತೊರೆದು ಪರಸ್ಪರ ಮೈತ್ರಿಯಿಂದೊಡಗೂಡುತ್ತವೆ. ಆಹಾ! ತಪಸ್ಸಿನ ಮಹಿಮೆ ಎನಿತು?

ಕರಿಣಿಯ ಸೀಯನಪ್ಪ ಮೊಲೆವಾಲ್ಗೆ ಱಗುಳ್ದುದು ತಕ್ಕಿಶೋರಕೇ
ಸರಿ ಹರಿಪೋತಮಂ ಬೆದಱುತಂ ಕರಿಪೋತಮವುಂಡುಗರ್ಚಿಕೇ |
ಸರಿಣಿಯ ಕೆಚ್ಚಲಂ ತುಡುಕುತಂ ಪರಿದತ್ತು ಕುರಂಗ ಯೂಥದೊಳ್
ಬೆರಸಿದುವಂದು ಪೆರ್ಬುಲಿಗಳಿಂದ್ರತನೂಜ ತಪಃ ಪ್ರಭಾವದಿಂ ||

ಈ ರೀತಿಯ ಅರ್ಜುನನ ಉಗ್ರೋಗ್ರ ತಪಸ್ಸು ದೇವೇಂದ್ರನಿಗೆ ಹೃತ್ಕಂಪವನ್ನುಂಟುಮಾಡುತ್ತದೆ. ತನ್ನ ಪದವಿಯಿಂದುರುಳಿಸಲು ಯಾವನೋ ಪ್ರಯತ್ನಪಡುತ್ತಿರಬಹುದೆಂದು ದೇವೇಂದ್ರನು ಈ ತಪಸ್ವಿಗೆ ತಪೋವಿಘಾತವನ್ನು ಉಂಟುಮಾಡಲು ತನ್ನ ದೇವಗಣಿಕೆಯರನ್ನು, ಆರು ಋತುಗಳ ಸಮೇತ ಕಾಮನನ್ನು ದಂಡನಾಯಕನನ್ನಾಗಿ ಮಾಡಿ ಕಳುಹಿಸುತ್ತಾನೆ. ಸರಿ, ಇನ್ನು ಕೇಳಬೇಕೆ? ಮೊದಲೇ ಅಪ್ಸರಸ್ತ್ರೀಯರು, ಆರು ಋತುಗಳ ಏಕಕಾಲ ಪ್ರವೇಶ. ಜೊತೆಗೆ ರತಿಪತಿಯ ನೇತೃತ್ವ! ಎಂತಹ ವಿರಾಗಿಯೂ ರಾಗೋನ್ಮುಖಿ! ಈ ಲಾವಣ್ಯಮಯ ಸನ್ನಿವೇಶವನ್ನು ಪಂಪ

ಬಹಳ ಚಿತ್ರಮಯವಾಗಿ ಬಣ್ಣಿಸಿದ್ದಾನೆ; ನುಡಿಗಳನ್ನು ನವುರಾಗಿ ಆಯ್ದು, ಅಮೃತವನ್ನೇ ಸವರಿ, ಸುಗಂಧದಿಂದಿಡಿದ ಹೂಮಾಲೆಯನ್ನು ಕಟ್ಟಿದ್ದಾನೆ! ಕೇಳಿರಿ ಪಂಪನ ವೀಣಾರವವನ್ನು !

ಆಱುಂ ಋತುಗಳ ಪೂಗಳು
ಮಾಱುಂ ಋತುಗಳ ಪೊದೞ್ದ ಚೆಲ್ವುಗಳುಮಣಂ |
ಬೇಱಿಲ್ಲದೊಂದು ಸೂೞ್ ಮ
ಯ್ದೋಱಿದುವೊಡನೊಡನೆ ನೆಲದೊಳಂ ಗಗನದೊಳಂ ||

ಮೆಯ್ದೋಱಿದೊಡವಱೊಡನೆಯೆ
ಮೆಯ್ದೋಱಲ್ ಬಗೆದನಂಗ ಜಂಗಮ ಲತೆಗಳ್ |
ಮೆಯ್ದೋಱುವಂತೆ ಮೆಲ್ಲಗೆ |
ಮೆಯ್ದೋಱಿದರಮರ ಗಣಿಕೆಯರ್ ವಂದಾಗಳ್ ||

ಸಮದ ಗಜಗಮನೆಯರ್ ಮುಗಿ
ಲ ಮೇಲೆ ನಡೆಪಾಡುವಾಕೆಗಳ್ ತಮಗೆ ಧರಾ |
ಗಮನಂ ಪೊಸತಪ್ಪುದಱಿಂ
ದಮರ್ದಿರೆ ನಡೆನಡೆದು ನಡೆಯಲಾಱದೆ ಸುೞಿದರ್ ||

ಮುಡಿಯಂ ಸೋಗೆಯೆ ಗೆತ್ತು ಸೋಗೆ ನಡೆಯಂ ಪೆಣ್ಣಂಚೆಗೆತ್ತಂಚೆ ಮೆ
ಲ್ನುಡಿಯಂ ಕೋಗಿಲೆಗೆತ್ತು ಕೋಗಿಲೆ ಘನೋತ್ತುಂಗಸ್ತನದ್ವಂದ್ವದಿ |
ಟ್ಟಿಡೆಯಂ ಕೋಕಮೆಗೆತ್ತು ಕೋಕಮಳಕಾನೀಕಂಗಳಂ ಸೋರ್ಕಿದಾ
ಱಿಡಿಗೆತ್ತಾಱಿಡಿ ಸುತ್ತುತುಂ ಬರೆ ಬನಂ ಬರ್ಪಂತೆ ಬಂದಾಕೆಗಳ್ ||

ಮೇಲ್ಕಂಡ ರೀತಿ ನಡೆಯಲಾರದೆ ನಡೆದು ತಮ್ಮ ಆಭರಣಕಿರಣ ದಶದಿಕ್ಕನ್ನೂ ಬೆಳಗೆ ತಾಪಸೇಂದ್ರನನ್ನು ಸೋಲಿಸಲು ಭೂತಳದಲ್ಲಿ ಅಪ್ಸರೆಯರು ಮೈದೋರುತ್ತಾರೆ. ಆಗಮನವೇ ಸಾಲದೆಂದು ಒಯ್ಯಾರಗಿತ್ತಿ ಊರ್ವಶಿ, ಗಾಯಕಿ ಮೇನಕೆ, ರಾಗಿಣಿ ತಿಲೋತ್ತಮೆ, ಮುಂದೆಮುಂದೆ ಬಂದು ಕಾಮನೇ ವಿರಾಗಿಯಾಗಿ ತಾಪಸನಾದನೋ ಎಂಬಂತೆ ಧ್ಯಾನಸ್ಥನಾಗಿರುವ ಕಾಮರೂಪಿಯನ್ನು ಕಂಡು, ಆತನನ್ನು ಸೋಲಿಸುವ ಬದಲು ತಾವೇ ಮೋಹಾಗ್ನಿಗೆ ಬಲಿಯಾಗಿ, ತಾಪಸಿ ಕಣ್ದೆರೆದರೆ ತಮ್ಮ ಜನ್ಮ ಸಾಫಲ್ಯವೆಂಬಂತೆ ಸೋತು, ಆತನ ಮನಸ್ಸನ್ನೆಳೆಯಲು ಮೃದುಮಧುರರವ ವೀಣಾ ಗಾನದಂತೆ 'ಸರಸ್ವತಿಯೇ ಬಾಯ್ದೆರೆದಂತೆ' ಊರ್ವಶಿ, ಮೇನಕೆ, ತಿಲೋತ್ತಮೆ ಗಾನರಸವನ್ನು ಎರಚುತ್ತಾರೆ. ಕವಿಯ ಹಿತಮಿತ ಶಾಂತಿಯುತ ಆಕರ್ಷಣೀಯ ರಚನೆಯನ್ನು ಆತನು ಕಡೆದಿಟ್ಟಿರುವ ವೃತ್ತಗಳಲ್ಲೇ ಕೇಳಬೇಕು ಆ ರಸಾಸ್ವಾದನೆಗೆ!

ಪದ ಕೊರಲಿಂಪನಪ್ಪು ಕೆಯೆ ಕೊಂಕು ನಯಂ ಗಮಕಂಗಳಿಂ ಪೊದ
ರ್ಕೊದಳೆಪೆದಿಕ್ಕಿದಂತೆ ಸುತಿಯೊಳ್ ಸಮವಾಗಿರೆ ಜಾಣನಾಂತು ಮೆ |
ಚ್ಚಿದ ತೆಱಿದಾಸೆವಟ್ಟಲಸದೆತ್ತಿದವೋಲ್ ದೊರೆವೆತ್ತು ದೂಱಿದಾ
ಱಿದ ದನಿ ಮುಟ್ಟೆ ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್ ||

ನಡು ನಡುಗಲ್ಕೆ ಪುರ್ವು ಪೊಡರಲ್ಕೆ ಕುರುಳ್ ಮಿಳಿರಲ್ಕೆ ಭಾಯ್ ಬೆಡಂ
ಗಿಡಿದೆಳಸಲ್ ಕೆರಳ್ದಿ ತುಡುಕಲ್ಕೆ ತಗುಳ್ದುದು ಕೆಂದನೀಕೆಕ |
ನ್ನಡಿಪಳೊ ಪಾಡಿದೀ ನೆವದಿನೆಂಬಿನೆಗಂ ದನಿಯಿಂಪು ಬೀಣೆಯಂ
ಪಿಡಿದವೊಲಾಗೆ ರಾಗದೊಳೊಡಂಬಡೆ ಮೇನಕೆ ಮುಂದೆ ಪಾಡಿದಳ್ ||

ಈ ಅಪ್ಸರೆಯರು ತಾವೇ ಸೋತು ಪ್ರೇಮಭಿಕ್ಷೆಗಾಗಿ ಹಾತೊರೆಯುತ್ತಾರೆ. ಕವಿ ಈ ಸನ್ನಿವೇಶವನ್ನು ಬಹಳ ಎಚ್ಚರದಿಂದ ಬರೆದಿದ್ದಾನೆ. ತಪಸ್ಸನ್ನು ಕೆಡಿಸಲು ಬಂದ ಅಪ್ಸರೆಯರ ಪ್ರೇಮೋಪದೇಶ ತುಂಬಾ ನಾಟಕೀಯವಾಗಿದೆ. ಪಂಪನ ಲೇಖಣಿಯ ದಾರಿ ಅತ್ಯಂತ ಉಲ್ಲಾಸಕಾರಿ! ಕೇಳಿ ಅಪ್ಸರೆಯರ ವಾದವನ್ನು ಪಂಪನ ನುಡಿಯಲ್ಲಿ :

ಬೂದಿ ಜಡೆ ಲಕ್ಕಣಂ ತಪ
ಕಾದುವೆಡ್ಡೊಣೆ ಶರಾಸನಂ ಕವಚಮಿವೆಂ |
ತಾದುವೊ ಮುತ್ತುಂ ಮೆಣಸುಂ
ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ ||

ಕಡು ತಪದಿಂದೆ ನಿನ್ನ ಪಡೆಪಾವುದೊ ಗಾವಿಲ ಸಗ್ಗಮಲ್ತೆ ಪೋ
ನುಡಿಯವೊ ಮೂರ್ಖ ಸಗ್ಗದ ಫಲಂ ಸುಖಮಲ್ತೆ ಸುಖಕ್ಕೆ ಪೇಱೊಡಂ |
ಬಡದವರಾರೊ ಪೆಂಡಿರೊಳಗಾರ್ ಪೆರಱಾಮೆ ದಲಾಮೆ ಬಂದು ಕಾ
ಲ್ವಿಡಿದಪೆವಿಂಬುಕೆಯ್ಯೊಡಿವು ಮೆಲ್ಲಡಿಗಳ್ ಗಡ ಕರ್ಚು ಬೂದಿಯಂ ||

ಕೋಕಿಳ ಕುಳ ಕಳ ಗಳನಿನ
ದಾಕುಳ ರವಮಿಂಪನಾಗಳುಂ ಪಡೆದುದು ನೋ |
ಡೀಕೆಗಳ ಚಳಿತಲುಳಿತ
ಭ್ರೂಕುಟಿಯೇ ಪರಮ ಸುಖದ ಕೋಟಿಯನೀಗುಂ ||

[ಬೂದಿ ಜಡೆ ತಪಸ್ಸಿಗೆ ಲಕ್ಷಣ. ಕವಚ ಬತ್ತಳಿಕೆ ಧನಸ್ಸು ಇವು ಏಕೆ? ಮುತ್ತು ಮತ್ತು ಮೆಣಸನ್ನು ಕೋದಂತೆ ನಿನ್ನ ತಪಸ್ಸು ಅಸಂಬದ್ಧ! ಹೇ ಸನ್ಯಾಸಿ! ಈ ಉಗ್ರತಪಸ್ಸಿನಿಂದ ನೀನು ಪಡೆಯುವುದಾದರೂ ಏನು? ಸ್ವರ್ಗವಲ್ಲವೆ! ಮೂರ್ಖ! ಸ್ವರ್ಗದ ಫಲ ಭೋಗವಲ್ಲವೆ? ಭೋಗಕ್ಕೆ ಒಡಂಬಡದವರಾರು? ಸುಂದರಿಯರ ಸೀಮಂತಮಣಿಗಳಾದ ನಾವೇ ಬಂದು ಪಾದ ಹಿಡಿದುಕೊಂಡಿದ್ದೇವೆ?

ನಿನ್ನ ಬೂದಿಯನ್ನು ಕರ್ಚು !] ಈ ರೀತಿ ಅಪ್ಸರಸ್ತ್ರೀಯರು ಅರ್ಜುನನನ್ನು ಆಕರ್ಷಿಸಲು ಪ್ರಯತ್ನಿಸುತ್ತಾರೆ. ಎಷ್ಟೇ ಒರಲಿದರೂ ಅರ್ಜುನನ ಮನಸ್ಸು ವಿಚಲಿತವಾಗಲಿಲ್ಲ. ಸೋತ ಪಡೆ ಓಡುವಂತೆ ತಾವು ಬಂದ ದಾರಿ ಹಿಡಿದು, ಅಪ್ಸರೆಯರು ಹೊರಟು ಹೋಗುತ್ತಾರೆ. ಅರ್ಜುನ ತನ್ನ ವಾಂಛಿತವನ್ನು ಪಡೆಯುತ್ತಾನೆ. ಕಥೆ ಮುಂದೆ ಸಾಗುತ್ತದೆ.

ಮೇಲಿನ ಕಂದವೃತ್ತಗಳಲ್ಲಿ ಪಂಪನ ಕಲ್ಪನಾಸಾಮರ್ಥ್ಯ, ವರ್ಣನಾವೈಖರಿ, ನುಡಿಗಳ ಆಯ್ಕೆ, ಹೇಳುವ ಸರಣಿ, ತೋರುವ ನೈಜತೆ, ಬರುವ ಚಿತ್ರಗಾರಿಕೆ ಎಷ್ಟು ಹೃದಯಂಗಮ! ಪಂಪ ಎಂತಹ ಚಿತ್ರಗಾರ! ಇಂತಹ ರಸರಚನೆ ಕವಿ ಚಕ್ರವರ್ತಿಗಲ್ಲದೆ ಬೇರೆಯವರಿಗೆ ಸಾಧ್ಯವೆ! ಈ ಅನರ್ಘ್ಯ ಸಾಹಿತ್ಯವನ್ನು ನೀಡಿದ ಮಹಾ ಮಹಿಮನನ್ನು ಪಡೆದ ಕನ್ನಡವೇ ಧನ್ಯ! ಸಿರಿಗನ್ನಡಂ ಗೆಲ್ಗೆ.

'ಶಾಂತಿ'

ಬೆಳಕು—ಧೂಳು

ಕಿಟಕಿ ಬಾಗಿಲ ಮುಚ್ಚಿ ಒಳಗೆ ನಿದ್ರಿಸುತಿದ್ದೆ
ಬೆಳಗಾಯಿತೇನೋ ಎಂದು ಮೇಲೆದ್ದೆ.
ಹೌದು ; ಬೆಳಗಾಗಿತ್ತು
ಮೂಡುದೆಸೆ ರಂಗಾಗಿ ಕಂಗೊಳಿಸುತಿತ್ತು.
ಇರುಳತಪ ಸಫಲವಾಗಿತ್ತು
ಮನಕೆ ಸಂಭ್ರಮವಾಯ್ತು !
ಕಿಟಕಿಯೊಂದನು ತೆರೆದೆ !
ಸ್ವರ್ಗಸುಂದರ ಕಿರಣವೊಂದೈತಂದು
ಕೋಣೆಯನು ಬೆಳಗಿತಂದು.
ಬಂದ ಬೆಳಕನು ಕಂಡು ಬೆರಗಾದೆ,
ಅದರಲ್ಲಿ ಮೈತೊಳೆದೆ ; ಮಣಿದೆ.
ಉಳಿದ ಕಿಟಕಿಗಳಲ್ಲು
ಬೆಳಕು ಬರುವುದು ಎಂದು
ಎಲ್ಲವನು ತೆರೆದೆ, ಅತಿಯಾಸೆಯಿಂದ !
ನೋಡುತಿರೆಯಿರೆ ನಾನು
ಬೇರೆ ದಿಕ್ಕುಗಳಿಂದ
ತೆರೆದ ಕಿಟಕಿಗಳಿಂದ
ರೊಯ್ಯನೆಯೆ ಬೀಸುತ್ತ ಬಂತೊಂದು ಬಿರುಗಾಳಿ
ಧೂಳು ಕಸಕಡ್ಡಿಗಳ ಹೊತ್ತು ಧಾಳಾಧಾಳಿ-
ಯಲಿ ಭೋರ್ಗರೆದು,
ಕೋಣೆಯಲಿ ಕಸದಮಳೆಗರೆದು !
ಬೆಳಕು ಏತರಲೆಂದು ತೆರೆದ ಕಿಟಕಿಗಳಿಂದ
ಧೂಳನೂ ತೂರುವುದು ಯಾರ ಆನಂದ ?
ಬೆಳಕನಿತ್ತವನೇ ಮತ್ತೆ ಧೂಳನೂ ತೂರುವುದೆ ?
ಗುಡಿಸಿಕೊಳ್ಳಲಿ ಎಂದೆ ? ಇರಬೇಕು, ಅರ್ಥವಿದೆ !

ಜಿ. ಎಸ್. ಶಿವರುದ್ರಪ್ಪ

ಕವಿ ಹರಿಹರದೇವನ "ಪರವೆನಾಚಿ"

ಕಲ್ಪಲತೆಯುನೆಳಸಿರ್ಪ ಸುರತರುವಿನಂತೆ, ರಾತ್ರಿಯಂ ಬೆಳಗಲಿರ್ದ ಪೂರ್ಣೇಂದುವಿನಂತೆ, ದಿವಮಂ ಧವಳಿಸಲಿರ್ದ ಸಹಸ್ರಕರನಂತೆ ಇರುವ ಸುಕುಮಾರ ಸಾರ್ವಭೌಮ ಸೌಂದರಪೆರುಮಾಳೆ ನಂಬಿಯಣ್ಣನಾಗಿ ಸರ್ವದಿಕ್ಕುಗಳಲ್ಲಿಯ ಶಿವಾಲಯುಗಳ ನರಸುತ್ತ ಪಡಿಹೊನ್ನ ಪಡೆಯುತ್ತ ಸಾಗಿ ಇದೀಗ ಶ್ರೀ ಶಿವನ ಸಜ್ಜೆಯೆನಿಸಿರ್ಪ ತಿರುವಾರೂರಿಗೆ ಆಗಮಿಸಿದ್ದಾನೆ. ಬೆಳತಿಗೆಗಂಗಳ, ಮೆಱೆವನಾಸಿಕದ, ತೊಳಗುವ ಸುಲಿಪಲ್ಲಳ, ವಿಳಾಸಮಂ ತಳೆದ ಅವನ ಮುಖಮಂಡಲವು ಶಿವಸ್ತೋತ್ರಗೀತಾಮೃತ ಕರಂಡಗೆಯಂತಿದೆ. ಮೃದುಪದತಳದ ಲಾವಣ್ಯಕ್ಕೆ ನಗೆತನಗೆನುತೆ ನಟ್ಟು ನೋಡುವ ನಾಯಕಿಯರ ದಿಟ್ಟಿಗಳಿಂ ಚರಣತಳಂ ಕಣ್ಬೆತ್ತಂತಿದೆ. ಶಿವಪೂಜೆಗೆಂದರಳಲಿರ್ದ ಪರಿಮಳದ ಮೊಗ್ಗೆಯಂತಿರ್ದ ಏರುಂಜವ್ವನದಿಂದ ಅಂದಗೊಂಡು ನಂಬಿಯಣ್ಣನು ಪುರವೀಥಿಯೊಳು ಉದಯಿಸುವ ಬಾಲರವಿಯಂತೆ ಕಂಗೊಳಿಸುತ್ತ ಬರುತಿರಲು, ಇಂದ್ರನೀಲದ ಮಣಿಸ್ತಂಭನಿಳಯಂಗಳುಪ್ಪರಿಗೆಯೊಂದರಲ್ಲಿ ಅತ್ಯಂತ ಮುಗ್ಧೆಯಂ ಪರವೆಯಂ ಭೋಂಕನೆ ನೋಡಿ ಧಿಗಿಲನೆ ಮನಂ ಬೆದರೆ ಪರವೆ ಕಾಣುತ್ತಲ್ಲಿ ಮಿಗೆ ದಿಟ್ಟಿ ನಟ್ಟು ನೋಡುತ್ತಿರಲ್ಕೆ, ಚಿಂತಿಸುತ್ತ ಒಳಗೊಳಗೆ ನೋವುತುಂ 'ಇಂತಪ್ಪ ರೂಪುಂಟೆ' ಎಂದೆನುತ ನಡೆತಂದು ಶಿವನಿಳಯವನ್ನು ಪುಗುತ್ತಾನೆ.

ಪರವೆಯ ಮೊದಲ ದರ್ಶನ ಓದುಗರಿಗಾಗುವದು ಈ ರೀತಿಯಲ್ಲಿ. ಕಾವ್ಯ ಪ್ರಾರಂಭದಲ್ಲಿ ಬರುವ ನಂಬಿಯ ಸೌಂದರ್ಯ ಯೌವನದೇರಾಟದ ಅಂದಚಂದಗಳ ಬಗೆ, ಹರಿಹರನ ನವನವೋನ್ಮೇಷಶಾಲಿನಿಯಾದ ಪ್ರತಿಭೆಯ ಪಡಿಯಚ್ಚಿನಲ್ಲಿ ರೂಪಗೊಂಡು, ಅವನ ಉತ್ಸಾಹದ ಶೈಲಿಯಲ್ಲಿ ಕಾಂತಿಗೊಂಡು ರಸಿಕ ಓದುಗರ ಕಂಗಳ ಮುಂದೆ ನಲಿದು ಮನಮುದಿಸಿದಾಗ, ಅಚ್ಚರಿಗೊಂಡ ಅವರ ಮನವು ಅಂತಹ ನಂಬಿಯಣ್ಣನ ಮನವೇ ಪರವೆಯಲ್ಲಿ ಮೋಹಿಸಿದಾಗ, ಕಲ್ಪನೆಯ ಗಡಿದಾಂಟಿ ನಿಂತ ಪರವೆಯ ಸೌಂದರ್ಯ ಊಹಿಸಲೆಳಿಸಿ ಸಾಲದೆ ಸೋತುನಿಲ್ಲುವಂತಾಗಿ ತನ್ನನ್ನೇ ಶರಣು ಬರುವಂತೆ ಮಾಡುವ ಹರಿಹರನ ವರ್ಣನಾಚಾತುರಿ ಅಸಾಧಾರಣವಾದುದಾಗಿದೆ. ಅಂತೆಯೆ ಹರಿಹರನು ಪರವೆಯ ಸಖಿಯೋರ್ವಳಿಂದ ಹೇಳಿಸುವ ಮಾತುಗಳ ಕೇಳಿ. ಮದನಶರದೊಡನೆ ಪರವೆಯರ ಮನಂ ಬರ್ಪಂತೆ ಬರುವ ಆ ವಿಳಾಸಿನಿಯು 'ದೇವ, ಪರಮ ಯೌವ್ವನೆಯುಪ್ಪ ಪರವೆನಾಚಿಯುರೆಂಬ ಕನ್ಯಾಕನಕಲತೆಯಿರ್ದುಪುದು, ಆಕೆಗೀಗಳೀಗಳಿಂದು ನಾಳೆ ಕುಸುಮಾಯುಧ ಪ್ರಥಮ ಪುಷ್ಪಿತಾಸಮಯುವದು . . .

ನಿಮ್ಮಿರ್ವರ್ಗಂ ಹರೆಯಂ ಪಾಸಟಿ, ಜವ್ವನಂ ಜತ್ತಾಯಿತಂ, ಚೆಲ್ವು ಚಮತ್ಕಾರಂ, ನೋಟವಘಾಟಂ, ಪರಿಹಾಸಂ ಸಹವಾಸಂ, ವಿನೋದಂ ವಿಲಂಬಂ, ಅನುಭವಂ ಸಾನುಭವಂ, ನುಡಿಗೆಡೆಯಿಲ್ಲ ನಿಮ್ಮಡಿಗಳಿಂದಿನ ಬೆಳತಿಗೆ ಬೆಳ್ದಿಂಗಳೊಳು ಬಿಜಯಂ ಗೆಯ್ದು ಕನ್ನೆಯ ಮನೋರಥಂ ಮಾಳ್ಪುದೆಂದು ' ಒಳ್ನುಡಿಯಿಂದೊಡಂಬಡಿಸುವ ರೀತಿಯಲ್ಲಿ ಹರಿಹರನು ತನ್ನ ಕಲಾಕೌಶಲ್ಯವನ್ನೇ ಸೂರೆಗೆಯ್ದಿದ್ದಾನೆ. ಒಂದೊಂದು ಮಾತಿನಲ್ಲೂ ಪರವೆ ನಂಬಿಯರ ರೂಪಗಳು ನವನವೀನವಾಗಿ ಕಂಗೊಳಿಸುತ್ತವೆ ನಮ್ಮೆದುರು. ವ್ಯರ್ಥವೆಂದೆನಿಸುವ ಒಂದು ಮಾತೂ ಕಾಣದೊರೆಯದಿಲ್ಲಿ. ಸೂಚ್ಯವಾಗಿ ಸ್ವಲ್ಪ ಮಾತುಗಳಲ್ಲಿಯೇ ಅಂದವಾಗಿ ಚಿತ್ರಿಸುವ ಹರಿಹರನ ಕಾವ್ಯಪ್ರತಿಭೆ ಅಸಾಧಾರಣವೆಂಬುದನ್ನು ಪರವೆಯ ಪಾತ್ರದಾದ್ಯಂತವೂ ಕಾಣಬಹುದಾಗಿದೆ.

ತುಂಬುರನು ಸೌಭಾಗ್ಯದ ಸಿರಿಯಂ ಸಿಂಗರಿಸುವಂತೆ ಸಿಂಗರಂ ಮಾಡಲು ನಂಬಿಯು ಎಳಲತೆಯ ಸೆರೆಯಂ ಬಿಡಿಸಲ್ ಬರ್ಪ ವಸಂತನಂತೆ, ಯೌವನದ ಮುದ್ರೆಯನೊಡೆಯಲ್ ಬರ್ಪ ಮಧುಕರನಂತೆ, ಎಳೆವೆಳ್ದಿಂಗಳಂ ಬಳಸಲ್ ಬರ್ಪ ಚಕೋರನಂತೆ, ಪರವೆಯ ಮನೆಗೆ ನಡೆತಂದನೆಂದು ಹೇಳುವಲ್ಲಿ ಹರಿಹರನು ಬಳಸಿದ ಮನೋಜ್ಞವಾದ ಹೃದಯಂಗಮವಾದ ಉಪಮೆಗಳು ಅವನ ಕಲಾಭಿಜ್ಞತೆಯ ಕೈವಾಡದ ಪ್ರೌಢಿಮೆಯನ್ನೇ ತೋರುತ್ತವೆ. ಹಾಗೆಯೆ ಸಾದೃಶ್ಯಮೂಲಕವಾಗಿ ಪಾತ್ರಗಳ ಹಿರಿಮೆಯನ್ನು ರೂಪಿಸುವ ರಮಣೀಯತೆ ಹರಿಹರನದೇ ಆಗಿದೆ. ಪರವೆಯ ರೂಪರಾಗ ಎಳೆಎಳೆಯಾಗಿ ಹೊರಹೊಮ್ಮಿ ಚಿತ್ರಿತವಾಗುವ ಬಗೆ ನೋಡಿ. ಮಕರಧ್ವಜ ಮಂಟಪವೆನಿಪ ಹೂವಿನ ಚಪ್ಪರದ ನಡುವೆ ಕಬ್ಬಿನ ಬಿಲ್ಲಂ ನೆಮ್ಮಿದ ಕುಸುಮಶರದಂತೆ ಕುರುವಕದ ಕಂಭಮಂ ನೆಮ್ಮಿ ಅಶೋಕೆಯ ತಳಿರಂ ಮೆಟ್ಟಿ ತಾವರೆಯ ದುಕೂಲಮನುಟ್ಟು ಪರಾಗ ತಿಲಕಮನಿಕ್ಕಿ ನಿಂದ ಪರವೆಯ ಕೋಮಲತೆ ಕುಡಿವೆತ್ತಿ ನಿಂದ ಬಗೆ ಮನನೀಯವಾಗಿ ವರ್ಣಿತವಾಗಿದೆ.

ಪರವೆನಂಬಿಯರು ಸಂಧಿಗೆಯ್ದಾಗ ಗಗನದೊಳು ನಿಂದು 'ನೋಡು ನೋಡು ಪಾರ್ವತಿ ನಿನ್ನ ಪರವೆಯ ರೂಪಮನೆನ್ನ ನಂಬಿಯಣ್ಣನ ವಿಳಾಸಮಂ' ಎಂದು ಉಮಾಮಹೇಶರೇ ಭಕ್ತರ ಒಲವುನಲಿವುಗಳ ಕಂಡು ನಲಿಯುತ್ತಿದ್ದಲ್ಲಿ, ಇನ್ನೂ ಹೆಚ್ಚಿನ ಜಾಣ್ಮೆಯಿಂದ ಪರವೆನಂಬಿಯರ ಬಗೆಗೆ ಹರಿಹರನು ಹೇಳಬೇಕೇನು? 'ಇವರೀರ್ವರ ಸುಖದೋಜೆಯನೀ ಜಗತ್ತ್ರಯಂ ಮೆಚ್ಚೆ ಪೂಜೆಯಾಗಿ ಕೈಕೊಂಡಪೆಂ' ಎಂದು ಹರನು ಹೇಳುವಲ್ಲಿ ಕಾವ್ಯದ ಸಾರಸರ್ವಸ್ವವೇ ಮಥಿತವಾಗಿ ಕಂಗೊಳಿಸುವ ನವನೀತವಾಗಿ ಹೊರಬಂದಿದೆ. ಶಿವಾರ್ಪಣಭಾವದಿಂದ ಅರ್ಪಿತವಾದ ಭಕ್ತನ ಸಮಸ್ತಕಾಯಕ ಲೀಲಾವಿಲಾಸಗಳೆಲ್ಲ ನಂಬಿದರ ಕೈಬಿಡದ ಮೃಡನಿಂದ ಪೂಜೆಯಾಗಿ

ಪರಿಗ್ರಹೀತವಾಗುವವೆಂಬುದನ್ನೆ ಇಲ್ಲಿ ಹರಿಹರದೇವನು ಕಾವ್ಯದ ತುಂಬೆಲ್ಲ ನಂಬಿಯ ಜೀವನದ ಪ್ರತಿಘಟ್ಟದಲ್ಲೂ ಬಿಂಬಿಸುತ್ತಾನೆ.

ಈ ದೃಷ್ಟಿಕೋನದಿಂದ ಕಂಡಾಗ ಪರವೆಯ ವ್ಯಕ್ತಿತ್ವವಿನ್ನೂ ಅಂದಗೊಳ್ಳುತ್ತದೆ. ನಂಬಿಪರವೆಯವರು ಸಖಿಯರುಂ ಸಖರಂ ನೆರೆಮರೆದು ನಡೆತಂದು ನೆರೆವ ಸೆಜ್ಜೆವನೆಯ ಸಿರಿಮಂಚದ ಕಾಮಕೋಳಾಹಳಮನೇನಂಬಣ್ಣಿಪೆನೆಂತು ಎಂದು ಹೇಳುವ ಹರಿಹರನ ರಸಿಕತೆ ಎಲ್ಲೆಮೀರದಂತೆ ಬಗೆ ವಿಕಾರಗೊಳ್ಳದಂತೆ ಅಂದವಾಗಿ ಹೊರಹೊಮ್ಮಿ ಶಬ್ದ ರೂಪದಲ್ಲಿ ಮೂಡಿ ನಿಂದ ರೀತಿ ಮನನೀಯವಾಗಿದೆ. 'ಲಜ್ಜೆಯ ತೆರೆ ಸರಿದು, ಉಪಚಾರವೋವಡಿಸಿ, ಲಲ್ಲೆ ಮೆಯ್ದೋರಿ, ಮರಹಂಕುರಿಸಿ, ಸವಿ ಪಲ್ಲವಿಸಿ ಮುಗುಳ್ನಗೆ ಹೂತು, ಸಿರಿಮಂಚಂ ಸುಖದುಕ್ಕಡಮಾಗೆ' ಎಂದು ಬಣ್ಣಿಸುವಲ್ಲಿ ಅಭಿವ್ಯಕ್ತವಾದ ರತಿಭಾವ ಸ್ಥಾಯಿಗೊಂಡು ಶೃಂಗಾರ-ರಸಾಸ್ವಾದನೆಗೆಯ್ಯಿಸುವ ಬಗೆ ರಮಣೀಯವಾಗಿದೆ.

ಅಭವನ ಅನುಜ್ಞೆಗೊಂಡು ತಿರುವಾರೂರ ಪರವೆನಾಚಿಯರ ಮೆಯ್ಯ ಸುಗಂಧ ಸಕಲ ಪರಿಮಳಂ ಕವರ್ತೆಗೊಂಡಾವೋದ ಭಾರದಿಂ ಮಂದಾನಿಲನಾಗಿ ಮೆಲ್ಲಮೆಲ್ಲನೆ ಬಂದು, ಸಂಕಿಲಿಯೊಡನೆ ಸೆಜ್ಜೆವನೆಯಲ್ಲಿ ಪವಡಿಸಿದ ನಂಬಿಯಣ್ಣನ ತನುವ ಮುತ್ತಿ ನಾಸಿಕಮಂ ಪತ್ತಿ ಮನಮಂ ಸುತ್ತಿ ಸಂಕಿಲಿಯ ನೇಹಮಂ ಹಾರಿಸಿ ಪರವೆಯರ ನೇಹದ ವಶೀಕರಣ ಪರಿಮಳಮಂ ತೋರಲು, ಸೌಂದರನೆದೆ ಧಿಗಿಲೆಂದು ಮನದ ಬೆಸಗೆ ಬಿಟ್ಟು ಚಿತ್ತವೆತ್ತಿಕ್ಕಿ ಭೋಂಕನೆದ್ದು ಮರುಳಂತೆ ಮುನಿದಂತೆ ಕಾಮತಾಪದಿಂ ಕಣ್ಗಾಣದೆ ಉರವಣಿಸಿ ನಡೆತರುವ ನಂಬಿಯಣ್ಣನ ಬಗೆ ವಿಚಿತ್ರವಾಗಿದೆ. ಅದಕ್ಕೂ ಹೆಚ್ಚಾಗಿ ಆ ಮೂಲಕ ಪರವೆಯ ವ್ಯಕ್ತಿತ್ವವನ್ನು ಇನ್ನೂ ಸ್ಫುಟವಾಗಿ ಒಡಮೂಡಿ ಬರುವಂತೆ ಸನ್ನಿವೇಶ ಕಲ್ಪನೆ ಉಚಿತ ಶಬ್ದಗಳಲ್ಲಿ ಬಣ್ಣಿಸಿ ಓದುಗರ ಬಗೆ ತಟ್ಟಿ ಮನಮುಟ್ಟುವಂತೆ ಗೆಯ್ವ ಹರಿಹರನ ಕಲಾಸೂಕ್ಷ್ಮತೆ ಇನ್ನೂ ಶ್ರೇಷ್ಠವಾಗಿದೆ. ಯಾವ ಸಂಕಿಲಿಗಾಗಿ ಶಿವನನ್ನು ಪರಿಪರಿ ಕಾಡಿಬೇಡಿ ಪಡೆದು ರತಿಸುಖದಲ್ಲಿ ಮಗ್ನನಾಗಿದ್ದನೊ, ಯಾವಳನ್ನು ಕಂಡು ಕ್ಷಣ ಒಂದರಲ್ಲಿ ಪರವೆಯನ್ನು ಮರೆಯಲೆಳಿಸಿದ್ದನೊ ಆ ಸಂಕಿಲಿ ನಾಚಿಯನ್ನು ಕ್ಷಣಾರ್ಧದಲ್ಲಿ ಮರೆಯುವಂತೆ ಮಾಡಿದ ಮಹಾ ಸಾಮರ್ಥ್ಯ ಮಾರುತನಿಗೆ ಬಂದುದು ಪರವೆಯ ಮೆಯ್ಯ ಸುಗಂಧದಿಂದಾಗಿ, ಆ ಪರಿಮಳ ತಾಗುವದೊಂದೆ ತಡ ನಂಬಿಯನ್ನು, ಒಳಹುದುಗಿ ಹತ್ತಿಕ್ಕಲ್ಪಟ್ಟಿದ ಭಾವನೆಗಳ ಸ್ಫೋಟವಾಗಿ ಮನದ ಬೆಸಗೆ ಬಿಚ್ಚುವ ಪರಿಯ ಚಿತ್ರವು ಪರವೆನಾಚಿಯ ಪಾತ್ರವನ್ನು ಇನ್ನೂ ಘನವಾಗಿಸುತ್ತದೆ. ಇಂತಹ ಸುಂದರ ಕಲ್ಪನೆಯಲ್ಲಿ ಮಾನವನ ಹೃದಯಾಂತರಾಳದಲ್ಲಿ ನಡೆಯುವ ಚಿತ್ತವೃತ್ತಿಗಳ ಸೂಕ್ಷ್ಮ ವ್ಯಾಪಾರವನ್ನು ಸರಿಯಾಗಿ ತಿಳಿದು

ತಿದ್ದಿ ತೀಡಿ ವರ್ಣಯುತವಾಗಿ ರೂಪಿಸುವ ಹರಿಹರನ ಕಾವ್ಯಪ್ರತಿಭೆ ವಾಸ್ತವಿಕತೆಯ ಮೇರೆ ಮೀರಿ ಅತಿ ದೂರ ದಾಟಿಲ್ಲವೆಂಬುದನ್ನು ಕಾಣುವೆವು.

'ಸೌಂದರ ಪೆರುಮಾಳೆ ಬಡಗಲ್ ಬಿಜಯಂಗೆಯ್ದು ಮೂರು ವರುಷಂ ಮಗಳ್ಗೆ ನೂರು ವರುಷಮಾದುದು' ಎಂದು ಪರವೆಯ ತಾಯಿಯು ಶಿವನೆದುರು ಹೇಳುವಲ್ಲಿ ಪರವೆಯ ಮೂರು ವರುಷ ವಿರಹಕಾಲದ ಮನಸ್ಥಿತಿ ಘನೋಜ್ಞವಾಗಿ ಹೇಳಲ್ಪಟ್ಟಿದೆ. ನೂರು ಶಬ್ದಗಳೂ ಇಲ್ಲಿ ಅಡಗಿದ ಯಥಾರ್ಥ ಚಿತ್ರವನ್ನು ರೂಪಿಸಲಸಾಧ್ಯವು. ಆದರೂ ಹರಿಹರದೇವನು ಇಷ್ಟಕ್ಕೆ ಸಮಾಧಾನಗೊಳ್ಳದೆ ಬಣ್ಣಿಸುವ ಬಗೆ ನೋಡಿ.

'ಏಸುವಡೆದ ಪುಲ್ಲೆ ಬಸವಳಿದು ಬಿರ್ದಂತೆ, ಕೊಳನ ತಡಿಯಣ ಬಾಲಚೂತದ ನೆಳಲ ಶಶಿಕಾಂತದ ಶಿಲಾತಳದೊಳ್ ಪೊರಳುತಿರ್ಪ ಪರವೆಗೆ, ಅಶೋಕೆ ಸಶೋಕೆ, ಮಾಮರಂ ತೋಮರಂ, ಬೆಳ್ದಿಂಗಳು ಬಿಳಿಯಿಂಗಳಂ, ಕೊಳಂ ಕೊಳುಗುಳಂ, ಸಸಿ ಬಿಸಿ, ಲತೆ ಅಸಿಲತೆ, ಕದಳಿ ಕದಳೀಘಾತಂ, ಫಳಂ ನಿಷ್ಫಳಂ, ಕಾವಂ ದಾವಂ, ವನಂ ಪಿತೃವನವಾಗಿ, ಶಿವಭಕ್ತಿ ಹೀನಂಗೆ ಜಗಂ ಮುಳಿವಂತೆ ಸೌಂದರನಿಲ್ಲದ ಪರವೆಗೆ ಚರಾಚರ ವಸ್ತುಗಳು ಮುಳಿಯೆ ಮರುಗುತ್ತಿರ್ದಪಳು' ಎಂದು ವಿರಹತಾಪದ ರೀತಿಯನ್ನು ಕಲಾತ್ಮಕವಾಗಿ ವಿವರಿಸುವಲ್ಲಿ ಹರಿಹರನ ಕಾವ್ಯಸೃಷ್ಟಿಯ ಅಮೋಘ ಅತ್ಯದ್ಭುತಗಳ ದರ್ಶನ ಓದುಗರಿಗಾಗುವದು. ಹರಿಹರನು ಬಳಸುವ ಶಬ್ದಗಳಲ್ಲಿ ಅದಾವ ಪ್ರಚಂಡ ಶಕ್ತಿಯಡಗಿದೆ ಅದೆಂತಹ ಧ್ವನಿ ಲಾಲಿತ್ಯ ಮನೋಹರತೆಗಳು ತುಂಬಿನಿಂತಿವೆಯೆಂಬುದರ ಪ್ರತ್ಯಕ್ಷಾನುಭವವಾಗುವದು. 'ಶಿವಭಕ್ತಿಹೀನಂಗೆ ಜಗಂ ಮುಳಿವಂತೆ' ಎಂದು ಹೇಳುವ ಉಪಮೆಯಲ್ಲಿ ಹರಿಹರನಲ್ಲಿಯ ಅಸಾಧಾರಣವಾದ ಶಿವಭಕ್ತಿ ಪ್ರಕಟವಾಗುವದರ ಜತೆಗೆ ಪರವೆಯ ಪವಿತ್ರ ಪ್ರೇಮದ ನಿದರ್ಶನವಾಗಿ ಮನ ಹರ್ಷ ಪುಲಕಿತವಾಗುವದು.

ಇಂತು ಪರವೆಯ ಅಸಾಧಾರಣ ರೂಪವನ್ನೂ ಬಗೆಗಾಣಿಸಿ, ಅವಳ ನಿರ್ಮಲ ಪ್ರೇಮದ ದರ್ಶನಗೆಯ್ಯಿಸಿ, ನಂಬಿಯಲ್ಲಿ ಅನುರಕ್ತವಾಗಿ ಆಮೋದಗೊಂಡು ಜೀವನದ ಕ್ಷಣಭಂಗುರತೆಯನ್ನು ದಾಂಟಿ ನಿಂತ ಒಲುವಿನಲ್ಲಿ ಒಂದುಗೂಡಿ ಸಾರ್ಥಕಗೊಳ್ಳುವ ಅವಳ ಪ್ರೇಮದ ಅಸಾಧಾರಣತೆಯನ್ನು ತೋರಿದ ಹರಿಹರದೇವನ ದಿವ್ಯದೃಷ್ಟಿಯೇ ಹರಿಹರನಿಗೆ ಮಹಾಕವಿಯ ಪಟ್ಟಗಟ್ಟಿದೆ ಕನ್ನಡಸಾಹಿತ್ಯದಲ್ಲಿ. ಭಕ್ತಕವಿಯಾದ ಹರಿಹರದೇವನಿಗೆ ಹೇಳಬೇಕಾದುದು ಈ ಕಾವ್ಯದಲ್ಲಿ, ನಂಬಿಯಣ್ಣನ ಅಸಾಧಾರಣವಾದ ಭಕ್ತಿಯುತ ಜೀವನ ಚರಿತೆಯನ್ನು. ಅಂತೆಯೆ ಪರವೆಯ ಪಾತ್ರಬರುವದು ಪೋಷಕವಾಗಿ ಮಾತ್ರ. ನಾಯಿಕೆಯ ಸ್ಥಾನ ಅವಳಾಕ್ರಮಿಸಬಹುದಾದರೂ ಈ

ಕಾವ್ಯದಲ್ಲಿ ಪ್ರಧಾನತೆ ನಾಯಕನಿಗೇ ಮೀಸಲಾಗಿರುವದರಿಂದ ಅವಳು ಕೆಲವೇ ಸನ್ನಿವೇಶಗಳಲ್ಲಿ ಮಾತ್ರ ಕಾಣಿಸಿಕೊಂಡು ಮಿಂಚಿ ಮಾಯವಾಗುತ್ತಾಳೆ. ಆದರೂ ಹರಿಹರದೇವನ ಜಾಣ್ಮೆಯಿಂದಾಗಿ ಕಲಾಪ್ರೌಢಿಮೆಯಿಂದಾಗಿ, ಶಾಂತ ಸುರಮ್ಯ ಸೌಮ್ಯ ಮೂರ್ತಿಯಾಗಿ ಓದುಗರ ಕಂಗಳೆದುರು ನಲಿದು, ಹೃದಯ ಭಿತ್ತಿಯಲ್ಲಿ ಮೂಡಿ ನಿಲ್ಲುತ್ತಾಳೆ. ಶರಣರ ಸರೋರುಹಸುರಚರಣಭೃಂಗಾಯಮಾನಳಾಗಿ ವಿರಾಜಿಸುತ್ತಾಳೆ.

ಅನಂತಬುರ್ಲಿ.

ಬೆಳಗಾವಿ

[ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಾಳಕೊಪ್ಪದ ಹತ್ತಿರ ಈಗ ಹಳೆಯ ಹಳ್ಳಿಯಾಗಿ ಉಳಿದಿರುವ ಹಿಂದೊಮ್ಮೆ ಕರ್ಣಾಟಕದ ರಾಜಧಾನಿ ಎನಿಸಿದ್ದ ಬೆಳಗಾವಿಯನ್ನು ಸಂದರ್ಶಿಸಿದಾಗ ರಚಿತವಾದದ್ದು].

ಕರ್ಣಾಟಸಾಮ್ರಾಜ್ಯದೈಸಿರಿಯ ಶ್ರೀ ನಿಲಯೆ,
ಸಕಲ ವಿದ್ಯಾವಾಸೆ, ಸರ್ವ ಸಂಪದ್‌ಭರಿತೆ,
ಸುಗುಣಗಣಸದ್ಮೆ,—ಎಂದೆನಿಪ ಔನ್ನತ್ಯದಿಂ
ಬೆಳಗಿರ್ದ ಬೆಳಗಾವಿ, ಕನ್ನಡದ ಸಿರಿಯ ಕರು
ವಾಗಿರ್ದ ಓ ವೃದ್ಧ ತಾಪಸಿಯೆ, ನಿನಗೇಕೆ
ಇಂದು ಈ ವೈಧವ್ಯವೇದನೆಯು ?
ಹಾರುತಿದೆ
ಶತಮಾನದಾಚೆಗಳ ಕಾಲಗಬ್ಬವ ನುಗ್ಗಿ
ಮನವು, ನಿನ್ನತುಲತರ ವೈಭವದ ದೈವ ಸಂ-
ದರ್ಶನದ ದಿವ್ಯಾಮೃತವ ಬಯಸಿ. ನೀನಂದು,
ಸುಕಲಾಕಲಾಪಕಲ್ಪಾವನಿಜವೆನಿಪಂದು,
ಕಬ್ಬಿಗರು, ಗಾಯಕರು, ವಾದಿಗಳು, ವಾಗ್ಮಿಗಳು ;
ಕಲ್ಲಿನಲಿ ಕಲೆಯ ಬಲೆಯನು ನೆಯ್ದ ಶಿಲ್ಪಿಗಳು ;
ಯೋಗಿಗಳು, ಭೋಗಿಗಳು ತ್ಯಾಗಿಗಳು, ಧಾರ್ಮಿಕರು ;
ಸರ್ವ ಧರ್ಮಗಳೊಳಂ ಏಕತ್ವಮಂ ಕಂಡು
ಬೋಧಿಸಿದ, ಪೋಷಿಸಿದ, ತತ್ತ್ವೋಪದೇಶಕರು ;
ಬೀರದಲಿ, ಶೌರ್ಯದಲಿ ವೀರರೌದಾರ್ಯದಲಿ,
ನಿನ್ನ ಗರ್ಭದಿನಲ್ತೆ ಮೂಡಿದರು, ಹಾಡಿದರು,
ಕಟ್ಟಿದರು ಕೆಚ್ಚೆದೆಯ ಸಾಮ್ರಾಜ್ಯಮಂ ; ನೀಡಿದರು
ರಾಜಧಾನಿಯ ರಾಜಪಟ್ಟಮಂ ನಿನಗೆ ; ಮೇಣ್
ಜಡಕೆ ಚೈತನ್ಯವನು, ಜಗಕೆ ಸಿರಿಕಾಣ್ಕೆಯನು
ಹಳೆಯಬೀಡಿನ ಹೊಯ್ಸಳೇಶ್ವರನ ಚರಣದಲಿ,
ಕೇಶವನ ಬೇಲೂರಿನಾಲಯದಿ, ಕಂಡರಿಸಿ ;

ಮೃಣ್ಮಯ ಶಿಲಾತಲಕೆ, ಚಿನ್ಮಯ ಕಲಾದೀಕ್ಷೆ
ಯನ್ನೆರೆದ ಮಲ್ಲಿತಮ್ಮಾದಿ ಮಹಿಮ ರಸಋಷಿ
ಗಳಿಗೆ ನವನವೋನ್ಮೇಷನದ ಶಿಲ್ಪಪ್ರತಿಭೆ
ಯನ್ನಿತ್ತೆ ನಿನ್ನಮಲ ಮೊಲೆವಾಲ ಬಲದಿಂದ.
ನೀ ಪೆತ್ತ ವಿಶ್ವವಿದ್ಯಾಲಯದಿ, ಮೃತ್‌ಪ್ರಜ್ಞೆ
ಸಂಮಥಿಸಿ ಚಿತ್‌ಪ್ರಜ್ಞೆಯನು ಮೀರಿ, ಸ್ವೈವೇದ್ಯ
ವಾದುದೀ ವಿಶ್ವಕ್ಕೆ ವಿಶ್ವಪ್ರಜ್ಞೆಯು ಮಿಂಚಿ.
ಕ್ಷುದ್ರತೆಗೆ ತಾವಿಲ್ಲ, ದೌರ್ಬಲ್ಯಕೆಡೆಯಿಲ್ಲ,
ಶಕ್ತಿಪಿಂಡವೆ ಎಲ್ಲ—ಎನೆ ತೇಜದಿಂ ಮೆರೆದೆ.
ಸಂಸ್ಕೃತಿಯ ಬೀಡಾದೆ, ವಿದ್ಯೆಯಾಗರವಾದೆ,
ಪಸರಿಸಿದೆ ಪಯಯಶಃ ಶ್ರೀಯಮೃತ ರಸಮಂ
ಪೂರ್ಣವಿಕಸಿತ ಕುಸುಮ, ಸೂಸುತಿಹ ಸುರಭಿಯೋಲ್.
ವಿಯನ್ಮಂಡಲಸ್ಥಿತ ದಶಸಹಸ್ರ ಧೀಧಿತಿ
ಯಂತೆ, ಶತಶತ ಸಹಸ್ರ ವಿನ್ಯಾಸದಿಂ ಪೆಣೆದು
ಪರ್ಬಿದುದು ಕೀರ್ತಿಲತೆ ದಿಗ್ವಲಯಮಂ, ನಿನ್ನ.
ಆ ಬೀರವಾ ಬಿಜ್ಜೆಯಾ ಕೀರ್ತಿಯಾಯಶಂ
ಏನಾದುದಿಂದು ? ಮುಳುಗಿದನೆ ಬಾಳ ಪೂರ್ಣೇಂದು ?
ರಾಹು ಕೇತುಗಳು ಮೇಣ್ ಬೆನ್ನಟ್ಟಿ ನುಂಗಿದರೊ !
ಆರ ಪಾಪಕೆ ನೊಂದು, ಆರ ಶಾಪದಿ ಬೆಂದು,
ನೀನಿಂದು ಅಡಗಿರುವೆ, ಗರಹೊಡೆದ ಸಿರಿಯಂತೆ,
ಉರಿಯಗಿದ ವನದಂತೆ ಇಂತು ?

ಅಳಿದುಳಿದ, ಓ
ತಾಯೆ, ಪಳೆಯ ಉಳಿಮೆಗಳುಸಿರು ಕಣ್ಬೊಕ್ಕೊಡಂ
ಮನವು ಮುಗ್ಗರಿಸುವುದು, ಕುರುಡಹುದು ಕಲ್ಪನೆಯು ;
ನಿನ್ನಂದಿನಾ ನನಸು, ನಮ್ಮೆದೆಯ ಕನಸಿಗೂ
ನಿಲುಕದೌ. ಕಮಲಾಕರೆಯ ತಟದಿ ನಿಶ್ಚಿಂತ
ನೀರವದ ಚಿರನಿದ್ರೆಯೊಳ್ ನಿಂದ ತ್ರಿಕೂಟ
ಬಸವೇಶ್ವರಾಲಯದ ಓ ಭದ್ರವೃಷಭೇಂದ್ರ !
ಎನಿತುಕಾಲದಿ ನಿಂತು, ಮನ್ಮಥಾರಿಯ ಮುಂದೆ

ಮೌನತಪದಿಂದಿರುವೆ? ಆರಿತ್ತರೈ ನಿನಗೆ
ಈ ಬೃಹದ್ ರೂಪಕ್ಕೆ, ಈ ಮಹತ್ ಸಂಚಾರಮನ್?
'ಹಿಂದಿನಾ ವೈಭವದ ಸಂಸ್ಕೃತಿಯ ಭಾರದಿಂ
ಬಿರಿಯುತಿಹೆಯೇನು? ಒಂದೆರಡು ಸವಿನೆನಪುಗಳ
ನೊರೆಯಲಾರೆಯ ನೀನು?' ಆಃ ಏನದ್ಭುತಂ ಕಣ್
ಅಲುಗಿದುದು, ವೃಷಭ ಮೇಣ್, ನಿಟ್ಟುಸುರಿನೊಡನೊಡನೆ
ಉಸುರ ತೊಡಗಿದುದಿಂತು! "ಕನ್ನಡದ ಕುವರ ಓ
ಏನನೊರೆಯಲಿ ನಾನು ಶೂನ್ಯ ಹೃದಯದಲಿ?
ಮರುಕೊಳಿಸಿ ದುಃಖಮಂ, ತಬ್ಬುತಿದೆ ಹೃದಯಮಂ
ನೂಕುತಿದೆ ಮೂಕತೆಗೆ ಮೌನದಳಲಿನ ಸೆರೆಗೆ,
ಆ ರುಚಿರ ಪುಣ್ಯಸ್ಮರಣೆ; ಹಾ! ಅಚಿರವಾಯ್ತೆ.
ನಂಬುಗೆಯು ಬಡವಾದ ಬಡಮನದ ಜಡರದನು
ನಂಬಲಾರರು ಇಂದು. ಕನ್ನಡಿಗನೆದೆಯಲ್ಲಿ
ಕೆಚ್ಚಿತ್ತು, ನೆಚ್ಚಿತ್ತು ಎಂಬುದನು ಸರ್ವವೂ
ಪ್ರತಿಬಿಂಬಿಸಿತ್ತು. ಎನ್ನ ಇರುವೀ ಆಲಯವು
ಪಾಳುದೇಗುಲವಲ್ಲ. ಅಂದಿದರ ವೈಭವದ
ದರ್ಶನಕೆ, ಬಣ್ಣನೆಗೆ, ಅಹಿರಾಜನಳವಳಿದು
ಭಾರತಿಯು ಬಸವಳಿದಳೈ. ವಿಜಯಯಾತ್ರೋದ್ಯುಕ್ತ
ಭೂಪಾಲನರ್ಚಿಸುವ ಪೂಜೆಯಂ ಕೈಕೊಂಡೆ.
ಮೇಣವಂ ವಿಜಯ ಪ್ರಸೂತ ಪ್ರಜ್ವಲಿತ ಸಿರಿ
ಕಾಂತಿಯಿಂ ಮಗುಳ್ದೈದಿ, ವೈಭವದ ದಿವ್ಯಾಭಿ-
ಷೇಕಮಂ ಎಸಗಿದುದುಮಂ ಕಂಡೆ. ಅನುದಿನವು
ರತ್ನದಾರತಿಯುಂಡೆ; ನಳಿನಮುಖಿ ಪ್ರೇಮದಿಂ
ಮಹರಾಣಿಯಾಕಿರಿವಯದ ಮುಗ್ಧೆ,
ರಾಜಕುವರಿಯು ಅಂದು, ರಾಣಿಯೊಡನೈತಂದು
ಓಡುತೋಡುತೆ ಬಂದು, ಅಪ್ಪುತಿದ್ದಳು ಎನ್ನ
'ಬಸವ ಬಸವಾ' ಎಂದು ತೊದಲು ನುಡಿ ಮಂತ್ರದಿಂ.
ಆ, ಎಳೆಯ ನೇಹದ ಬೆಳಗು, ಬಳೆದ ನವಯೌವನದಿ,
ಕಮಲಪ್ರಿಯ ಕಮಲಿನಿಯನಪ್ಪಿ ಮುತ್ತುವಮುನ್ನ

ಪ್ರತ್ಯೂಷೆಯೊಳ್ ಬಂದು, ಬಲವಂದು ಪೊಡವಟ್ಟು
ನಿಚ್ಚಲುಂ ಅರ್ಚಿಪಳು ಭಕ್ತಿ ಹೃದಯವನಿಟ್ಟು.
ನಿಟ್ಟಿಪಳು ನಿಟ್ಟಾಲಿಯಿಂ ತುಳುಕೆ ಸುಖಜಲಂ.
ಬೇಡುವಳು ಕರ್ಣಾಟಸಾಮ್ರಾಜ್ಯದೇಳ್ಗೆಯಂ
ಚಿರಮಪ್ಪವೋಲ್ ವೀರಕನ್ನೆ. ಆದೊಡೇಂ
ಕಾಲಚಕ್ರದ ಕಠಿನ ವಜ್ರಪದಹತಿಯಿಂದೆ
ನಿಷ್ಠುರದ ಸತ್ಯಪಟ ಬಿಚ್ಚಿದುದು ಸುರುಳಿಯಂ
ಉರುಳುವೋಲ್ ವೈಭವದ ಪುಣ್ಯಾಗ್ನಿ. ತೆಕ್ಕನೆಯೆ
ಬ್ರಹ್ಮಶಕ್ತಿಯು ಮಿಂಚಿ, ಮನದಂಚಿನೊಳ್ ನಿಂದು,
ಮರೆಯಾದ ಸಾಧಕನ ತೆರದಂತೆ, ಅಂದಿನಾ
ದಿನಗಳನು ನೆನೆದು ಚಪ್ಪರಿಸುವೆನು ; ನಿಂದಿಹೆನು
ಮುಂಬರುವ ದಿನಗಳನು ನೆಮ್ಮಿ. ಓ ಕುವರರಿರಾ !
ನಿಮ್ಮೆದೆಯ ಕನ್ನಡದ ಶಕ್ತಿಮಿಂಚಂ ನೆಚ್ಚಿ."—
ಎನುತೆನುತೆ ಮೌನವಾಂತುದು ಬಸವ. ಬಸವನೊಡ
ನೊಡನೆ ಕೊರಲೆತ್ತಿ ಪಳೆಯ ದೇಗುಲಗಳೊಳಗಿರುವ
ಮೂರ್ತಿಗಳು, ಮೂರ್ತಿಗಳು ಮರೆಯಾದ ಶೂನ್ಯಪೀ-
ಠಗಳು ಮೇಣ್ ವೊಳಗಿದುವು.

ಈ ಇರ್ಪುದಿತ್ತ ಕಾಣ್
ಗರುಡಗಂಬದ ಒಡೆಯ ಭೇರುಂಡರಾಜ.
ಒಂದು ಮುಖದಿಂ ನುಂಗಿ, ನೂಕುತಿದೆ ರುಂಡಗಳ
ನಿನ್ನೊಂದು ಮುಖದಿಂ, ಬ್ರಹ್ಮಾಂಡಮಂಡಲವ-
ನೊಳಸೇದಿ, ಸೂಕ್ಷ್ಮರೂಪವನಿತ್ತು ಕಬಳಿಸುತ
ಮತ್ತದಂ ಪ್ರಸವಿಸುವ ತಾಂಡವನ ನಾಟ್ಯಲೀ-
ಲಾಕರ ವಿಭೂತಿ ವಿಭ್ರಮದಂತೆ. ಪೇಳುತಿದೆ
ಮೇಲಿರುವ ಕಂಬವದು, ನೀಲಪಟದೊಳ್ ಬರೆದ
ವರ್ಣಶಿಲ್ಪಿಯ ವಿವಿಧ ವಿನ್ಯಾಸಮಂ ತೋರಿ ;
"ನನ್ನ ಸೌಂದರ್ಯಮುಂ ತೋರ್ದ್ದುದೈ, ಸೋರ್ದುದೈ,
ಇಂತೆಯೇ ಸಂಜೆವೆಣ್ಣಿನ ಸಿರಿಯ ಸೌಂದರ್ಯ
ದೋಲ್ "—ಎಂದು.

ಏನಿದೇನಿದು ಎತ್ತ! ಕಾಲಿಟ್ಟ
ಕಡೆಗಳಲಿ ತೊಡರುತಿವೆ ಕಲ್ಲುಗಳು; ಅಲ್ಲಲ್ಲ
ಶಾಸನಗಳುಂ ಸುತ್ತ. ಸಂಕೇತದೂತರಿರಾ,
"ನಮಸ್ತುಂಗ ಶಿರಶ್ಚುಂಬಿ . . ."
ಲಿಪಿಶಿಲಾವರ್ಯರಿರಾ! ಏನನೊರೆಯುತಿಲಿಹಿರಿ!
ಕಾಲತೆರೆಯನು ಹರಿದು, ಆವ ಔದಾರ್ಯವನು
ಆವ ವಿಕ್ರಮ ವಿಸ್ಫುಲಿಂಗ ತೇಜದ ಬಿಸಿಯ
ತೆರೆದು ತೋರುತಲಿಹಿರಿ! ಮೇಲೆಳ್ದು ಬನ್ನಿಂ
ಬಿಸಿಯುಸಿರ ತಿದಿಯೊತ್ತಿ, ಬತ್ತಿದೆದೆಗಳ ತುಂಬಿ
ಅಭಿಮಾನದಗ್ನಿಯಿಂ, ಅಧಿಕತರ ಶಕ್ತಿಯಿಂ.
ಅಂದಿನಾ ಅನುಭವವು, ಇಂದೆಮಗೆ ದೀವಿಗೆಯು.
ದೈತ್ಯರಾ ಪೆಗಲೇರ್ದ ಕುಬ್ಜರುಂ, ದೈತ್ಯರಿಂ
ಮೇಲಲ್ತೆ. ನಿನ್ನಂದಿನಾ ದೈತ್ಯಶಕ್ತಿ, ಎಮ
ಗಿಂದು ಪೆಗಲಾಗಿ ಬರ್ಕೆ. ಗತಕಾಲದಿತಿಹಾಸ
ಗರ್ಭಮಂ ತಡವುತಲಿ, ಸಂಪ್ರತಿಯ ಸುಸ್ಥೈರ್ಯ
ಸ್ತನ್ಯಪಾನದಿನಿಂದು, ಮುಂಬರುವ ದಿನಗಳನು
ಹಾರೈಸಿ, ಕೊರಲೆತ್ತಿ, ಕರವೆತ್ತಿ, ಮನವೆತ್ತಿ
ದುಡಿಯುವುದೆ ದೇಶದೇಳ್ಗೆಯ ಮರ್ಮ. ಇದುವಲ್ತೆ
ಜೀವಿತದ ಧರ್ಮ; ಅದಕಾಗಿ ಬೇಡುವೆನು
ದಾನಗೈ ಓ ತಾಯೆ ಬೆಳಗಾವಿ; ನಿನ್ನಂದಿ-
ನಾ ಶಕ್ತಿ ಪಸರಿಸಲಿ ಧಮನಿ ಧಮನಿಗಳಲ್ಲಿ
ಅವತರಿಸಿ ಮೈದೋರಿ ನವರೂಪದಿಂ ಮೆರೆದು,
ಕನ್ನಡಕೆ, ಭಾರತಕೆ, ವಿಶ್ವಕ್ಕೆ ಕಲ್ಯಾಣ
ಮಪ್ಪಂತೆವೋಲ್. ವಿಶ್ವಮಾತೆಯೆ ಶರಣು;
ಭಾರತಾಂಬೆಯು ಬಾಳ್ಗೆ; ಕನ್ನಡಾಂಬೆಯು ಏಳ್ಗೆ;

'ಸಿರಿಗನ್ನಡಂ ಗೆಲ್ಗೆ.'

ಹೆಚ್. ತಿಪ್ಪಯ್ಯ

ಕಾವ್ಯಾವಲೋಕನ

ಗಾಳಿಗುದುರಿ—ಲೇಖಕರು : ಬಿ. ಆರ್. ವಾಡಪ್ಪಿ ; ಪ್ರಕಾಶಕರು : ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ ; ಬೆಲೆ, ರೂ. ೧-೪-೦.

ಇದು ಹನ್ನೆರಡು "ಲಲಿತ ಪ್ರಬಂಧ" ಗಳ ಸಂಕಲನ; ಹೆಸರು 'ಗಾಳಿಗುದುರಿ.' ಇಟ್ಟಿರುವ ಹೆಸರಿನಲ್ಲಿ, 'ಲಲಿತ ಪ್ರಬಂಧ' ಎಂದು ನಿರ್ದೇಶಿಸಿರುವಲ್ಲಿ ಇವುಗಳ ಸ್ವಭಾವ ವ್ಯಕ್ತವಾಗುತ್ತದೆ. ಈ ಪುಸ್ತಕಕ್ಕೆ ಶ್ರೀಯುತ ಗೋಕಾಕರು ಬಹು ಮಟ್ಟಿಗೆ ವಿಮರ್ಶಾತ್ಮಕ ಎನ್ನಬಹುದಾದ ಮುನ್ನುಡಿಯನ್ನು ಬರೆದಿದ್ದಾರೆ.

ಇವರ ಪ್ರಬಂಧಗಳಲ್ಲೇ ಒಂದೆಡೆ "ಬೇಸರವು ನನ್ನನ್ನು ಆವರಿಸಿತೆಂದರೆ ನಾನೇ ನಾನಾಗಿ ವಿರಾಮ ಖುರ್ಚಿಯಲ್ಲಿ ಮಂಡಿಸುತ್ತೇನೆ . . . ಗಂಟೆಗಳ ಗಂಟೆವರೆಗೆ ಹಿಂದಿನ ನೆನಹುಗಳನ್ನು ನೆನೆಯುವುದು : ಮನಸ್ಸು ವಾಯುವಿನಂತೆ ವಿಹರಿಸುತ್ತ ಬೇರೆ ಬೇರೆ ದಿವ್ಯಪ್ರಪಂಚಗಳನ್ನು ಕಾಣುತ್ತದೆ. ('ಬೇಸರ') : "ವಿಚಾರದ ಎಳೆ ಎಳೆದಂತೆ ಸೂಕ್ಷ್ಮವಾಗಿ ಬರುತ್ತಲೇ ಇರುತ್ತದೆ" '(ಚಹ ಬಿಡಬೇಕೆಂದಾಗ)'—ಎಂಬ ಮಾತುಗಳು ಕಲ್ಪನೆಯ ಮತ್ತು ವಿಚಾರದ ವಿಲಾಸವಾದ ಪ್ರಬಂಧದ ಉಗಮವನ್ನು ಸೂಕ್ಷ್ಮವಾಗಿ ನಿರೂಪಿಸುತ್ತವೆ!

ಈ ಲಲಿತ ಪ್ರಬಂಧಗಳ ಉದ್ದಕ್ಕೂ ಪ್ರಧಾನವಾದ ಗುಣ ಲಾಲಿತ್ಯ. ನವುರಾದ ನಗೆಗಾರಿಕೆಯಲ್ಲಿ ವಿಡಂಬನೆ ಕೆಲಸಮಾಡಿದೆ. 'ಬರೆಹಗಾರನ ಸ್ಕಂಧಪುರಾಣ'ದಲ್ಲಿ ಸಾಹಿತಿ ಮತ್ತು ವಿಮರ್ಶಕರನ್ನು ಕುರಿತು, 'ಗಡಿಯಾರ' ಎಂಬುದರಲ್ಲಿ ಕಾಲೇಜು ಅಧ್ಯಾಪಕರನ್ನು ಕುರಿತು, 'ಚಟ' ಎಂಬುದರಲ್ಲಿ ಕಾಲೇಜು ವಿದ್ಯಾರ್ಥಿಗಳನ್ನು ಕುರಿತು ವಿಡಂಬನೆ ನಡೆದಿದೆ! 'ಬರಹಗಾರನ ಸ್ಕಂಧಪುರಾಣ' 'ಚಹಬಿಡಬೇಕೆಂದಾಗ,' 'ಯಶಿ-ಅಪಯಶ' ಇವುಗಳು ಕಥೆಯ ಚೌಕಟ್ಟಿನಲ್ಲಿ ಸೇರಿಕೊಂಡಿವೆ! "ಪ್ರಚಲಿತ ಯುಗದಲ್ಲಿ ಮನುಷ್ಯ ಅನ್ನ ನೀರು ಬಿಟ್ಟು ಬದುಕಬಹುದು, ಆದರೆ ಗಡಿಯಾರ ಬಿಟ್ಟು ಬದುಕಲಾರ". . . "ಇಪ್ಪತ್ತನೆಯ ಶತಮಾನದಲ್ಲಿ ಅನ್ನ ಬಿಟ್ಟು ಇರಬಹುದು, ವೃತ್ತ ಪತ್ರಿಕೆ ಬಿಟ್ಟು ಇರಲಾರ" ಎಂಬ ಅತಿವ್ಯಾಪ್ತಿಯಾದ ಸೂತ್ರಗಳನ್ನು ನಾವು ಪ್ರಬಂಧದ ಉದ್ದಕ್ಕೂ ಹರಿದುಬಂದಿರುವ ಮನೋಭಾವದಿಂದ ನೋಡಬೇಕು!

ಈ ಪ್ರಬಂಧಗಳ ಶೈಲಿಯಲ್ಲಿ ಓದುಗನನ್ನು ಆತ್ಮೀಯನನ್ನಾಗಿಸಿಕೊಂಡು, ಹೇಳುವ ವಿಚಾರದತ್ತ ಅವನು ಕಿವಿಗೊಡುವಂತೆ ಮಾಡುವ ಗುಣವಿದೆ. ವಿಚಾರಗಳ,

ಕಲ್ಪನೆಗಳ, ವಿಲಾಸದೊಂದಿಗೆ ವಿಡಂಬನೆಯನ್ನು ಅಡಗಿಸಿಕೊಂಡಿರುವ ನವುರಾದ ನಗೆಗಾರಿಕೆ, ವಿಮರ್ಶಾತ್ಮಕವಾದ ಸೂಕ್ಷ್ಮದೃಷ್ಟಿ, ಸಮಯೋಚಿತವಾಗಿ ಸುಭಾಷಿತಗಳನ್ನು ಅಳವಡಿಸಿಕೊಂಡಿರುವ ಜಾಣ್ಮೆ, ವ್ಯಕ್ತಿಯ ಪ್ರತೀಕದಂತಿರುವ ಇವುಗಳ ವಿಧಾನ, ಈ ಗುಣಗಳಿಂದ ಈ ಪ್ರಬಂಧಗಳು ಲೇಖಕರ ಕಲಾಪ್ರಜ್ಞೆಗೆ, ಬಹುಶ್ರುತಿಗೆ ನಿದರ್ಶನವಾಗಿವೆ.

ಕನ್ನಡಸಾಹಿತ್ಯದಲ್ಲಿ ಪ್ರಬಂಧಗಳು ವಿರಳವಾಗಿರುವ ಈ ಕಾಲದಲ್ಲಿ ಇಂತಹ ಕೃತಿಗಳನ್ನು ಶ್ರೀ ವಾಡಪ್ಪಿಯವರ ಸರಸಲೇಖನಿ ನೀಡಲಿ.

***

ದೇವತೆಗಳು ನಕ್ಕಾಗ—ಲೇಖಕರು : ವೈ. ಎಂ. ಷಣ್ಮುಖಯ್ಯ ; ಪ್ರಕಾಶಕರು : ಶಾರದಾ ಪ್ರಕಟನಾಲಯ, ಬೆಂಗಳೂರು ; ಬೆಲೆ, ರೂ. ೧-೪-೦.

ಕನ್ನಡದಲ್ಲಿ ಇಂದು ಸಣ್ಣ ಕಥೆ ಕಾದಂಬರಿಗಳು ಹೇರಳವಾಗಿ ಹೊರಬೀಳುತ್ತಿರುವುದೊಂದು ಶುಭಸೂಚನೆ. ಆದರೆ ಇವುಗಳಲ್ಲಿ ಕಲಾದೃಷ್ಟಿಯಿಂದ ನಿಜವಾದ ಕೃತಿಗಳು ವಿರಳ.

'ದೇವತೆಗಳು ನಕ್ಕಾಗ' ಎಂಬುದು ಶ್ರೀ ಷಣ್ಮುಖಯ್ಯನವರ ಐದನೆಯ, ಕಥಾಸಂಕಲನ. ಇದರಲ್ಲಿ ಹತ್ತು ಕತೆಗಳಿವೆ.

'ದೇವತೆಗಳು ನಕ್ಕಾಗ' ಎಂಬ ಮೊದಲನೆಯ ಕತೆ ಅದರ ಹೆಸರಿನಿಂದ ಮೊದಲು ಓದುಗರಲ್ಲಿ ಏನೇನೋ ಕಲ್ಪನೆಗಳನ್ನು ಸೃಜಿಸುತ್ತದೆ. ಅದರ ಆರಂಭ ನಮ್ಮ ಕುತೂಹಲವನ್ನು ಕೆರಳಿಸುವುದರ ಜೊತೆಗೆ ಹೊಸ ಆಸೆಯೊಂದನ್ನು ಬಿತ್ತುತ್ತದೆ. ಆದರೆ ಕತೆಯನ್ನು ಓದಿ ಮುಗಿಸಿದಾಗ ತುಂಬ ನಿರಾಶೆಯಾಗುತ್ತದೆ.

ಯಾವ ಕಥೆಗೇ ಆಗಲಿ ಒಂದು ಉದ್ದೇಶವಿರಲೇಬೇಕು, ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈ ಕತೆ ಮೊದಮೊದಲು ಓದುಗನ ಮನಸ್ಸನ್ನು ಸೆರೆಗೈದರೂ ಮುಂದೆ ಮುಂದೆ ಲಘುವಿನೋದದಲ್ಲೇ ಮುಗಿದು ಯಾವ ಉದ್ದೇಶವನ್ನು ಪ್ರತಿಪಾದಿಸದೆ, ಅಥವ ತೆರೆದು ತೋರದೆ ಹೋಗುತ್ತದೆ. ಅಲ್ಲಲ್ಲಿ ಸದ್ಯದ ಜೀವನದ ವಿಡಂಬನೆಗೆ ತೊಡಗಿರುವಂತೆ ಕಂಡರೂ, ಅದು ಅಲ್ಲಿಯೇ ಮುಗಿದು, ಗಣಪತಿ ಮತ್ತು ವೃಷಭರಿಗೆ ನಡೆಯುವ ಹುರುಳಿಲ್ಲದ ಲಘುಸಂಭಾಷಣೆಯಲ್ಲಿ ಪರ್ಯವಸಾನವಾಗುತ್ತದೆ. ಈ ಕತೆಯ ಕಡೆಯಲ್ಲಿ "ದೇವತೆಗಳು ನಕ್ಕಾಗ ಹೀಗೂ ಆಗಬಹುದಲ್ಲವೆ ?" ಎಂಬ ಮಾತಿಗೂ ಇಡೀ ಕತೆಗೂ ಏನುಸಂಬಂಧವಿರುವುದೋ ತಿಳಿಯದು !

ಗಮನಿಸಬೇಕಾದ ಇನ್ನೊಂದು ಕತೆ 'ವೈದ್ಯ ಮತ್ತು ಅವನ ರೋಗಿ' ಎಂಬುದು. ತನ್ನಲ್ಲಿಗೆ ಚಿಕಿತ್ಸೆಗಾಗಿ ಬಂದ ರೋಗಿಯೊಬ್ಬಳನ್ನು ಗುಣಮುಖಳನ್ನಾಗಿ ಮಾಡಿ, ಆ ಚೆಲುವೆಯ ಒಲವಿಗಾಗಿ ಕುದಿದು, ಕಡೆಗೆ ನಿರಾಶನಾದ ವೈದ್ಯನ ಮನಸ್ಸಿನ ಹೋರಾಟವನ್ನು ಚಿತ್ರಿಸಲು ಇದರಲ್ಲಿ ಪ್ರಯತ್ನ ನಡೆದಿದೆ. ಮಾನವ ಮನಸ್ಸಿನ ಹೋರಾಟದ ಚಿತ್ರಣಕ್ಕೆ ಈ ಕತೆಯ ವಸ್ತು ಸೊಗಸಾದುದು. ಆದರೆ ವೈದ್ಯವೃತ್ತಿಯ ಅನುಭವಗಳನ್ನು ಕಲ್ಪಿಸಿಕೊಂಡು ಚಿತ್ರಿಸಿರುವುದರಿಂದ ಕತೆಗೆ ನ್ಯೂನತೆ ಒದಗಿದೆ. ಈ ಕತೆಯನ್ನು ಬರೆಯುವ ಮುನ್ನ ವೈದ್ಯರೊಡನೆ ಕೊಂಚ ಪರ್ಯಾಲೋಚಿಸಿದ್ದರೆ ಚೆನ್ನಾಗಿತ್ತು. ಏಕೆಂದರೆ ಅನುಭವದೂರವಾದ ವಿಷಯಗಳನ್ನು ಚಿತ್ರಿಸುವಾಗ ಲೇಖಕ, ಆ ಅನುಭವಗಳನ್ನು ಪಡೆದವರಿಂದ ತಿಳಿದುಕೊಳ್ಳಬೇಕು. ಇಲ್ಲವೆ ತಾವೇ ಅಭ್ಯಾಸದ ಮೂಲಕ ತಿಳಿದುಕೊಳ್ಳಬೇಕು. ಅನುಭವ ದೂರವಾದ ವಿಷಯಗಳನ್ನು ಬರಿಯ ಕಲ್ಪನೆಯಿಂದ ಚಿತ್ರಿಸಲು ಹೊರಟರೆ ವಾಸ್ತವಸತ್ಯಕ್ಕೆ ಎಂತಹ ಅನ್ಯಾಯವಾಗುತ್ತದೆ! ದೇಹದ ಸಮಸ್ತ ವ್ಯಾಪಾರಗಳ ವಿವರವನ್ನು ಅಭ್ಯಾಸಿಸಿರುವ ವೈದ್ಯ, ಬಸುರಿಯಾದ ಹೆಣ್ಣುಮಗಳ ಗರ್ಭವನ್ನು 'ಏನೋ ಗಂಟು; ಕ್ಯಾನ್ಸರ್ ಹುಣ್ಣೇ ಇರಬೇಕು, ಆಪರೇಷನ್ ಮೂಲಕ ತೆಗೆದುಹಾಕಬೇಕು—ಎಂದುಕೊಳ್ಳುವಷ್ಟು ಬೆಪ್ಪನೇ? ಈ ಕತೆಯನ್ನು ವೈದ್ಯರಾಗಿರುವವರೇ ಓದಿ ತಮ್ಮ ಅಭಿಪ್ರಾಯವನ್ನು ಸೂಚಿಸಲಿ!

'ಭದ್ರಶೆಟ್ಟಿಯ ಬದುಕು,' 'ದುಡಿಮೆ,' 'ಮೋಡಿ ಆಟ' ಇವುಗಳಲ್ಲಿ ಕತೆಯ ಗುಣ ಅಲ್ಲಲ್ಲಿ ಮಿಂಚಿ ಮಾಯವಾಗುತ್ತದೆ. 'ಗುಂಡಸಂಪನ್ನ,' 'ಶಂಕರಯ್ಯನ ಸಂಸಾರ,' 'ಮುತ್ತೈದೆ ಪೂಜೆ'—ಇವು ಓದಲರ್ಹವಾಗಿವೆ. 'ಎಲ್ಲಿ ಹೋದನ್ರೀ ನಮ್ಮ ಹುಡುಗ?' 'ಮಾನವರ ನ್ಯಾಯ'—ಇವು ಈ ಸಂಕಲನದಲ್ಲಿ ಚೆನ್ನಾಗಿರುವ ಕತೆಗಳು.

ಈ ಲೇಖಕರಿಂದ ಉತ್ತಮವಾದ ಕತೆಗಳನ್ನು ನಿರೀಕ್ಷಿಸಬಹುದು.

***

ಸೌಭಾಗ್ಯವತಿ (ಸಾಮಾಜಿಕ ಕಾದಂಬರಿ)—ಎಂ. ವಿ. ಸಿತಾರಾಮಯ್ಯ; ಬೆಲೆ, ರೂ. ೧-೧೨-೦.

ತಮ್ಮ ಹಲವಾರು ಕೃತಿಗಳಿಂದ ಕನ್ನಡಿಗರಿಗೆ ಪರಿಚಿತರಾಗಿರುವ ಶ್ರೀ ಎಂ. ವಿ. ಸೀತಾರಾಮಯ್ಯನವರ ಕಾದಂಬರಿ ಇದು. ೧೯೪೨ರಲ್ಲಿ ಪ್ರಕಟವಾದ 'ಭಾಗ್ಯಲಕ್ಷ್ಮಿ' ಕಾದಂಬರಿಯ ಉತ್ತರ ಕಥೆಯಂತಿರುವ ಈ ಕಾದಂಬರಿ ತನಗೆ ತಾನೇ ಸ್ವಯಂಪೂರ್ಣವಾಗಿ ನಿಲ್ಲಬಲ್ಲುದು.

'ಭಾಗ್ಯಲಕ್ಷ್ಮಿ' ಕಾದಂಬರಿಯಲ್ಲಿ ನಾರಾಯಣಮೂರ್ತಿ ತನ್ನ ಹೆಂಡತಿ ಜಯಲಕ್ಷ್ಮಿಯನ್ನು ತಿರಸ್ಕರಿಸಿದುದಕ್ಕೆ ಅವಳ ಕಪ್ಪುಬಣ್ಣ ಕಾರಣವಾದರೆ, ಇಲ್ಲಿ ಕೃಷ್ಣಮೂರ್ತಿ ಭಾಗ್ಯಲಕ್ಷ್ಮಿಯನ್ನು ತಿರಸ್ಕರಿಸಿದುದಕ್ಕೆ ಅವಳ 'ಸುಸಂಸ್ಕೃತ' ನಡತೆ ಕಾರಣವಾಯಿತು. ಜುಟ್ಟುಹೋಗಿ ತಲೆಯ ಮೇಲೆ ಕ್ರಾಪು ಮಾಡುವ ಹೊಸ ಕಾಲ ಅದು. ಕೃಷ್ಣಮೂರ್ತಿ ತನ್ನ ಹೆಂಡತಿ ಆದರ್ಶದ ಭೋಗಲಕ್ಷ್ಮಿಯಾಗದೆ, ಪೌರಾಣಿಕ ಯುಗದ ಪತಿವ್ರತೆಯಾದಳೆಂಬ ಕಾರಣದಿಂದ, ಬೇರೆಯವಳಲ್ಲಿ ಮೋಹಗೊಂಡು, ನಿರಾಶನಾಗಿ ಕಡೆಗೆ ಮದ್ರಾಸಿನ ಮೋಹಿನಿಯೊಬ್ಬಳನ್ನು ಗಂಟು ಹಾಕಿಕೊಂಡು ಸಂಸಾರ ನಡೆಯಿಸುತ್ತಾನೆ. ಸುಮಾರು ಹತ್ತು ವರ್ಷ ಕಾದು, ಅನಂತರ ಭಾಗ್ಯಲಕ್ಷ್ಮಿ ಮದ್ರಾಸಿಗೆ ಹೋಗಿ ತನ್ನ ಗಂಡನನ್ನು ಒಲಿದು ಗೆಲ್ಲುವ ಸಾಹಸದಲ್ಲಿ ಜಯಶೀಲಳಾಗಿ ಬರುತ್ತಾಳೆ. ಇದು ಸ್ಥೂಲವಾಗಿ ಕಾದಂಬರಿಯ ಕಥೆ.

ಈ ಕತೆ ಸಂಪೂರ್ಣ ಕಾಲ್ಪನಿಕ ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ. ಕತೆ ಕಲ್ಪನೆಯೋ, ವಾಸ್ತವವೋ ಓದುಗನಿಗೆ ಮುಖ್ಯವಲ್ಲ. ಅದು ನಮ್ಮ ಜೀವನದ್ದೇ ಎಂಬಂತೆ ತೋರಿ ನಮ್ಮ ಮೇಲೆ ಮಾಡುವ ಪರಿಣಾಮ ಮುಖ್ಯ. ಈ ಕತೆಯು ಸುಮಾರು ಅರ್ಧಭಾಗದ ವರೆಗೂ ಲೇಖಕರು ಅದೃಶ್ಯರಾಗಿ ಕತೆಯನ್ನು ಚಿತ್ರಿಸಿ ೬೫ ನೇ ಪುಟದ 'ವಿವರಣೆ' ಎಂಬಲ್ಲಿ ತಾವು ಕಾಣಿಸಿಕೊಂಡು, ಕತೆಯೊಡನೆ ತಮ್ಮ ಪಾತ್ರವನ್ನು ಸಂಬಂಧಿಸಿಕೊಂಡು, "ಈ ಕತೆಯಲ್ಲಿ ಇದುವರೆಗೂ ಹೇಳಿರುವ ಸಂಗತಿಗಳಲ್ಲಿ ಶಾಮಣ್ಣನಿಂದ ಸ್ವಲ್ಪ, ರುಕ್ಮಿಣಿಯಿಂದ ಕೊಂಚ, ನಾರಾಯಣ ಮೂರ್ತಿಗಳಿಂದ ಇನ್ನಷ್ಟು ಕೇವಲ ಪ್ರಾಸ್ತವಿಕವಾಗಿ ತಿಳಿಯಬಂದಿತು" (ಪು. ೬೭) ಎಂದು ಹೇಳಿ, ಮತ್ತೆ "ಕೃಷ್ಣಸ್ವಾಮಿಯ ಸಂಬಂಧವಾಗಿ ಈ ರೀತಿ ತಿಳಿದುಬಂದ ಸಂಗತಿಗಳನ್ನು ಈ ವರೆಗೆ ಬಣ್ಣಿಸಿದ್ದೇನೆ, ಆ ಮೇಲೆ ಹಲವು ವರ್ಷಗಳ ಅಂತರದಲ್ಲಿ ನಾನು ಕಂಡು ಕೇಳಿದ ಸಂಗತಿಗಳೇ ಮುಂದಿನ ಕತೆ (ಪುಟ ೯೬) ಎಂಬ ಹೇಳಿಕೆ ಗಳು ಮೊದಲಿನಿಂದ ಅಲ್ಲಿಯವರೆಗೂ ಒಂದು ಗತಿಯಲ್ಲಿ ತೇಲಿಕೊಂಡು ಬಂದ ಓದುಗನನ್ನು ತಟಕ್ಕನೆ ನಿಲ್ಲಿಸುತ್ತವೆ. ಅದುವರೆಗೂ ಸೂತ್ರಧಾರರಾದ ಲೇಖಕರು ತಟಕ್ಕನೆ ಬೇರೊಬ್ಬ ಪಾತ್ರಧಾರರೂ ಆಗುವುದು ಅಷ್ಟೇನೂ ಹಿತವಾಗಿಲ್ಲವೆಂದು ಹೇಳಬೇಕಾಗುತ್ತದೆ. ಅದರ ಬದಲು ಬೇರೊಂದು ಪಾತ್ರವನ್ನು—ಅಷ್ಟು ಅನಿವಾರ್ಯ ಎನಿಸಿದ್ದರೆ—ಸೃಜಿಸಿ ಕಾದಂಬರಿಯ ಸಮರೂಪತೆಯನ್ನು ಕಾಯಬಹುದಾಗಿತ್ತು ಎನಿಸುತ್ತದೆ. ಈ ಬದಲಾವಣೆಯಿಂದ ಕಾದಂಬರಿಯ ಸಂವಿಧಾನಕ್ಕೆ ನವ್ಯತೆಯೇನೂ ಬಂದಂತೆ ತೋರುವುದಿಲ್ಲ.

ಈ ಕಾದಂಬರಿಯ ವಸ್ತು ರಮ್ಯವಾಗಿದೆ. ಕಥೆ ಬೆಳೆದುಕೊಂಡು ಬಂದಿರುವ

ರೀತಿ ಮನೋಜ್ಞವಾಗಿದೆ. ಚಂದ್ರಶೇಖರಯ್ಯನ ಪಾತ್ರ ತುಂಬ ಸೊಗಸಾಗಿದೆ. ಎಲ್ಲ ಪಾತ್ರಗಳೂ ಬೆಳೆದು ಜೀವಂತವಾಗಿವೆ. ಭಾಗ್ಯಲಕ್ಷ್ಮಿ ಗಂಡನನ್ನು ಒಲಿಸಿ ಕೊಂಡ ರೀತಿ ಒಂದು ದೃಷ್ಟಿಯಿಂದ ಅಸ್ವಾಭಾವಿಕ ಎನಿಸುತ್ತದೆ. ಕಾದಂಬರಿಯ ಉತ್ತರಾರ್ಧದಲ್ಲಿ ಕೆಲವೆಡೆ ಹಿಗ್ಗಿಸಬಹುದಾಗಿದ್ದರೂ, ಲೇಖಕರ ಸಂಯಮ ಕಿರಿದರಲ್ಲೇ ಮಾಡಬೇಕಾದ್ದನ್ನು ಮಾಡಿದೆ. ಸಂಯಮ ನಿಜವಾದ ಕಲೆಗಾರಿಕೆಯ ಪ್ರಾಣ ಸ್ವರೂಪ. ಆ ಒಂದು ಸಂಯಮವನ್ನು ಕತೆಯ ಉದ್ದಕ್ಕೂ ಗುರುತಿಸಬಹುದು. ಹಿತಮಿತವಾದ ಶೈಲಿ, ಸಜೀವ ಪಾತ್ರ, ಸನ್ನಿವೇಶಗಳಿಂದ ಕಾದಂಬರಿ ಒಂದು ರೀತಿ ಯಲ್ಲಿ, ಇಂದು ರಾಸಿರಾಸಿಯಾಗಿ ಬರುತ್ತಿರುವ ಕಾದಂಬರಿಗಳಿಂದ ಅನ್ಯವಾಗಿ, ಶುಚಿಯಾಗಿದೆ.

ಶ್ರೀಯುತರ ಲೇಖನಿ ಇನ್ನೂ ಹಲವು ಇಂತಹ ಕಾದಂಬರಿಗಳನ್ನು ಮೂಡಿಸಲಿ.

*
* *

ಶ್ರೀ ಸ್ವಾಮಿ ರಾಮತೀರ್ಥ (ಜೀವನಚರಿತ್ರೆ)—ಲೇಖಕರು : ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂಡ್ ಬ್ರದರ್ಸ್, ಬೆಂಗಳೂರು ; ಬೆಲೆ, ರೂ. ೧-೧೨-೦.

ಜೀವನೋದ್ದೇಶ ಪರಮಾರ್ಥಸಾಧನೆ ಎಂಬ ಮಹಾಸತ್ಯವನ್ನು ಮೊಟ್ಟ ಮೊದಲು ತಿಳಿದು ಸಾಧನೆಯಲ್ಲಿ ತೊಡಗಿದವರು ಭಾರತೀಯರೆಂದು ಹೇಳಬಹುದು. ವೇದಗಳ ಕಾಲದಿಂದ ಇಂದಿನವರೆಗೂ ಆ ಒಂದು ತತ್ವವನ್ನು ತಮ್ಮ ಬಾಳಿನಲ್ಲಿ ಅನುಷ್ಠಾನಕ್ಕೆ ತಂದ ಮಹಾಪುರುಷರೆನಿತೋ ಆಗಿ ಉಳಿದಿದ್ದಾರೆ. ಅವರಲ್ಲಿ ಮುಕ್ಕಾಲುಪಾಲು ಸಾಧಕರ, ಸಿದ್ಧರ ಜೀವನ ಸರಿಯಾಗಿ ದೊರೆಯುವಂತಿಲ್ಲ. ಇತ್ತೀಚಿಗೆ ಆಗಿಬಂದ ಅಂತಹವರ ಜೀವನಚರಿತ್ರೆಯನ್ನು ರಚಿಸಲು ಸಾಧ್ಯ. ಆದರೆ ಆ ಕೆಲಸ ನಿಜವಾಗಿಯೂ ಒಂದು ಸಾಹಸವೇ. ಶ್ರೀ ವಿವೇಕಾನಂದರ ಸಮಕಾಲೀನರಾಗಿ ವೀರವೇದಾಂತಿಯಾಗಿ, ಜಪಾನ್ ಅಮೆರಿಕಾಗಳನ್ನು ತಮ್ಮ ಉಜ್ವಲ ಭಾಷಣಗಳಿಂದ ಬೆಳಗಿ, ಪುಣ್ಯ ಹಿಮಾಚಲದ ಧವಳಸಾನ್ನಿಧ್ಯದಲ್ಲಿ ತಪಸ್ವಿ ಯಾಗಿ ಕಡೆಗೆ ಭಾಗೀರಥಿಯಲ್ಲಿ ಐಕ್ಯರಾದ ಶ್ರೀ ಸ್ವಾಮಿ ರಾಮತೀರ್ಥರ ಜೀವನ ಚರಿತ್ರೆಯನ್ನು ಶ್ರೀ ಚಿ. ಸದಾಶಿವಯ್ಯನವರು ಬರೆದು ಉಪಕಾರಮಾಡಿದ್ದಾರೆ.

ಲೇಖಕರು ಸ್ವಾಮಿ ರಾಮತೀರ್ಥರ ಜೀವನಚರಿತ್ರೆಯನ್ನು ಬರೆಯುವಲ್ಲಿ ಸ್ವಾಮಿಗಳ ದಿನಚರಿಯನ್ನು, ಪತ್ರಗಳನ್ನು, ಅವರ ಶಿಷ್ಯರ ಸ್ನೇಹಿತರ ಅಭಿಪ್ರಾಯ ಗಳನ್ನು ಜೀವನಚಿತ್ರಣಕ್ಕೆ ಬಳಸಿಕೊಂಡಿರುವುದರಿಂದ ಇವರ ಪ್ರಯತ್ನ, ಸಾಧಾರ

ವಾದುದು ಮತ್ತು ಪ್ರಾಮಾಣಿಕವಾದುದೆಂಬುದು ಸ್ಪಷ್ಟವಾಗುತ್ತದೆ. ಆದರೆ ಅವುಗಳನ್ನು ಬಳಸಿಕೊಂಡಿರುವುದರಲ್ಲಿ ಔಚಿತ್ಯ ಸಾಲದು. ಯಾವುದನ್ನೂ ಬಳಿಸಿ ಕೊಳ್ಳುವುದರಿಂದ ವ್ಯಕ್ತಿಯ ಪಾತ್ರ ಚಿತ್ರಣಕ್ಕೆ ನಿಜವಾಗಿಯೂ ಪೋಷಕವಾಗ ಬಲ್ಲುದೋ ಅಂತಹುವನ್ನು ಮಾತ್ರ ಬಳಸಿಕೊಂಡು ಉಳಿದುವನ್ನು ಬಿಟ್ಟಿದ್ದರೆ ಚೆನ್ನಾಗಿತ್ತು. 'ಲಾಹೋರಿನಲ್ಲಿ' ೧-೨-೩ ಎಂಬ ಅಧ್ಯಾಯಗಳ, ೮ ರಿಂದ ೪೫ ನೇ ಪುಟದವರೆಗಿನ, ವಿಷಯವನ್ನು ಕೇವಲ ಏಳೆಂಟು ಪುಟಗಳಲ್ಲಿ ಸ್ವಂತ ಮಾತಿನಿಂದ ಹೇಳಬಹುದಾಗಿತ್ತು ಎನಿಸುತ್ತದೆ.

ಇಂತಹ ಜೀವನಚರಿತ್ರೆಗಳನ್ನು ಬರೆಯುವವರು, ಆ ವ್ಯಕ್ತಿಯ ಸಂಪೂರ್ಣ ವಾದ ವ್ಯಕ್ತಿತ್ವವನ್ನು ಕೊಡಲು ಪ್ರಯತ್ನಿಸುವುದೊಳ್ಳಿತು. ಓದುಗರಿಗೆ ಸಂದೇಹ ಬರಬಹುದಾದ ಭಾಗಗಳನ್ನು ದೊರೆತ ಆಧಾರಗಳಿಂದ, ಹೆಚ್ಚು ಸಂಶೋಧನೆಯಿಂದ ನಿವಾರಿಸಲು ಪ್ರಯತ್ನಿಸಬೇಕು. ಇಲ್ಲಿ ಶ್ರೀ ರಾಮತೀರ್ಥರ ಸಂಸಾರಜೀವನದ ವಿಷಯ ಅವರ ದಿನಚರಿಯಲ್ಲಿ ಒಂದೆಡೆ ಮಿಂಚುತ್ತದೆ. ಅವರಿಗೆ ಮದುವೆಯಾಗಿದ್ದಿತು; ಮಕ್ಕಳಿದ್ದರು ಎಂದು ನಿರೂಪಿತವಾಗಿದೆ. ಆ ವ್ಯಕ್ತಿಯ ಬಾಳಿನಲ್ಲಿ, ವೈರಾಗ್ಯದ ಹಾದಿಯಲ್ಲಿ ಈ ಸಂಸಾರ ಏನು ಪರಿಣಾಮಮಾಡಿತೋ, ಅವರ ಸಾಂಸಾರಿಕ ಜೀವನದ ಸ್ವರೂಪವೇನೋ ತಿಳಿಯುವುದಿಲ್ಲ. ರಾಮತೀರ್ಥರ ವಿಶಿಷ್ಟ ಬೋಧನೆ ಗಳೇನು, ಅವರ ಸ್ಥಾನವೇನು ಎಂಬುದೂ ನಿರ್ದೇಶಿತವಾಗಿಲ್ಲ.

ಶೈಲಿ ರಮ್ಯವಾಗಿದೆ. ರಾಮತೀರ್ಥರ ಜೀವನವನ್ನು ಕೇವಲ ೧೩೨ ಪುಟ ಗಳಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಅಲ್ಲಲ್ಲಿ ನಿಜವಾಗಿಯೂ ಮನೋಜ್ಞವಾದ ಸನ್ನಿ ವೇಶಗಳು ಚಿತ್ರಿತವಾಗಿವೆ. ರಾಮತೀರ್ಥರ ಉತ್ತರಾರ್ಧ ಜೀವನವನ್ನು ಉಜ್ವಲ ವಾಗಿ ಚಿತ್ರಿಸಿದ್ದಾರೆ. ಇಂತಹ ಒಳ್ಳೆಯ ಪುಸ್ತಕವನ್ನು ಬರೆದ ಲೇಖಕರು ಅಭಿನಂದನಾರ್ಹರು !

ಜಿ. ಎಸ್. ಶಿ.

* * *

ರಾಜಶ್ರೀ—ಲೇಖಕರು : ಡಿ. ಕೃಷ್ಣಯ್ಯಂಗಾರ್, ಎಂ.ಎ. ; ಪ್ರಕಾಶಕರು : ಜಿ. ಎಸ್. ವಿಶ್ವ ಅಂಡ್ ಕಂಪನಿ, ಎಜುಕೇಷನಲ್ ಪಬ್ಲಿಷರ್ಸ್, ಬೆಂಗಳೂರು ಸಿಟಿ ; ಕ್ರೌ ಅ. ಪು. vi+೮೮ ; ಬೆಲೆ, ರೂ. ೧-೦-೦.

ಇದು ಕಾದಂಬರಿಯ ಧಾಟಿಯಲ್ಲಿ ರಚಿತವಾದ ಒಂದು ಕಿರುಹೊತ್ತಗೆ. ಇದರ ಕಥಾವಸ್ತು ಆರ್ಷೇಯವಾದುದು. ಗೌತಮ ಅಹಲ್ಯೆಯರು ಇದರ ನಾಯಕ ನಾಯಕಿ ಯರು. ಇವರಿಬ್ಬರ ವಿದ್ಯಾಭ್ಯಾಸ ಪ್ರಣಯ ಗೃಹಸ್ಥಜೀವನಗಳನ್ನು ಕತೆಗಾರರು

ಆಧುನಿಕ ಸಾಮಾಜಿಕ ಕತೆಗಳ ರೀತಿಯಲ್ಲಿ ಅಳವಡಿಸಿ ಬರೆದಿದ್ದಾರೆ. ಅಗಸ್ತ್ಯರ ಬಳಿಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದ ಗೌತಮ, ತನ್ನ ಸಹಪಾಠಿಯೂ ಶ್ರೀರಂಗ ರಾಜನ ಏಕಮಾತ್ರಪುತ್ರಿಯೂ ಆದ ಅಹಲ್ಯೆಯನ್ನು ಮದುವೆಯಾದನಂತರ ಶ್ರೀರಂಗರಾಜ್ಯದ ಸರ್ವಾಧಿಕಾರಿಯಾಗಿ, ಅಗಸ್ತ್ಯಾಶ್ರಮದ ಸರ್ವಾಧಿಕಾರವನ್ನೂ ವಹಿಸಿಕೊಂಡು, ಸ್ವಲ್ಪವೂ ಭೋಗವಿಲಾಸಕ್ಕೆಳುಪದೆ ಪ್ರಜೆಗಳ ಹಿತಕ್ಕಾಗಿಯೇ ರಾಜ್ಯಭಾರಮಾಡಿ ರಾಜರ್ಷಿಯೆನಿಸಿಕೊಂಡ. ಈ ನಡುವೆ ಗೌತಮನ ಕೈಹಿಡಿಯಲು ಹಂಬಲಿಸುತ್ತಿದ್ದ ಆತ್ರೇಯಿ, ಪ್ರಜೆಗಳಲ್ಲಿ ಅಪಪ್ರಚಾರ ಹೂಡಿ ಗೌತಮನನ್ನು ಬಂಧಿಸದಲ್ಲಿಡಿಸಿ, ಪರರಾಷ್ಟ್ರದ ಅರಸಾದ ಇಂದ್ರಸೇನನನ್ನು ಕರೆತಂದು, ಅವನೊಡನೆ ದಾಂಪತ್ಯಸುಖವನ್ನನುಭವಿಸುವಂತೆ ಅಹಲ್ಯೆಯನ್ನು ಚೋದಿಸಿದಳು. ಅದಕ್ಕವಳು ಸಮ್ಮತಿಸಲಿಲ್ಲ. ಆದರೆ ಇಂದ್ರಸೇನ ಗೌತಮನಂತೆ ವೇಷಮರೆಸಿಕೊಂಡು ಬಂದು ಅಹಲ್ಯೆಯೊಡನೆ ಏಕಾಂತದಲ್ಲಿ ಕುಳಿತಿರಲು ಆತ್ರೇಯಿಯ ಹೂಟದಿಂದ ಗೌತಮ ಅಲ್ಲಿಗೆ ಬಂದು, ವ್ಯಭಿಚಾರಕ್ಕೆಳಸಿದ ಇಂದ್ರಸೇನನನ್ನು 'ನೀನು ಸಹಸ್ರಾಕ್ಷನಾಗು' . . . ಇತ್ಯಾದಿಯಾಗಿ ಕಠೋರವಾಗಿ ಶಪಿಸಿ, ನಿರಪರಾಧಿಯಾದ ಅಹಲ್ಯೆಗೆ ಶ್ರೀರಾಮ ಬರುವ ವರೆಗೂ ಚಂದ್ರಾರಣ್ಯಕ್ಷೇತ್ರದಲ್ಲಿ ಅದೃಶ್ಯವಾಗಿ ಜೀವಿಸುವಂತೆ ವರವನ್ನನುಗ್ರಹಿಸಿ, ವ್ಯರ್ಥವಾದ ತನ್ನ ತಪಶ್ಶಕ್ತಿಯನ್ನು ಮತ್ತೆ ಪಡೆಯುವುದಕ್ಕಾಗಿ ಹೊರಟುಹೋದ. ಇದು ಕತೆಯ ಸಂಗ್ರಹ.

ಇಲ್ಲಿ ಕತೆಯೇನೋ ಸ್ವಾರಸ್ಯವಾಗಿ ಮೂರ್ಪಟ್ಟಿದೆ. ಅಹಲ್ಯೆಯ ತಲೆಗೆ ಕಟ್ಟಿದ ಕುಂದು ಮಾಯವಾಗಿದೆ. ಅವಳು ಗೌತಮನಿಂದ ಶಾಪಗ್ರಸ್ತೆಳಾಗುವುದಕ್ಕೆ ಬದಲು ಅನುಗ್ರಹೀತಳಾಗಿದ್ದಾಳೆ. ಗೌತಮ ನಮ್ಮ ಯುಗಕ್ಕೇ ಸೇರಿದವನು. ಅವನು ತಪಸ್ವಿಯಾಗಿರುವುದಕ್ಕಿಂತ ಹೆಚ್ಚಾಗಿ ಪ್ರಚಂಡ ಸಮಾಜಸುಧಾರಕನಾಗಿದ್ದಾನೆ. ಅವನೊಬ್ಬ ಸಮತಾವಾದಿಯೋ ಸಮಾಜವಾದಿಯೋ ಆಗಿದ್ದಿರಬೇಕು. ದೇಶದಲ್ಲಿ ಬಡತನ ನಿರ್ಮೂಲವಾಗಬೇಕು, ಒಬ್ಬನ ದುಡಿಮೆಯಿಂದ ಮತ್ತೊಬ್ಬನು ಸುಖಿಸು ವುದು ತಪ್ಪಬೇಕು, ಸಾರ್ವಜನಿಕ ಬಲಾತ್ಕಾರ ವಿದ್ಯಾಭ್ಯಾಸ ಆಚರಣೆಗೆ ಬರಬೇಕು, ಇತ್ಯಾದಿಯಾಗಿದ್ದವು ಅವನ ಧ್ಯೇಯಗಳು. ಈ ಧ್ಯೇಯಗಳನ್ನು ಕುರಿತ ಅವನ ರಾಜ್ಯಭಾರ "ಪಾರಮಾರ್ಥಿಕ ದೃಷ್ಟಿಯಿಂದ ಭೂಸ್ವರ್ಗವಾಯಿತು. ರಾಜಕೀಯ ದೃಷ್ಟಿಯಿಂದ ಸ್ವಪರಿಪೂರ್ಣ ಪ್ರಜಾತಂತ್ರಪದ್ಧತಿಯಾಯಿತು. ಅವನ ರಾಜ್ಯದಲ್ಲಿ ಬಡವ ಬಲ್ಲಿದರೆಂಬ ಭೇದವಿಲ್ಲ. ಕೀಳುಮೇಲೆಂಬ ಏರುಪೇರಿಲ್ಲ. ಕುಲಗೋತ್ರಗಳ ಗೊಂದಲವಿಲ್ಲ. ಎಲ್ಲರಿಗೂ ಸಮಾನ ವಾಕ್‌ಸ್ವಾತಂತ್ರ್ಯ ಪ್ರಜಾಸ್ವಾತಂತ್ರ್ಯ!" ಮೂಲಕಥೆಯಲ್ಲಿ ಬರುವ ಅಲೌಕಿಕ ವಾತಾವರಣ ಇಲ್ಲಿ ಸಂಪೂರ್ಣ ಲೌಕಿಕವಾಗಿದೆ.

ಪುರಾಣದ ಕತೆಯನ್ನು ಹೀಗೆ ಬದಲಾಯಿಕೊಂಡಿರುವುದರ ಔಚಿತ್ಯವೇನೋ ಸಮರ್ಥವಾಗುವುದಿಲ್ಲ. ಯಾವಾಗಲೂ ಪುರಾಣಪ್ರಸಿದ್ಧವಾದ ಕಾವ್ಯಭಾಗವನ್ನು ವಸ್ತುವನ್ನಾಗಿ ಬಳಸಿಕೊಂಡು ಕಾವ್ಯರಚನೆಗೆ ತೊಡಗುವುದು ಖಡ್ಗಧಾರೆಯ ಮೇಲೆ ನಡೆಸಿದ ಸಾಮಿನಂತೆ; ಅದಕ್ಕೆ ಎಂಟೆದೆಬೇಕು. ಅದು ಪ್ರತಿಭಾವಂತ ಕವಿಯಾದವನಿಗೆ ಸಾಧ್ಯ. ಅವನು ತನ್ನ ಪ್ರತಿಭೆಯ ಕುಲುಮೆಯಲ್ಲಿ ಮೂಲದ ಸ್ವರ್ಣಮಯ ಸನ್ನಿವೇಶವನ್ನು ಕರಗಿಸಿ, ಅದರಲ್ಲಿ ಅಲ್ಪಸ್ವಲ್ಪ ಕಾಳಿಕೆಯಿದ್ದಲ್ಲಿ ಕಳೆದುಹಾಕಿ, ಥಳಥಳಿಸುವ ಅಪರಂಜಿಯಿಂದ ಬೇರೊಂದು ಸುಂದರ ಪ್ರತಿಮೆಯನ್ನೇ ರಚಿಸುತ್ತಾನೆ. ಆಗ ಮೂಲದ ಸನ್ನಿವೇಶಕ್ಕೆ ಅಪೋಹ ಬರುವುದಿಲ್ಲ, ಅದಕ್ಕೆ ಬದಲು ಮೂಲದ ಸನ್ನಿವೇಶ ಹೆಚ್ಚು ಕಳೆಗಟ್ಟಿ, ಅಲ್ಲಿ ಬರುವ ವ್ಯಕ್ತಿಗಳು ಔನ್ನತ್ಯವನ್ನು ಹೊಂದಿ ಪ್ರಕಾಶಮಾನವಾಗಿ ರಾಜಿಸುತ್ತಾರೆ. ಅದಕ್ಕ ಭಾರತದ ಒಂದು ಉಪಾಖ್ಯಾನವನ್ನು ಬಳಸಿಕೊಂಡು ಕಾಲಿದಾಸ ಕವಿ ರಚಿಸಿದ 'ಅಭಿಜ್ಞಾನ ಶಾಕುಂತಲ', ರಾಮಾಯಣದ ಒಂದು ಸನ್ನಿವೇಶವನ್ನು ತೆಗೆದುಕೊಂಡು ಭಾಸಕವಿ ರಚಿಸಿದ 'ಪ್ರತಿಮಾನಾಟಕ'ಗಳೇ ನಿದರ್ಶನ. 'ರೈತನ ಪ್ರಪಂಚ', 'ರೈತನ ಏಳಿಗೆ', 'ರೈತನ ಬಾಳು'ಗಳನ್ನು ಬರೆದ ಶ್ರೀಮಾನ್ ಅಯ್ಯಂಗಾರ್ಯರು ಕಾಲ್ಪನಿಕ ಸಾಹಿತ್ಯರಚನೆಗೆ ಪ್ರಯತ್ನಪಟ್ಟಿರುವುದೇನೋ ಶ್ಲಾಘ್ಯವಾದುದೇ ; ಆದರೆ ಅವರ ಪ್ರಯತ್ನ ಇಲ್ಲಿ ಫಲಕಾರಿಯಾಗಿಲ್ಲ. ಪೌರಾಣಿಕ ವಸ್ತುವನ್ನು ತೀರ ಲೌಕಿಕಕ್ಕೆ ತಿರುಗಿಸಿರುವುದರಿಂದ, ಶಿಖರದ ಮೇಲೆ ನಿಸ್ಸಂಗತ್ವದಿಂದ ಮೆರೆಯುತ್ತಿದ್ದ ಗೌತಮನನ್ನು ಕೆಳಕ್ಕೆಳೆತಂದು ಲೌಕಿಕದ ಕೆಸರಿನಲ್ಲಿ ಅದ್ದಿದಂತಾಗಿದೆ. ಇದರಿಂದ ಮೂಲಕಥೆಯ ಗೌರವಕ್ಕೆ ಕುಂದು ಬಂದಿದೆ. ಒಟ್ಟಿನ ಮೇಲೆ, ಕತೆ ಪೂರಾ ಪೌರಾಣಿಕವೂ ಆಗಿರದೆ ಪೂರಾ ಆಧುನಿಕವೂ ಆಗಿರದೆ ಭಾರತದ ಮಹಿಳೆಗೆ '**Bob**' ಮಾಡಿಸಿದಂತಾಗಿದೆ. ಕತೆಗಾರರು ಲೌಕಿಕೋದ್ದೇಶಗಳನ್ನು ಸಾಧಿಸುವುದಕ್ಕೆ ಗೌತಮನಂತಹ ಮಹರ್ಷಿಯನ್ನಾಗಲಿ, ಅಹಲ್ಯೆಯಂತಹ ಋಷಿಪತ್ನಿಯನ್ನಾಗಲಿ ಎಳೆತರಬೇಕಾಗಿರಲಿಲ್ಲ. ಅಥವಾ ಅವರು ನಿರ್ಮಿಸಿರುವ ಪಾತ್ರಗಳಿಗೇ ಬೇರೆ ಹೆಸರುಗಳನ್ನು ಕೊಡಬಹುದಾಗಿತ್ತು. (ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರು ತಮ್ಮ 'ಅಹಲ್ಯೆ'ಯಲ್ಲಿ, ವಾಲ್ಮೀಕಿ ರಾಮಾಯಣದಲ್ಲಿ ಕ್ವಚಿತ್ತಾಗಿ ಬರುವ ಸ್ವಲ್ಪ ಕವರುಕವರಾದ ಈ ಸನ್ನಿವೇಶಕ್ಕೇ ತಮ್ಮ ಪ್ರತಿಭಾಸಂಪನ್ನತೆಯಿಂದ ಜೀವಕಳೆ ಕೊಟ್ಟು ಸಹೃದಯರ ಮನವನ್ನು ಸೂರೆಗೊಂಡಿರುವ ವಿಷಯವನ್ನು ಈ ಸಂದರ್ಭದಲ್ಲಿ ನೆನೆದರೆ ತಪ್ಪಾಗಲಾರದು.)

ಕೃತಿರಚನೆಯಲ್ಲಿ ಲೇಖಕರಿಗಿದ್ದ ಘನೋದ್ದೇಶಗಳಲ್ಲಿ ಚಿಕ್ಕವರಲ್ಲಿ ದೇಶಪ್ರೇಮ ಹೆಚ್ಚಿಸಬೇಕೆಂಬುದೂ ಒಂದು. ಅದಕ್ಕಾಗಿ ಅವರು ಒಂದುಕಡೆ ಗೌತಮನ

ರಾಜ್ಯಾಡಳಿತ ವರ್ಣನೆಯ ಮೂಲಕ ಇಂದಿನ ರಾಜಕೀಯದಲ್ಲಿ ತಾವು ನಿರೀಕ್ಷಿಸುವ ಆಶೋತ್ತರಗಳನ್ನೆಲ್ಲಾ ನಿರೂಪಿಸಿದರು. ಮತ್ತೊಂದುಕಡೆ ತೀರ್ಥಯಾತ್ರಾಪ್ರಸಂಗವನ್ನು ಕಲ್ಪಿಸಿ, ಅಲ್ಲಿ ಕನ್ನಡನಾಡಿನ ಭೌಗೋಲಿಕ ಮೇಲ್ಮೈಲಕ್ಷಣ ವ್ಯಕ್ತವಾಗುವಂತೆ ಓದುಗರಿಗೆ ಅಲ್ಲಿನ ನೈಸರ್ಗಿಕ ಸನ್ನಿವೇಶಗಳನ್ನೂ ಪುಣ್ಯಕ್ಷೇತ್ರಗಳನ್ನೂ ದರ್ಶನಮಾಡಿಸಿದರು. ಪುರಾಣಸ್ಥವಾದ ಆಯಾ ಕ್ಷೇತ್ರಗಳ ಸ್ಥಳಮಾಹಾತ್ಮ್ಯವನ್ನು ವಿವರಿಸಿದರು. ಹೀಗೆ ಮಾಡುವಲ್ಲಿ ಮಾತ್ರ ಅವರ ಲೌಕಿಕದೃಷ್ಟಿ ತಲೆಹಾಕಿಲ್ಲ. ವಿಜ್ಞಾನಯುಗದ ಮಕ್ಕಳಿಗೆ ಪೌರಾಣಿಕ ಕತೆಗಳ ಪ್ರತಿಮಾಸ್ವರೂಪವಾದ ತತ್ವಗಳನ್ನು ವಿಶದಪಡಿಸದೆ ಯಥಾವತ್ತಾಗಿ ಕತೆಗಳನ್ನು ನಿರೂಪಿಸಿರುವುದು ಸ್ವಲ್ಪ ಅಸಂಬದ್ಧವಾಗಿ ತೋರುತ್ತದೆ. ಉದಾಹರಣೆಗೆ ಮಹಾವಿಷ್ಣು ವರಾಹ ರೂಪತಾಳಿ, ಪಾತಾಳದಿಂದ, ಹಿರಣ್ಯಾಕ್ಷ ಕೊಂಡೊಯ್ದಿದ್ದ ಭೂಮಿಯನ್ನು ಮೇಲೆತ್ತಿ ತಂದಾಗ ಅವನ ಕೋರೆದಾಡೆಗಳಿಗೆ ಆಯಾಸವಾಗಿ ಅವುಗಳಿಂದ ಹರಿದ ನೀರೇ ತುಂಗಭದ್ರಾ ನದಿಗಳು ಎಂಬ ಕತೆ, ವರಪ್ರದಾನ ಮಾಡಿದಮೇಲೆ ತನ್ನ ತಲೆಯಮೇಲೆಯೇ ಕೈಯಿಡಬಂದ ಭಸ್ಮಾಸುರನಿಂದ ತಪ್ಪಿಸಿಕೊಳ್ಳಲು ಮಾರ್ಗವರಿಯದೆ, ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಎನಿಸಿದ ಪರಮೇಶ್ವರನು ಬೆಪ್ಪುತಕ್ಕಡಿಯಂತೆ ಓಡಿ ಬಿಳಿಗಿರಿ ರಂಗನಲ್ಲಿ ಮೊರೆಯಿಡಲು, ಬಿಳಿಗಿರಿ ರಂಗನೂ ಅವನನ್ನು ನೇರವಾಗೆದುರಿಸಲಾರದೆ ಸ್ತ್ರೀವೇಷ ಧರಿಸಿ ಮೋಸದಿಂದ ಅವನನ್ನು ನಿಗ್ರಹಿಸಿದ ಕತೆಗಳನ್ನು ನೋಡಬಹುದು.

ಕಥಾಸರಣಿಯೇನೋ ಸ್ವಾರಸ್ಯವಾಗಿದ್ದು ಅಲ್ಲಲ್ಲಿ ನೀತಿಯ ಕತೆಗಳು ಬರುವುದರಿಂದ ಹುಡುಗರ ಮನಸ್ಸಿನ ಬೆಳವಣಿಗೆಗೆ ಸಾಧಕವಾಗಿದೆ. ಇದನ್ನು ಓದುವ ವಯಸ್ಕರೂ ಇಲ್ಲಿ ಹುಡುಗರಾಗುತ್ತಾರೆ. ಗೌತಮನ ಪ್ರವಾಸದ ಪ್ರಸಂಗ ಕನ್ನಡಿಗರೆಂದುಕೊಳ್ಳುವ ಜನರಿಗೆ ಸ್ವದೇಶಾಭಿಮಾನವನ್ನು ಮೂಡಿಸುತ್ತದೆ. ಪೌರಲೌಕಿಕ ದೃಷ್ಟಿಯುಳ್ಳ ವಯಸ್ಕರಿಗೆ ತಾವೂ ಗೌತಮ ಉದಂಕರು ಚರಿಸಿದ ಪುಣ್ಯಕ್ಷೇತ್ರಗಳಲ್ಲೆಲ್ಲಾ ಸಂಚರಿಸಬೇಕೆಂಬ ಆಸೆ ಅಂಕುರಿಸುವಂತೆ ಮಾಡುತ್ತದೆ. ಮುದ್ರಣಕಾರರ ಉಪೇಕ್ಷೆಯಿಂದಲೋ, ಬೇಗ ತಮ್ಮ ಕೃತಿ ಪ್ರಕಾಶಿತವಾಗಬೇಕೆಂಬ ಗ್ರಂಥಕರ್ತರ ಆಕಾಂಕ್ಷೆಯಿಂದಲೋ, ಇತರ ಹಲವಾರು ಕನ್ನಡ ಗ್ರಂಥಗಳಲ್ಲಿರುವಂತೆಯೇ ಇದರಲ್ಲಿಯೂ ಮುದ್ರಣದ ತಪ್ಪುಗಳು ಹೇರಳವಾಗಿವೆ.

ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಈ ಕೃತಿಗೆ ತಮ್ಮ ಪ್ರೋತ್ಸಾಹಕರವಾದ ಮತ್ತು ಮೆಚ್ಚಿಕೆಯ ಮುನ್ನುಡಿಯನ್ನು ಬರೆದಿದ್ದಾರೆ.

ನ. ಸು.

*
* *

ನಾಗಾನಂದ (ಶ್ರೀ ಹರ್ಷ ವಿರಚಿತ)—ಪ್ರಕಾಶಕರು : ಸಂಸ್ಕೃತ ಸಾಹಿತ್ಯಸದನ, ೨೧೧ ವಿಶ್ವೇಶ್ವರಪುರ, ಬೆಂಗಳೂರು ೪ ; ಮಾರಾಟದ ವಿಭಾಗ : ೩೬೮, ಚೆಲುವಾಂಬಾ ಅಗ್ರಹಾರ, ಮೈಸೂರು ; ಬೆಲೆ, ರೂ. ೧-೧೨-೦.

ಬೆಂಗಳೂರು ವಿಶ್ವೇಶ್ವರಪುರದಲ್ಲಿರುವ ಸಂಸ್ಕೃತ ಸಾಹಿತ್ಯಸದನದವರು ಸುಮಾರು ಹದಿನೈದು ವರ್ಷಗಳಿಂದಲೂ ಪ್ರಸಿದ್ಧ ಸಂಸ್ಕೃತ ಗದ್ಯ, ಪದ್ಯ, ಚಂಪೂ, ನಾಟಕ ಗ್ರಂಥಗಳನೇಕವನ್ನು ಪೂರ್ಣವಾಗಿಯೂ ಭಾಗಗಳಾಗಿಯೂ, ಟೀಕೆ, ಟಿಪ್ಪಣಿ, ಕನ್ನಡ ಅಥವಾ ಇಂಗ್ಲೀಷ್ ಅನುವಾದಗಳೊಡನೆ ಪ್ರಕಾಶಿಸುತ್ತಿರುವುದು ಸರಿಯಷ್ಟೆ. ಇದುವರೆಗೆ ಇವರು ಸುಮಾರು ೨೫ ಇಂತಹ ಗ್ರಂಥಗಳನ್ನು ಪ್ರಕಾಶಮಾಡಿರುವರು. ಪ್ರಸಕ್ತ ಗ್ರಂಥವು ಶ್ರೀ ಹರ್ಷದೇವನ ನಾಗಾನಂದ ನಾಟಕದ ಕನ್ನಡ ಗದ್ಯಾನುವಾದ. ಮೂಲದ ಭಾವವನ್ನು ಸ್ವಲ್ಪವೂ ವ್ಯತ್ಯಾಸಮಾಡದೆ ಮೂಲದಲ್ಲಿರುವ ಸಂಸ್ಕೃತ ಗದ್ಯ ಪದ್ಯಗಳನ್ನು ಕನ್ನಡಿಸಿದೆ. (ಪ್ರಾಚೀನ ನಾಟಕಕಾರರ ಸಂಪ್ರದಾಯ, ಅಭಿರುಚಿ, ರಂಗಸ್ಥಳದ ಆವಶ್ಯಕತೆ ಮೊದಲಾದುವುಗಳ ದೃಷ್ಟಿಯಿಂದ ಗದ್ಯನಾಟಕಗಳು ಉಚ್ಚಮಟ್ಟಕ್ಕೇರಲಾರವು. ಆದರೆ ವಾಚಕರ ದೃಷ್ಟಿಯಿಂದ ಅದಕ್ಕೆ ಪ್ರಯೋಜನವಿಲ್ಲದಿಲ್ಲ.) ಪ್ರಾರಂಭದಲ್ಲಿ ದೃಶ್ಯಕಾವ್ಯಸ್ವರೂಪ, ಗ್ರಂಥಕರ್ತೃವಾದ ಶ್ರೀಹರ್ಷದೇವನ ಪರಿಚಯ ಆತನ ಕಾಲವೃತ್ತ, ಕೃತಿಗಳು—ನಾಗಾನಂದ ನಾಟಕದ ಕಥಾಸಂಗ್ರಹ, ಕಥಾಮೂಲ, ಕಥೆಯಲ್ಲಿ ಚಿತ್ರಿತವಾಗಿರುವ ಮತಧರ್ಮ, ಪ್ರತಿಪಾದಿತವಾಗಿರುವ ರಸಸ್ವರೂಪ ಮೊದಲಾದುವುಗಳನ್ನೊಳಗೊಂಡ ವಿಸ್ತಾರವಾದ ಪೀಠಿಕೆಯೂ ಗ್ರಂಥಾಂತ್ಯದಲ್ಲಿ ನಾಟಕಕ್ಕೆ ಸಂಬಂಧಪಟ್ಟಹಾಗೆ ದೀರ್ಘವಾದ ಟಿಪ್ಪಣಿಯೂ ಇವೆ. ಟಿಪ್ಪಣಿಗಳಲ್ಲಿ ಗ್ರಂಥಾಂತರ ಪ್ರಮಾಣಗಳಿಂದ ವಿಷಯಪ್ರತಿಪಾದನೆಗೆ ಸ್ಪಷ್ಟತೆಯುಂಟಾಗಿದೆ.

ಸಂಸ್ಕೃತವು ಪ್ರಾಚೀನವೂ ಪವಿತ್ರವೂ ಆದ ಭಾಷೆ. ಭಾರತೀಯ ಭಾಷೆಗಳನೇಕಕ್ಕೆ ಅದು ಪ್ರೇರಕವೂ ಪೋಷಕವೂ ಆಗಿದೆ. ಅದರ ಬೆಳವಣಿಗೆ ಎಲ್ಲರಿಗೂ ಶ್ರೇಯಸ್ಕರವಾದುದೇ. ಆದರೆ ಜನರ ವ್ಯವಹಾರದಲ್ಲಿಲ್ಲದ ಸಂಸ್ಕೃತ ಭಾಷೆಯ ಅಭಿವೃದ್ಧಿ ನೇರವಾಗಿ ಆ ಭಾಷೆಯಿಂದಲೇ ಆಗುವುದು ಈಗಿನ ಕಾಲದಲ್ಲಿ ಶ್ರಮಸಾಧ್ಯ. ಪ್ರಾದೇಶಿಕ ಭಾಷೆಗಳ ಮೂಲಕ ಅದರಲ್ಲಡಗಿರುವ ಅಮೂಲ್ಯ ಜ್ಞಾನಭಂಡಾರ, ಜನೋಪಯೋಗಕರವಾದರೆ ಪರೋಕ್ಷವಾಗಿ ಸಂಸ್ಕೃತದ ಮುನ್ನಡೆಯಾಗಿಯೇ ಆಗುತ್ತದೆ. ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದವರು ಇಂಟರ್ ಮೀಡಿಯಟ್ ತರಗತಿಗಳಲ್ಲಿ ಸಂಸ್ಕೃತವನ್ನು ಪ್ರಾದೇಶಿಕ ಭಾಷೆಯಾದ ಕನ್ನಡದ ಮೂಲಕವೇ ಬೋಧಿಸಬೇಕೆಂದು ತಿರ್ಮಾನಿಸಿರುವುದು ಗಮನಾರ್ಹವಾದ ವಿಷಯ.

ಇದಕ್ಕನುಗುಣವಾಗಿ ವ್ಯಾಸಂಗಮಾಡುವ ಸಂಸ್ಕೃತ ವಿದ್ಯಾರ್ಥಿಗಳಿಗೆ ಪ್ರಸಕ್ತ ಗ್ರಂಥವು ಬಹು ಪ್ರಯೋಜನಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ವಿದ್ಯಾರ್ಥಿಗಳ ದೃಷ್ಟಿಯಿಂದ ಈ ಗ್ರಂಥದಲ್ಲಿ ನಾಟಕದಲ್ಲಿ ಬರುವ ಪಾತ್ರಗಳ ಶೀಲಪರಿಶೀಲನೆ, ನಾಟಕದ ಸಂವಿಧಾನ ಮೊದಲಾದುವುಗಳ ವಿಷಯ ವಿಸ್ತಾರವಾಗಿದ್ದಿದ್ದರೆ ಹೆಚ್ಚು ಪ್ರಯೋಜನಕಾರಿಯಾಗುತ್ತಿತ್ತು.

ಸಂಸ್ಕೃತ ಸಾಹಿತ್ಯಸದನದವರು ಇಂತಹ ಇನ್ನೂ ಇತರ ಗ್ರಂಥಗಳನೇಕವನ್ನು ಪ್ರಚಾರಮಾಡಲೆಂದು ಹಾರೈಸುತ್ತೇವೆ.

'ಸ್ವಚ್ಛಂದಂ'

ವಸ್ತುಕೋಶ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ

೧೬-೫-೫೨ ನೆಯ ದಿನ ಬೇಲೂರಿನಲ್ಲಿ ನಡೆದ ಮೂವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಅಧ್ಯಕ್ಷಪೀಠದಿಂದ ಡಾ|| ಎಸ್. ಸಿ. ನಂದೀಮಠ, ಎಂ.ಎ., ಪಿಎಚ್.ಡಿ. ಅವರು ರಾಷ್ಟ್ರಭಾಷೆ-ಬೋಧಭಾಷೆಗಳ ವಿಚಾರವಾಗಿ ಈ ರೀತಿ ಅಪ್ಪಣೆ ಕೊಡಿಸಿದ್ದಾರೆ:—

'ಬ್ರಿಟಿಷರ ಆಳಿಕೆಯಲ್ಲಿ ಭರತಖಂಡದೊಳಗೆ ಹೈಸ್ಕೂಲ್ ಕಾಲೇಜುಗಳಲ್ಲಿ ಆಂಗ್ಲ ಭಾಷೆಯೇ ಬೋಧಭಾಷೆಯಾಗಿದ್ದಿತು. ಆಡಳಿತದ ಎಲ್ಲ ವ್ಯವಹಾರವೂ ಇಂಗ್ಲೀಷಿನಲ್ಲಿಯೇ ನಡೆಯುತ್ತಿದ್ದುದರಿಂದ ಜನತೆಗೆ ಈ ಭಾಷೆಯನ್ನು ಕಲಿಯುವುದು ಅವಶ್ಯವೆನಿಸತೊಡಗಿತು. ಅದರ ಪರಿಣಾಮವಾಗಿ ಇಂಗ್ಲೀಷಿಗೆ ಇಂದಿನವರೆಗೆ ಪ್ರಾಧಾನ್ಯ ದೊರೆಯುತ್ತ ಬಂದಿತು. ಇದರಿಂದ ಭಾರತಕ್ಕೆ ಬಹಳ ಉಪಕಾರವಾಗಿರುವುದೇನೋ ನಿಜ. ದೇಶೀಯ ಭಾಷೆಗಳಲ್ಲಿ ಸಾಹಿತ್ಯದ ಕೆಲ ಹೊಸ ರೂಪಗಳು ಕಾಲಿಡಲು ಕಾರಣವಾಯಿತು. ಪರದೇಶದವರ ಕೂಡ ಸಂಪರ್ಕ ಬೆಳೆಯಿಸಲು ಅನುಕೂಲವಾಯಿತು. ಶ್ರೀ ಸ್ವಾಮಿ ವಿವೇಕಾನಂದ, ರವೀಂದ್ರನಾಥ ಠಾಕೂರ, ಮಹಾತ್ಮ ಗಾಂಧಿ ಮೊದಲಾದವರು ಪರದೇಶಗಳಲ್ಲಿ ಭಾರತದ ಕೀರ್ತಿಯನ್ನು ಬೀರಲು ಆಂಗ್ಲ ಭಾಷೆಯ ಮೇಲೆ ಅವರಿಗಿದ್ದ ಪ್ರಭುತ್ವವೇ ಕಾರಣವಾಯಿತು. ಆದರೆ ಆಂಗ್ಲ ಭಾಷಗೆ ಈ ರೀತಿಯಾಗಿ ಕೊಟ್ಟ ಮಹತ್ವದ ಸ್ಥಾನದ ಪರಿಣಾಮವಾಗಿ ನಮ್ಮ ದೇಶೀಯ ಭಾಷೆಗಳ ಬೆಳವಣಿಗೆ ಕುಂಠಿತವಾಯಿತು.

ಭಾರತಕ್ಕೆ ಸ್ವಾತಂತ್ರ್ಯ ದೊರೆತಂದಿನಿಂದ ಆಂಗ್ಲಭಾಷೆಯ ಬಗೆಗೆ ನಮ್ಮ ದೃಷ್ಟಿಕೋನವು ಬದಲಾಗುತ್ತ ನಡೆದಿದೆ. ಕೇಂದ್ರಸರ್ಕಾರದವರು ಈಗಾಗಲೇ ಈ ಬಗೆಗೆ ತಮ್ಮ ಧೋರಣೆಯನ್ನು ಕೆಳಗಿನಂತೆ ವಿಶದಪಡಿಸಿರುವರು :

' ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಆಸ್ಪದ ಕೊಡಬೇಕು ; ಹಿಂದಿ ರಾಷ್ಟ್ರ ಭಾಷೆಯಾಗಬೇಕು. ಮಾಧ್ಯಮಿಕ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಗಳ ಮುಖಾಂತರ ಶಿಕ್ಷಣ ನಡೆಯಬೇಕು. ಉಚ್ಚಶಿಕ್ಷಣವನ್ನು ಪ್ರಾದೇಶಿಕ ಅಥವಾ ರಾಷ್ಟ್ರ ಭಾಷೆಯ ಮುಖಾಂತರ ಕೊಡಬೇಕೆಂದು ನಿಶ್ಚಯವಾಗಿದ್ದರೂ ಇನ್ನೂ ಕೆಲಕಾಲ—ಸು. ೧೫ ವರ್ಷ—ಆಂಗ್ಲಭಾಷೆಯನ್ನು ಬಳಸಬಹುದು ' ಎಂದು ನಿರ್ಣಯವಾಗಿದೆ.

ಈ ನಿರ್ಣಯವನ್ನು ಪ್ರಾಂತಿಕ ಸರ್ಕಾರಗಳು ರೂಢಿಯಲ್ಲಿ ತರಬೇಕೆಂದು ಕೇಂದ್ರ ಸರ್ಕಾರದ ಆದೇಶವಿದೆ. ಕೇಂದ್ರ ಸರ್ಕಾರದ ಈ ನಿರ್ಣಯದ ಬಗೆಗೆ ದೇಶದ ತುಂಬ ತರ್ಕವಿತರ್ಕಗಳು ನಡೆದಿವೆ.

ಇದುವರೆಗೆ ಭಾರತದ ಪರಿಸ್ಥಿತಿಯು ಒಂದು ತೆರನಾಗಿದ್ದಿತು. ಸ್ವತಂತ್ರರಾದ ಭಾರತೀಯರು ಪರಕೀಯ ಭಾಷೆಯನ್ನು ತಮ್ಮ ರಾಷ್ಟ್ರಭಾಷೆಯನ್ನಾಗಿ ಇಟ್ಟು ಕೊಳ್ಳುವುದು ಸದಸದ್ವಿವೇಕಕ್ಕೆ ನಿಲುಕದ ಮಾತು. ಇನ್ನು ಮುಂದೆ ಭಾರತೀಯರ ಸ್ವಾಭಿಮಾನಕ್ಕೂ ಗೌರವಕ್ಕೂ ಸರಿಹೊಂದುವಂತೆ ಪರಿಸ್ಥಿತಿ ಬದಲಾವಣೆಯಾಗ ಬೇಕು. ಹಲವಾರು ಕಾರಣಗಳ ಮೂಲಕ ಇಂಗ್ಲೀಷ್ ಭಾಷೆಗೆ ಭಾರತದಲ್ಲಿ ಮೊದಲಿನ ಸ್ಥಾನ ಸಲ್ಲುವುದು ಸಾಧ್ಯವಿಲ್ಲ. ಸಾವಿರಾರು ವರ್ಷಗಳಿಂದ ಅಸ್ತಿತ್ವ ದಲ್ಲಿದ್ದ ಸಮರ್ಥವಾದ ಮತ್ತು ಸುಸಂಸ್ಕೃತವಾದ ಭಾಷೆಗಳು ಇಲ್ಲಿ ಹಲವಿವೆ. ಆದುದರಿಂದ ಇಂಗ್ಲೀಷ್ ಬಿಟ್ಟರೆ ನಮಗೆ ಗತಿ ಇಲ್ಲವೆನ್ನುವಂತಿಲ್ಲ. ಶಿಕ್ಷಣವನ್ನು ಪ್ರಾದೇಶಿಕ ಭಾಷೆಗಳಲ್ಲಿಯೇ ಕೊಡುವುದರಿಂದ ಮಕ್ಕಳಿಗೆ ವಿಷಯಜ್ಞಾನ ಸ್ವಲ್ಪ ಕಾಲದಲ್ಲಿಯೇ ಸುಲಭವಾಗಿ ಆಗುವುದೆಂದು ಶಿಕ್ಷಣತಜ್ಞರ ಅಭಿಪ್ರಾಯ. ಯುರೋಪದ ಸ್ವತಂತ್ರ ರಾಷ್ಟ್ರಗಳಾದ ಫ್ರಾನ್ಸ್, ಜರ್ಮನಿ, ಇಟಲಿ, ರಷ್ಯಾ ಮೊದಲಾದ ದೇಶಗಳಲ್ಲಿ ತಮ್ಮ ತಮ್ಮ ದೇಶಭಾಷೆಗಳ ಮುಖಾಂತರವಾಗಿಯೇ ಶಿಕ್ಷಣ ಕೊಡುತ್ತಿರುವರು. ತೀರ ಸಣ್ಣ ದೇಶಗಳಾದ ಸ್ವಿಝರಲಂಡ್, ಬೆಲ್ಜಿಯಂ, ಹಾಲಂಡ್ ಮೊದಲಾದುವುಗಳಲ್ಲಿಯೂ ಕೂಡ ಅತಿ ಉಚ್ಚ ಶಿಕ್ಷಣವನ್ನೂ ಸಹ ಆಯಾ ದೇಶಗಳ ಭಾಷೆಗಳಲ್ಲಿಯೇ ಕೊಡುವ ಕಟ್ಟು ಇದೆ. ಯುರೋಪಿಯನ್ನರು ಇಂತಹ ಕಟ್ಟಾಭಿಮಾನಿಗಳು. ಇತ್ತಿತ್ತಲಾಗಿ ಸ್ವಾತಂತ್ರ್ಯವನ್ನು ಗಳಿಸಿದ ಆಯರ್ಲಂಡದವರು ಮೃತಪ್ರಾಯವಾದ ತಮ್ಮ ಕೆಲ್ಟಿಕ್ ಭಾಷೆಯನ್ನು ಪುನರುಜ್ಜೀವನಗೊಳಿಸಲು ಯತ್ನಿಸುತ್ತಿರುವರು. ತೀರ ಚಿಕ್ಕದಾದ ವೇಲ್ಸ್ ದೇಶವೂ ಕೂಡ ತನ್ನ ಭಾಷೆಯನ್ನು ಇನ್ನೂ ಉಳಿಸಿಕೊಂಡು ಬಳಸುತ್ತಿರುವುದು. ಅದರಂತೆಯೇ ನೂರಾರು ವರ್ಷಗಳಿಂದ ಇಂಗ್ಲಂಡದೊಡನೆ ಬೆರೆತುಹೋದ ಸ್ಕಾಟ್ಲಂಡ್ ದೇಶವು ತನ್ನದೇ ಆದ ಸ್ಕಾಚ್ ಭಾಷೆಯನ್ನು ಬಿಟ್ಟುಕೊಟ್ಟಿಲ್ಲ. ಈ ಎಲ್ಲ ಉದಾಹರಣೆಗಳಿಂದ ಒಂದು ಖಂಡವೆಂದು ಕರೆಯಿಸಿಕೊಳ್ಳುವಷ್ಟು ದೊಡ್ಡದಾದ ಹಾಗೂ ಸಾವಿರಾರು ವರ್ಷಗಳ ಸಾಂಸ್ಕೃತಿಕ ಪಾರಂಪರ್ಯವನ್ನು ಕಾಯ್ದುಕೊಂಡು ಬಂದ ಭಾರತವು ಈಗ ಆಂಗ್ಲಭಾಷೆಯನ್ನು ಬಿಟ್ಟು ಭಾರತದ ಒಂದು ಪ್ರಮುಖ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಿಕೊಂಡರೆ ಆಶ್ಚರ್ಯಪಡುವ ಕಾರಣವಿಲ್ಲ.

ಹಾಗಾದರೆ ಭಾರತದ ಸದ್ಯದ ಪರಿಸ್ಥಿತಿಯಲ್ಲಿ ಇಂಗ್ಲೀಷಿನ ಸ್ಥಾನವಾವುದು?

ಕಳೆದ ೧೫೦ ವರ್ಷಗಳಿಂದ ಇಂಗ್ಲೀಷ್ ನಮ್ಮಲ್ಲಿ ಬರಿಯ ಆಡಳಿತೆಯ ಭಾಷೆಯಾಗಿ ಉಳಿಯದೆ ಅದು ಜಗತ್ತಿನ ಜ್ಞಾನಭಂಡಾರದ ಬೀಗದ ಕೈಯಂತಿದೆ; ಪಾಶ್ಚಾತ್ಯರ ಸ್ವತಂತ್ರ ವಿಚಾರಸರಣಿಯ ಪ್ರವಾಹವಾಗಿದೆ. ಭರತಖಂಡದಲ್ಲಿ ಈಗ ಉಂಟಾಗಿರುವ ಜಾಗ್ರುತಿಗೆ ಇಂಗ್ಲಿಷ್ ಭಾಷೆಯು ಬಹುಮಟ್ಟಿಗೆ ಕಾರಣವಾಗಿದೆ. ಈ ಭಾಷೆಯು ಜಗತ್ತಿನ ಎಲ್ಲ ದೇಶಗಳಲ್ಲಿಯೂ ಕೆಲಮಟ್ಟಿಗೆ ನೆಲಸಿದೆ. ಈ ಭಾಷೆಯನ್ನಾಡುವ ಜನರ ಸಂಖ್ಯೆ ಬಹಳವಾಗಿದೆ. ಎಲ್ಲ ವಿಷಯದ ಮೇಲೆ ಮಹತ್ವದ ಗ್ರಂಥಗಳು ಇಂಗ್ಲೀಷ್ ಭಾಷೆಯಲ್ಲಿ ದೊರೆಯುವುವು. ಇಷ್ಟು ಉಪಯುಕ್ತವಾದ ಭಾಷೆಯನ್ನು ನಾವು ಕಳೆದುಕೊಳ್ಳುವುದು ವಿಹಿತವಲ್ಲ. ಆದುದರಿಂದ ಈ ಭಾಷೆಗೆ ನಮ್ಮ ಶಾಲೆ ಕಾಲೇಜುಗಳಲ್ಲಿ ಸ್ಥಾನವಿರತಕ್ಕದ್ದು.

ಭರತಖಂಡಕ್ಕೆ ಒಂದು ರಾಷ್ಟ್ರಭಾಷೆ ಬೇಕೆಂಬುದು ಎಲ್ಲರೂ ಒಪ್ಪಬೇಕಾದ ಮಾತು. ಈಗ ಭಾರತದಲ್ಲಿ ಪ್ರಚಲಿತವಿರುವ ಭಾಷೆಗಳ ಸಂಖ್ಯೆ ೪೦೦ ಕ್ಕೆ ಮಿಕ್ಕಿದೆ. ಅವೆಲ್ಲವುಗಳಲ್ಲಿ ಸಾಕಷ್ಟು ಸಾಹಿತ್ಯದಿಂದ ಕೂಡಿದ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಬೋಧಭಾಷೆಯಾಗುವ ಯೋಗ್ಯತೆಯುಳ್ಳ ಭಾಷೆಗಳು ೧೨ ಮಾತ್ರ. ಅವು ಯಾವುವೆಂದರೆ:—(೧) ಹಿಂದಿ, (೨) ಬಂಗಾಲಿ, (೩) ತೆಲುಗು, (೪) ಮರಾಠಿ, (೫) ತಮಿಳು, (೬) ಪಂಜಾಬಿ, (೭) ಕನ್ನಡ, (೮) ಓರಿಯಾ, (೯) ಗುಜರಾತಿ, (೧೦) ಮಲಯಾಳಮ್, (೧೧) ಆಸಾಮಿ, (೧೨) ಕಾಶ್ಮೀರಿ (ಈ ಕ್ರಮ ಆಯಾ ಭಾಷೆಯನ್ನಾಡುವ ಜನಸಂಖ್ಯೆಯ ಪ್ರಮಾಣವನ್ನನುಸರಿಸಿದೆ). ಈ ೧೨ ಭಾಷೆಗಳಲ್ಲಿ ಪ್ರಾಚೀನತೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ದೃಷ್ಟಿಯಿಂದ ತಮಿಳು, ಕನ್ನಡ, ಬಂಗಾಲಿ, ತೆಲುಗು, ಮರಾಠಿ ಈ ಭಾಷೆಗಳು 'ಹಿಂದಿ'ಗಿಂತಲೂ ಸತ್ವಯುತವಾಗಿದ್ದರೂ ಆಯಾ ಭಾಷೆಗಳನ್ನಾಡುವ ಜನರ ಸಂಖ್ಯೆಯ ದೃಷ್ಟಿಯಿಂದ ನೋಡುವುದಾದರೆ ಹಿಂದಿ ಭಾಷೆಗೆ ಪ್ರಾಮುಖ್ಯತೆ ಕೊಡಬೇಕಾಗುವುದು. ಹಿಂದುಸ್ತಾನದಲ್ಲಿ ಹಿಂದಿ ಮಾತಾಡುವವರ ಸಂಖ್ಯೆ ಸುಮಾರು ೧೨ ಕೋಟಿ ಇರುವುದು. ಈ ಸಂಗತಿಯನ್ನನುಲಕ್ಷಿಸಿಯೇ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಲಾಗಿದೆ. ಹಿಂದಿ ರಾಷ್ಟ್ರಭಾಷೆಯಾಗುವುದರಿಂದ ದಕ್ಷಿಣ ಭಾರತದಲ್ಲಿಯ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ತಡೆಯಾಗುವ ಸಂಭವವಿದೆ. ಆದರೂ ರಾಷ್ಟ್ರದ ಹಿತದ ದೃಷ್ಟಿಯಿಂದ ಹಿಂದಿಯನ್ನು ರಾಷ್ಟ್ರಭಾಷೆಯೆಂದು ಒಪ್ಪಿಕೊಳ್ಳಬೇಕಾಗಿದೆ.

ಪ್ರಾದೇಶಿಕ ಭಾಷೆಗಳಲ್ಲಿ ಮೇಲೆ ಹೇಳಿದ ೧೨ ಭಾಷೆಗಳು ವಿಶ್ವವಿದ್ಯಾನಿಲಯಗಳಲ್ಲಿ ಬೋಧಭಾಷೆಯಾಗುವ ಅರ್ಹತೆಯನ್ನು ಪಡೆದಿವೆ. ಈ ಮಾತನ್ನು ಸರ್ ರಾಧಾ ಕೃಷ್ಣನ್ ಸಮಿತಿಯು ಒಪ್ಪಿದೆ. ಆದುದರಿಂದ ನಮ್ಮ ವಿಶ್ವವಿದ್ಯಾನಿಲಯ

ಗಳಲ್ಲಿ ಕನ್ನಡವೇ ಬೋಧಭಾಷೆಯಾಗಬೇಕು, ಏಕೆಂದರೆ ಕನ್ನಡಕ್ಕೆ ಬಹು ಕಾಲದಿಂದ ಬಂದ ಸಂಸ್ಕೃತಿಯಿದೆ; ವಿಪುಲ ಸಾಹಿತ್ಯವಿದೆ; ಸತ್ವವಿದೆ; ಬೆಳೆಯುವ ಸಾಮರ್ಥ್ಯವಿದೆ.

ಹೀಗಾದುದರಿಂದ ನಮ್ಮ ವಿದ್ಯಾರ್ಥಿಗಳು ಮಾತೃಭಾಷೆಯಾದ ಕನ್ನಡ, ರಾಷ್ಟ್ರಭಾಷೆಯಾದ ಹಿಂದಿ, ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷ್ ಇವೆಲ್ಲವುಗಳನ್ನೂ ಕಲಿತು ನಿಷ್ಣಾತರಾಗಬೇಕೆಂದು ಹೇಳಿದಂತಾಯಿತು. ಈ ಎಲ್ಲ ಭಾಷೆಗಳನ್ನೂ ಮಕ್ಕಳ ಮೇಲೆ ಹೇರುವುದು ಸರಿಯಲ್ಲವೆಂದು ಕೆಲವರು ಅಭಿಪ್ರಾಯ ಪಡುವರು. ಆದರೆ ಯುರೋಪಖಂಡದ ಎಷ್ಟೋ ಪ್ರದೇಶಗಳಲ್ಲಿ ನಾಲ್ಕೈದು ಭಾಷೆಗಳನ್ನು ಕಲಿಸುವ ಪರಿಪಾಠಿ ಎಷ್ಟೋ ವರ್ಷಗಳಿಂದ ನಡೆದುಬಂದಿದೆ. ಸ್ವಿಝರಲೆಂಡ್, ಹಾಲಂಡ್, ಬೆಲ್ಜಿಯಂ ಮೊದಲಾದ ದೇಶಗಳನ್ನು ಉದಾಹರಣೆಗಾಗಿ ಹೇಳಬಹುದು.'

ಶ್ರೀಯುತರು ಕನ್ನಡದ ಕೊರತೆಗಳನ್ನೂ ಅವುಗಳ ಪರಿಹಾರವನ್ನೂ ಕೆಳಕಂಡಂತೆ ಸಂಗ್ರಹಿಸಿದ್ದಾರೆ:

'ಕನ್ನಡ ನಾಡಿನಲ್ಲಿ ಇನ್ನೂ ಬಯಲಿಗೆ ಬಾರದಿರುವ ಅನೇಕ ಪ್ರಾಚೀನ ಕೈಬರೆಹದ ಪ್ರತಿಗಳನ್ನು ಹುಳುಗಳ ಬಾಯಿಂದ ತಪ್ಪಿಸಿ ಸಂಗ್ರಹಿಸಿ, ಪ್ರತಿಮಾಡಿ ಪ್ರಕಾಶಪಡಿಸಲು ಸರ್ಕಾರವೂ ವಿಶ್ವವಿದ್ಯಾನಿಲಯಗಳೂ ತಕ್ಷಣ ಸಮಿತಿಗಳನ್ನು ನಿರ್ಮಿಸಿ ಕೆಲಸಮಾಡಿಸಬೇಕು.

ಥಿಯೋಡರ್ ಆಫ್ರಿಕ್ಟ್ ಅವರ 'ಕ್ಯಾಟಲಾಗಸ್ ಕ್ಯಾಟಲಾಗೋರಮ್' ಮಾದರಿಯಲ್ಲಿ ಎಲ್ಲ ಕೈಬರಹದ ಪ್ರತಿಗಳ ವಿವರಣಾತ್ಮಕ ಪಟ್ಟಿಗಳನ್ನೂ ತಯಾರಿಸಬೇಕು.

ವಿಶ್ವವಿದ್ಯಾನಿಲಯಗಳೂ ಸಾಹಿತ್ಯಪರಿಷತ್ತೂ ಸಮಾನವಾದ ಮತ್ತಿತರ ಸಂಸ್ಥೆಗಳೂ ಪ್ರಾಚೀನ ಕನ್ನಡಗ್ರಂಥಗಳನ್ನು ಶಾಸ್ತ್ರೀಯವಾದ ಮೂಲ, ಮಹತ್ತರ ಪಾಠಾಂತರ, ಯೋಗ್ಯವಾದ ಟಿಪ್ಪಣಿ, ಉಪಯುಕ್ತವಾದ ಪ್ರಸ್ತಾವನೆ ಇವುಗಳೊಡನೆ ಅಂದವಾಗಿ ಮುದ್ರಿಸಿ ಸುಲಭ ಬೆಲೆಗೆ ಜನಗಳಿಗೆ ದೊರಕಿಸಬೇಕು.

ಕೂಲಂಕಷವಾಗಿ ಪರಿಶೀಲಿಸಿ ಕನ್ನಡ ಭಾಷಾಸಾಹಿತ್ಯಗಳ ಚರಿತ್ರೆಯನ್ನು ಸಿದ್ಧಪಡಿಸಬೇಕು.

ಕನ್ನಡದಲ್ಲಿರುವ ಕೋಶಸಾಹಿತ್ಯವನ್ನೂ ಶಿಲಾಲೇಖಗಳನ್ನೂ ಉದ್ಗ್ರಂಥಗಳನ್ನೂ ಉಪಯೋಗಿಸಿಕೊಂಡು ಯೋಗ್ಯವಾದ ಶಬ್ದಕೋಶವನ್ನು ಸಿದ್ಧಪಡಿಸ

ಬೇಕು. ಈ ಕಾರ್ಯದಲ್ಲಿ ತೊಡಗಿರುವ ಕನ್ನಡ ಸಾಹಿತ್ಯಪರಿಷತ್ತಿಗೆ ಎಲ್ಲರೂ ಸಹಾಯಮಾಡಬೇಕು.

ವಿಶ್ವವಿದ್ಯಾನಿಲಯಗಳು ಪ್ರಾದೇಶಿಕ ಸರ್ಕಾರದ ಸಹಾಯದಿಂದ ಉತ್ತಮ ವಾದ ವಿಶ್ವಕೋಶವನ್ನು ಕನ್ನಡದಲ್ಲಿ ತಯಾರಿಸಬೇಕು.

ಅಂತರರಾಷ್ಟ್ರೀಯ ಪಾರಿಭಾಷಿಕ ಶಬ್ದಗಳನ್ನೇ ಉಳಿಸಿಕೊಂಡು ಕನ್ನಡದಲ್ಲಿ ಯೋಗ್ಯವಾದ ವೈಜ್ಞಾನಿಕ ಗ್ರಂಥಗಳನ್ನು ರಚಿಸಬೇಕು.

ಕರ್ನಾಟಕ ಇತಿಹಾಸ, ಭಾಷೆ, ಸಾಹಿತ್ಯ, ಧರ್ಮ ಮೊದಲಾದ ಕ್ಷೇತ್ರಗಳಿಗೆ ಸಂಬಂಧಪಟ್ಟಹಾಗೆ ಉಪಲಬ್ಧವಾಗಬಹುದಾದ ಎಲ್ಲ ಸಾಧನೆಗಳನ್ನೂ ಉಪಯೋ ಗಿಸಿಕೊಂಡು ಪರಿಶೋಧನೆ ನಡೆಸಿ ನಿಷ್ಪಕ್ಷಪಾತವಾದ ಫಲಿತಾಂಶಗಳನ್ನು ಪ್ರಕಾಶ ಪಡಿಸಬೇಕು. ಕನ್ನಡಗ್ರಂಥಗಳ ರಚನೆಗೂ ಪ್ರಕಟನೆಗೂ ಮಾರಾಟಕ್ಕೂ ಪ್ರತಿ ಯೊಬ್ಬರೂ ಸಹಾಯಮಾಡಬೇಕು.

ಶಿಕ್ಷಣ ಪ್ರಸಾರವು ಈಗ ಆಗುತ್ತಿರುವುದಕ್ಕಿಂತ ಹೆಚ್ಚು ವೇಗವಾಗಿ ನಡೆದು ನಿರಕ್ಷರತೆಯು ನಿರ್ಮೂಲವಾಗಬೇಕು.

ಮಕ್ಕಳ ವಯಸ್ಸು, ಗ್ರಹಣಶಕ್ತಿ, ಅಭಿರುಚಿ, ರಾಷ್ಟ್ರದ ಸಂಸ್ಕೃತಿ ಇವುಗಳಿ ಗನುಗುಣವಾಗಿ ಪಠ್ಯಪುಸ್ತಕಗಳು ರಚಿತವಾಗಿ ಕರ್ಣಾಟಕದಲ್ಲೆಲ್ಲಾ ಒಂದೇ ಮಾದರಿಯಲ್ಲಿ ಉಪಯುಕ್ತವಾಗಬೇಕು.

ವೃತ್ತಪತ್ರಿಕೆಗಳು ದೈನಂದಿನ ಸುದ್ದಿಸಮಾಚಾರಗಳ ಜೊತೆಗೆ ನಾಡಿನ ಪ್ರಾಚೀನ ಸಂಸ್ಕೃತಿ, ಕಲೆ, ಇತಿಹಾಸ, ಸಂಗೀತ ಮೊದಲಾದ ವಿಷಯಕವಾದ ವಿಮರ್ಶಾತ್ಮಕ ಪರಿಚಯಾತ್ಮಕ ಬೋಧಾತ್ಮಕ ಲೇಖನಗಳನ್ನು ಯೋಗ್ಯವಾದ ಪಂಡಿತರಿಂದ ಬರೆಯಿಸಿ ಪ್ರಕಟಿಸಬೇಕು.

ಬಾನುಲಿ ಕೇಂದ್ರಗಳು ಜನರ ಮನರಂಜನೆಯೊಂದನ್ನೇ ಗುರಿಯಾಗಿಟ್ಟುಕೊಳ್ಳದೆ ಜನತೆಯಲ್ಲಿ ಜ್ಞಾನಪ್ರಸಾರಮಾಡುವ ಹೊಣೆಯನ್ನೂ ಹೊತ್ತು ಕನ್ನಡ ಸಂಸ್ಕೃತಿ, ಧರ್ಮ, ಸಾಹಿತ್ಯ, ಇತಿಹಾಸ, ಕಲೆ, ಮೊದಲಾದ ವಿಷಯಗಳನ್ನೊಳಗೊಂಡ ಕಾರ್ಯಕ್ರಮವನ್ನು ಮೇಲಿಂದ ಮೇಲೆ ಏರ್ಪಡಿಸಬೇಕು.'

ಸಾದರ ಸ್ವೀಕಾರ

೧. ಭಾರತ ದರ್ಶನ (ಭಾಗ ೨)—ಅನುವಾದಕರು : ಶ್ರೀ ಸಂ. ವಾ. ಕೃಷ್ಣಮೂರ್ತಿ ರಾವ್ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ರಾಯಲ್ ಅ. ಪು. ೫೧೫ ; ಬೆಲೆ, ರೂ. ೫-೦-೦.

೨. ಕುಣಿಗಲ ರಾಮಶಾಸ್ತ್ರಿಗಳ ಚರಿತ್ರೆ—ಬರೆದವರು : ಶ್ರೀ ಎಂ. ಎಸ್. ಪುಟ್ಟಣ್ಣ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕ್ರೌನ್ ಅ. ಪು. ೧೪೧+iii ; ಬೆಲೆ, ರೂ. ೨-೪-೦.

೩. ಏಕಾಂಕ ನಾಟಿಕಗಳು (ಪ್ರಹಸನಗಳು)—ಲೇಖಕರು : ಶ್ರೀ ವ್ಯಾಸರಾಜಮಠದ ವಿದ್ಯಾಸಿಂಹಾಸನಾಧೀಶ್ವರರಾದ ಶ್ರೀಮದ್ವಿದ್ಯಾ ಶ್ರೀ ಪ್ರಸನ್ನತೀರ್ಥ ಶ್ರೀಪಾದಂಗಳವರು ; ಪ್ರಕಾಶಕರು : ಚಂದ್ರಿಕಾ ಪಬ್ಲಿಷಿಂಗ್ ಹೌಸ್, ವ್ಯಾಸರಾಜಪುರ ; ಕ್ರೌನ್ ಅ. ಪು. ೧೦೯ ; ಬೆಲೆ, ರೂ. ೦-೧೨-೦.

೪. ರಾಜಾ ಪುರೂರವ—ಸಂಪಾದಕರು ಮತ್ತು ಪ್ರಕಾಶಕರು : ಶ್ರೀ ಚುಳಕಿ ಗೋವಿಂದರಾಯರು, ಲಲಿತ ಸಾಹಿತ್ಯಮಾಲೆ, ಧಾರವಾಡ ; ಕ್ರೌನ್ ಅ. ಪು. ೧೨೪ ; ಬೆಲೆ, ರೂ. ೧-೪-೦.

೫. ಪರಿಹಾರ—ಬರೆದವರು : ಶ್ರೀ ದತ್ತಾತ್ರೇಯ ಕುಲಕರಣಿ ; ಪ್ರಕಾಶಕರು : ಶ್ರೀ ಚುಳಕಿ ಗೋವಿಂದರಾಯರು, ಲಲಿತ ಸಾಹಿತ್ಯಮಾಲೆ, ಧಾರವಾಡ ; ಕ್ರೌನ್ ಅ. ಪು. ೧೩೨ ; ಬೆಲೆ, ರೂ. ೧-೮-೦ ; ಉತ್ತಮಪ್ರತಿ, ರೂ. ೨-೪-೦.

೬. ದರ್ಶಕ—ಬರೆದವರು : ಶ್ರೀ ನಂದನ ; ಪ್ರಕಾಶಕರು : ಎಂ. ಎಸ್. ಅಂಡ್ ಸನ್ಸ್, ಬೆಂಗಳೂರು ೪ ; ಕ್ರೌನ್ ಅ. ಪು. ೬೯ ; ಬೆಲೆ, ರೂ. ೧-೪-೦.

೭. ಶ್ರೀಹರ್ಷನ ನಾಗಾನಂದ (ಕನ್ನಡ ಗದ್ಯಾನುವಾದ)—ಪ್ರಕಾಶಕರು : ಸಂಸ್ಕೃತ ಸಾಹಿತ್ಯಸದನ, ವಿಶ್ವೇಶ್ವರಪುರಂ, ಬೆಂಗಳೂರು ೪ ; ಕ್ರೌನ್ ಅ. ಪು. ೧೯+೧೦೦ ; ಬೆಲೆ, ರೂ. ೧-೧೨-೦.

೮. ಅರ್ಥಶಾಸ್ತ್ರ—ಬರೆದವರು : ಶ್ರೀ ಕು. ಶಿ. ಹರಿದಾಸ ಭಟ್ಟರು, ಎಂ.ಎ., ವಿದ್ವಾನ್ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕ್ರೌನ್ ಅ. ಪು. viii+೩೦೫ ; ಬೆಲೆ, ರೂ. ೫-೦-೦ ; ಲೈಬ್ರರಿ ಪ್ರತಿ, ರೂ. ೬-೮-೦.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಡ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕುಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸ ದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣ ವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿ ಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೨೮, ೨೯, ೩೦, ೩೧, ೩೨ ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿನಂತೆ ಪಡೆಯಬಹುದು. ಸಾಮಾನ್ಯ ಸಂಚಿಕೆಯ ಬೆಲೆ ನಾಲ್ಕಾಣೆ, ಎರಡು ಸಂಚಿಕೆಗಳ ಬೆಲೆ ಎಂಟಾಣೆ. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥ ಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦ ; ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
- ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
- ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ರಿಂದ ೧೯೪೭ರ ವರೆಗೆ
- ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು**(ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. ಹದಿಬದೆಯ ಧರ್ಮ—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. *ಪುರಾಣನಾಮಚೂಡಾಮಣಿ—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ತ್ವಶಾಸ್ತ್ರಸಾರ ಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. *ಆಧುನಿಕ ತತ್ತ್ವಶಾಸ್ತ್ರ ಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. *ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. *ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. *ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. *ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. *ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦. *ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. *ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್. ಬಿ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಮತ್ತು ಪುಟ್ಟಣ್ಣಚೆಟ್ಟರ ಪುದುವಟ್ಟಿನಮಾಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬⅔ ರಂತೆ ೨೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩⅓ ರಂತೆ ೨೦೦೦ ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎನ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ಧಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ವಿದ್ಯುಚ್ಛಕ್ತಿಯ ಉಪಯೋಗ—ಮ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೨. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೩. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೪. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—
ಬೆಲೆ ರೂ. ೧—೦—೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧—೮—೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧—೮—೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦—೧೨—೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, M.A.
Published by The University of Mysore, Mysore. Printed by Hugh Warren at the Wesley Press and Publishing House, Mysore City